ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 20 | ಪುಟ 16 | ಮೇ 8-14, 2017 | ರೂ. 10/-

web: www.janashakthi.co.in e-mail : js_weekly@yahoo.com

ಸಂಘಿ ದಾಳಿಗೊಳಗಾದ

ನಬುರನ್ ದೇಬ್

ತ್ರಿಪುರಾ ಎಸ್‌ಎಫ್‌ಐ ಕಾರ್ಯದರ್ಶಿ









ಐಕ್ಯತೆಯ ಸಂಭ್ರಮದ ಮೇ ದಿನ



ಕೊರಗರ ಔತಣಕ್ಕೆ ಭಜರಂಗಿಗಳ ಕಲ್ಲು



BEML ಉಳಿಸಿ



ಬ್ಯಾಂಕ್ ಲೂಟಿಕೋರರಿಗೆ ಒಡೆತನ



ಮೋದಿ ಪಾಕಿಸ್ತಾನ ಧೋರಣೆ ವೈಫಲ್ಯ

ಅಂತರಜಾತಿ ವಿವಾಹಿತರ ಸಮಾವೇಶ

12 ಗಂಟೆ ಕೆಲಸ ಮಾಡಬೇಕೆನ್ನುವ ಸರಕಾರದಿಂದ ಮೇದಿನಾಚರಣೆಯ ಆಹ್ವಾನ ! : ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಬಹಿಷ್ಕಾರ

'ಮೇ 1 ರಂದು ನವದೆಹಲಿಯಲ್ಲಿ ಏರ್ಪಡಿಸುತ್ತಿರುವ ಅಂತರ್ರಾಷ್ಟ್ರೀಯ ಕಾರ್ಮಿಕ ದಿನದ ಆಚರಣೆಯಲ್ಲ ಭಾಗವಹಿಸಬೇಕು' ಎಂದು ಈ ಬಾರಿ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ ಕೇಂದ್ರೀಯ ಕಾರ್ಮಿಕ ಸಂಘಟನೆಗಳಿಗೆ ಆಹ್ವಾನ ಕಳಿಸಿತ್ತು. ಆ ಸಮಾರಂಭದಲ್ಲಿ ನೌಕರರ ಭವಿಷ್ಯ ನಿಧಿ/ನೌಕರರ ರಾಜ್ಯ ವಿಮಾ ಯೋಜನೆಗಳನ್ನು ಆರಂಭಿಸುವ ಕಾರ್ಯಕ್ರಮ ಇದೆ ಎಂದೂ ಹೇಳಲಾಯಿತು.

ಆದರೆ ಬಿಎಂಎಸ್ ಬಿಟ್ಟು ಬೇರೆಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಇದನ್ನು ಬಹಿಷ್ಕರಿಸಲು ನಿರ್ಧರಿಸಿದವು.

ಮೇ ದಿನ ಎಂಟು ಗಂಟೆಗಳ ಕೆಲಸದ ದಿನಕ್ಕಾಗಿ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ ಹೇಮಾರ್ಕೆಟ್ ಹುತಾತ್ಮರ ಸ್ಮರಣೆಯ ದಿನವಾಗಿದ್ದು, ಅದನ್ನು ಮತ್ತೆ ಕೆಲಸದ ದಿನವನ್ನು 8ರಿಂದ 12 ಗಂಟೆಗಳಿಗೆ ಹೆಚ್ಚಿಸುವ ಕಾನೂನು ತರಲು ಪ್ರಯತ್ನಿಸುತ್ತಿರುವ ಈ ಸರಕಾರ ಆಚರಿಸುತ್ತದೆ ಎಂಬುದು ದೇಶದ ಕಾರ್ಮಿಕ ವರ್ಗಕ್ಕೆ ಮಾಡುತ್ತಿರುವ ಮೋಸವಲ್ಲದೆ ಬೇರೇನೂ ಅಲ್ಲವಾದ್ದರಿಂದ ಈ ಸಭೆಯನ್ನು ಬಹಿಷ್ಕರಿಸಲು ನಿರ್ಧರಿಸಿರುವುದಾಗಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಮೇದಿನ ಜಗತ್ತಿನ ಎಲ್ಲೆಡೆಗಳಲ್ಲಿ ದುಡಿಯುವ ಜನರ ಹಕ್ಕುಗಳಿಗಾಗಿ ಹೋರಾಟಕ್ಕೆ ಬದ್ಧತೆಯನ್ನು ಪುನರುಚ್ಚರಿಸಿರುವ ದಿನ ಎಂದು ಕಾರ್ಮಿಕ ಸಂಘಟನೆಗಳು ಪರಿಗಣಿಸಿವೆ, ಇದಕ್ಕಾಗಿ ದೇಶಾದ್ಯಂತ ರ್‍ಯಾಲಿಗಳನ್ನು ಯೋಜಿಸಲಾಗಿದೆ.

ಎನ್‌ಡಿಎ ಸರಕಾರ 2014ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ 'ವ್ಯಾಪಾರವನ್ನು ಸುಗಮಗೊಳಿಸು' ಹೆಸರಲ್ಲಿ ಭಾರತದ ದುಡಿಯುವ ಜನಗಳು ಹೋರಾಟಗಳಿಂದ ಗಳಿಸಿರುವ ಹಕ್ಕುಗಳ ಮೇಲೆ ಸತತವಾಗಿ ದಾಳಿ ಮಾಡುತ್ತಲೇ ಇದೆ. ಕಾರ್ಮಿಕ ವರ್ಗ ಹಲವಾರು ಹೋರಾಟಗಳಿಂದ ತಂದಿದ್ದ ತ್ರಿಪಕ್ಷೀಯ ಸಮಾಲೋಚನೆಗಳ ವ್ಯವಸ್ಥೆಯನ್ನು ಅಪಹಾಸ್ಯಕ್ಕೆ ಒಳಪಡಿಸಿದೆ ಎಂಬ ಸಂಗತಿಯತ್ತ ಈ ಹೇಳಿಕೆ ಗಮನ ಸೆಳೆದಿದೆ.

ಈಗಾಗಲೇ 71% ಕಾರ್ಮಿಕರನ್ನು 14 ಮೂಲಭೂತ ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರ ತಳ್ಳುವ ಬದಲಾವಣೆಗಳನ್ನು ತರುತ್ತಿದೆ. ಇದರಲ್ಲಿ ಕನಿಷ್ಟ ವೇತನ, ಭವಿಷ್ಯ ನಿಧಿ, ಇಎಸ್‌ಐ ಮುಂತಾದವುಗಳೂ ಸೇರಿವೆ. ಇವು ಈಗ ಕೇವಲ ಮೂರು ಶೇಕಡಾ ಕಾರ್ಮಿಕರಿಗೆ ಮಾತ್ರ ಅನ್ವಯವಾಗುತ್ತಿರುವಾಗ, 'ಸಾಮಾಜಿಕ ಸುರಕ್ಷಿತತೆ-ಯ ಸಂಹಿತೆ'ಯ ಹೆಸರಲ್ಲಿ ಭವಿಷ್ಯನಿಧಿ/ಇಎಸ್‌ಐನ್ನು ಕಳಚಿ ಹಾಕುತ್ತಿರುವಾಗ ಇವುಗಳ ಸ್ಕೀಮುಗಳನ್ನು ಆರಂಭಿಸಲಾಗುತ್ತಿದೆ ಎಂಬುದು ಕೇವಲ ಒಂದು ತಮಾಷೆಯಾಗಿದೆ ಎಂದು ಈ ಹೇಳಿಕೆ ವರ್ಣಿಸಿದೆ.

ಮೇದಿನದ ಸಂದರ್ಭದಲ್ಲಿ ದೇಶದ ದುಡಿಯುವ ಜನರಿಗೆ ಶುಭಾಶಯಗಳನ್ನು ಕೋರುತ್ತ ಸರಕಾರದ ಕಾರ್ಮಿಕ -ವಿರೋಧಿ ಧೋರಣೆಗಳ ವಿರುದ್ಧ ಹೋರಾಡುವುದನ್ನು, ಮತ್ತು ಒಂದು ಸರಿಯಾದ ದಾರಿಯಲ್ಲಿ ಸರಕಾರದೊಂದಿಗೆ ಸಂವಾದದಲ್ಲಿ ತೊಡಗುವುದನ್ನು ಮುಂದುವರಿಸಲಾಗುವುದು ಎಂದು ಈ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಹೇಳಿವೆ.

ಪೆಹ್ಲೂ ಖಾನ್ ನೆನಪಿನಲ್ಲಿ ಎಐಕೆಎಸ್ ಕೋಮು ಸಾಮರಸ್ಯ ದಿನಾಚರಣೆ

ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕರೆಯ ಮೇರೆಗೆ ರಾಜಸ್ತಾನದಲ್ಲಿ 'ಗೋರಕ್ಷಕ'ರೆಂದು ಹೇಳಿಕೊಳ್ಳುವವರ ಆಕ್ರಮಣಕ್ಕೆ ಬಲಿಯಾದ ಹರ್ಯಾಣದ ರೈತ ಪಹ್ಲೂ ಖಾನ್ ಕುಟುಂಬದೊಂದಿಗೆ ಸೌಹಾರ್ದ ಸೂಚಿಸಲು ಎಪ್ರಿಲ್ 30ರಂದು ದೇಶಾದ್ಯಂತ ಕೋಮು ಸಾಮರಸ್ಯದ ದಿನವನ್ನು ಆಚರಿಸಲಾಯಿತು. ಸಿಐಟಿಯು, ಎಐಡಿಡಬ್ಲ್ಯುಎ, ಎಸ್‌ಎಫ್‌ಐ, ಡಿವೈಎಫ್‌ಐ, ಎಐಎಡಬ್ಲ್ಯುಯು ಮತ್ತಿತರ ಪ್ರಗತಿಪರ ಸಂಘಟನೆಗಳು, ವ್ಯಕ್ತಿಗಳು ಇದರಲ್ಲಿ ಭಾಗವಹಿಸಿದರು. ಪೆಹ್ಲು ಖಾನ್ ಊರು ನುಹ್‌ನಲ್ಲಿ ಆ ಹಳ್ಳಿಯ ನೂರಾರು ಜನರು ಮತ್ತು ಇತರರು ಭಾಗವಹಿಸಿದರು.

ಪೆಹ್ಲೂ ಖಾನ್ ಕುಟುಂಬಕ್ಕೆ ಪರಿಹಾರ ನೀಡಬೇಕೆಂಬ ಆಗ್ರಹವನ್ನು ಹರ್ಯಾಣ ಅಥವ ರಾಜಸ್ತಾನ ಸರಕಾರ ಇದುವರೆಗೆ ಒಪ್ಪದಿದ್ದರೂ ಎಐಕೆಎಸ್ ಆ ಕುಟುಂಬದ ನೆರವಿಗೆ ಮುಂದಾಗಿದೆ, ಈ ದಿನದಂದು ಈ ಕುಟುಂಬದ ಪರಿಹಾರ ನಿಧಿಗೆ ಕೊಡುಗೆಗಳನ್ನು ಸಂಗ್ರಹಿಸಲಾಯಿತು.

ಆಳುವವರ ಕಾರ್ಪೊರೇಟ್ ದಾನಿಗಳ ಹಿತರಕ್ಷಣೆಗೆ ಗೃಹ ಮಂತ್ರಾಲಯ ಆದಿವಾಸಿ ಹೋರಾಟಗಳ ಹೆಸರುಗೆಡಿಸುತ್ತಿದೆ:ಪ್ರತಿಷ್ಠಿತ ನಾಗರಿಕರ ಹೇಳಿಕೆ

ಕೇಂದ್ರ ಗೃಹ ಮಂತ್ರಾಲಯದ 2016-17 ವಾರ್ಷಿಕ ವರದಿ ಒಡಿಶಾದ 'ನಿಯಮಗಿರಿ ಸುರಕ್ಷಾ ಸಮಿತಿ'(ಎನ್‌ಎಸ್‌ಎಸ್) ಮತ್ತು ಝಾರ್ಖಂಡ್‌ನ ವಿಸ್ಥಾಪನ್ ವಿರೋಧಿ ಜನ ವಿಕಾಸ್ ಆಂದೋಲನ (ವಿವಿಜೆವಿಎ) ನಿಷೇಧಿತ ಮಾವೋವಾದಿ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿರುವಂತ ಆಂದೋಲನಗಳು ಎಂದು ಹೇಳಿದೆ.

ಇದು ಆಧಾರಹೀನ ಹೇಳಿಕೆ, ಇತ್ತೀಚೆಗೆ ರಾಜ್ಯಸಭೆಯ ಅಭಿಪ್ರಾಯವನ್ನು ಬದಿಗೊತ್ತಲು 'ಹಣ ಮಸೂದೆ'ಎಂದು ಸಂಸತ್ತಿನಲ್ಲಿ ಮಂಡಿಸಿದ ಹಣಕಾಸು ಮಸೂದೆ, 2017ರಲ್ಲಿ ಕಂಪನಿ ಕಾಯ್ದೆ, 2013ಕ್ಕೆ ತಂದಿರುವ ತಿದ್ದುಪಡಿಯ ಒಂದು ಪರಿಣಾಮ ಎಂದು ಪ್ರಖ್ಯಾತ ಡಾಕ್ಯುಮೆಂಟರಿ ಚಿತ್ರ ನಿರ್ದೇಶಕ ಆನಂದ ಪಟವರ್ಧನ್, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್, ಸಿಪಿಐ(ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಪಾಟ್ನಾದ ಟಾಕ್ಸಿಕ್ ವಾಚ್ ಅಲೈಯನ್ಸ್‌ನ ಡಾ.ಗೋಪಾಲ ಕೃಷ್ಣ, ಜೆಎನ್‌ಯು ಅರ್ಥಶಾಸ್ತ್ರದ ಪ್ರಾಧ್ಯಾಪಕಿ ಪ್ರೊ. ಜಯತಿ ಘೋಷ್, ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆಯ ಮುಖಂಡರಾದ ಕವಿತಾ ಕೃಷ್ಣನ್, ದಿಲ್ಲಿ ಸ್ಕೂಲ್ ಆಫ್ ಇಕನಾಮಿಕ್ಸ್‌ನ ಪ್ರೊ. ನಂದಿನಿ ಸುಂದರ್ ಮತ್ತಿತರ ಪ್ರತಿಷ್ಠಿತ ನಾಗರಿಕರು ಒಂದು ಹೇಳಿಕೆಯಲ್ಲಿ ಆಪಾದಿಸಿದ್ದಾರೆ.

ಇದು ಜನತೆಯ ಹಕ್ಕುಗಳ ಹೋರಾಟಗಳನ್ನು ನಿಷೇಧಿತ ಸಂಘಟನೆಗಳೊಂದಿಗೆ ಜೋಡಿಸಿ ಅವುಗಳ ಹೆಸರಗೆಡಿಸುವ ಪ್ರಯತ್ನ ,ವಾಸ್ತವವಾಗಿ ಸರಕಾರ ಈ ಮೂಲಕ ರಾಜಕೀಯ ಪಕ್ಷಗಳ ಅನಾಮಧೇಯ ಕಾರ್ಪೊರೇಟ್ ದಾನಿಗಳ ಹಿತ ರಕ್ಷಿಸಲು ಈ ರೀತಿ ಸುಳ್ಳು ಮಾಹಿತಿಯನ್ನು ಹರಡಿಸುತ್ತಿದೆ ಎಂದು ಈ ಪ್ರತಿಷ್ಠಿತರು ಅಭಿಪ್ರಾಯ ಪಟ್ಟಿದ್ದಾರೆ.


ನಿಯಮಗಿರಿ ಸುರಕ್ಷಾ ಸಮಿತಿ ಒಡಿಶಾದ ಬುಡಕಟ್ಟು ಪ್ರದೇಶಗಳಲ್ಲಿ ನೆಲೆಸಿರುವವರ ಹಿತವನ್ನು ಕಡೆಗಣಿಸಿ ಗಣಿಗಾರಿಕೆ ನಡೆಸಿ ಲಾಭ ದೋಚುತ್ತಿರುವವರ ವಿರುದ್ಧ ಹೋರಾಟ ನಡೆಸುತ್ತಿರುವ ಸಂಘಟನೆಯಾದರೆ, ವಿವಿಜೆವಿಎ ಜಾರ್ಖಂಡ್‌ನ ಸರಕಾರ ಛೋಟಾನಾಗ್ಪುರ ಮತ್ತು ಸಂತಾಲ್ ಪರಗಣ ಗೇಣಿ ಕಾನೂನಿಗೆ ಆದಿವಾಸಿ-ವಿರೋಧಿ ತಿದ್ದುಪಡಿಗಳು ಮತ್ತಿತರ ಆದಿವಾಸಿ-ಪರ ಪ್ರಶ್ನೆಗಳ ಮೇಲೆ ಹೋರಾಡುತ್ತಿರುವ ಸಂಘಟನೆ.

ಇವುಗಳ ವಿರುದ್ಧ ಅಪಪ್ರಚಾರ ನಡೆಸುತ್ತಿರುವುದಕ್ಕೂ ಬಿಜೆಪಿ ಮತ್ತು ಕಾಂಗ್ರೆಸ್ ವಿದೇಶಿ ಕಂಪನಿಯೊಂದರಿಂದ ವಿದೇಶಿ ವಂತಿಗೆ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ) ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆ(ಆರ್‌ಪಿಎ) ಗಳನ್ನು ಉಲ್ಲಂಘಿಸಿ ವಂತಿಗೆ ಪಡೆದಿವೆ ಎಂದು 2014ರಲ್ಲಿ ದಿಲ್ಲಿ ಹೈಕೋರ್ಟ್ ತೀರ್ಪು ಕೊಟ್ಟಿರುವುದಕ್ಕೂ ಸಂಬಂಧವಿದೆ. ಈ ಪಕ್ಷಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಹೈಕೋರ್ಟ್ ಚುನಾವಣಾ ಆಯೋಗಕ್ಕೆ ಹೇಳಿತ್ತು. ಎಫ್‌ಸಿಆರ್‌ಎ ಕಾಯ್ದೆಯ ಜಾರಿ ಮಾಡುವ ಹೊಣೆ ಕೇಂದ್ರ ಗೃಹ ಮಂತ್ರಾಲಯದ್ದು. ಆದರೆ ಅದು ತನ್ನ ಹೊಣೆ ನಿಭಾಯಿಸುವ ಬದಲು ಈ ಪಕ್ಷಗಳ ಮತ್ತು ಅವರ ದಾನಿಗಳ ಹಿತರಕ್ಷಣೆಯ ಕೆಲಸಕ್ಕೆ ಇಳಿಯಿತು. ಆ ವಿದೇಶಿ ಕಂಪನಿ ಭಾರತೀಯ ಕಂಪನಿ ಎಂದು ನಿರೂಪಿಸಲಾಗುವಂತೆ ಹಿಂದಿನಿಂದ ಅನ್ವಯವಾಗುವ ತಿದ್ದುಪಡಿಯನ್ನು ತರಲಾಯಿತು.

ಈಗ ರಾಜ್ಯಸಭೆಯ ಪರೀಕ್ಷಣೆಯಿಂದ ತಪ್ಪಿಸಿಕೊಂಡಿರುವ ಹಣಕಾಸು ಮಸೂದೆ, 2017 ಇಂತಹ ವಂತಿಗೆಗಳನ್ನು ಕೊಡುವವರ ಹೆಸರು ಹೇಳಬೇಕಾಗಿಲ್ಲ ಎಂಬ ತಿದ್ದುಪಡಿ ತಂದು ಆದಿವಾಸಿ ಮತ್ತು ಗಣಿಗಾರಿಕೆ ಪ್ರದೇಶಗಳಲ್ಲಿ ಈ ಅನಾಮಧೇಯ ಕಾರ್ಪೊರೇಟ್‌ಗಳು ಹಿತಗಳನ್ನು ರಕ್ಷಿಸಿದೆ. ಅದಕ್ಕಾಗಿ ಮಾವೋವಾದಿಗಳಿಗೆ ಸಲ್ಲದ ಕೀರ್ತಿ ಕೊಡಿಸಲೂ ಅದು ಹಿಂಜರಿದಿಲ್ಲ ಎಂದು ಈ ಹೇಳಿಕೆ ಅಭಿಪ್ರಾಯ ಪಟ್ಟಿದೆ.

ಎಪ್ರಿಲ್ 2013ರಲ್ಲಿ ಸುಪ್ರಿಂ ಕೋರ್ಟ್ ಬುಡಕಟ್ಟು ಜನಗಳ ಅನುಮತಿ ಪಡೆಯಲು ಗ್ರಾಮ ಸಭಾ ಸಭೆಗಳನ್ನು ನಡೆಸಲು ಆದೇಶಿಸಿದಾಗ ಮಾವೋವಾದಿಗಳು ಅದನ್ನು ಬಹಿಷ್ಕರಿಸಲು ಕರೆ ನೀಡಿದ್ದರು. ಆದರೆ ಬುಡಕಟ್ಟು ಜನರು ಆ ಕರೆಯನ್ನು ತಿರಸ್ಕರಿಸಿದರು ಎಂಬ ಸಂಗತಿಯತ್ತ ಗಮನ ಸೆಳೆಯುತ್ತ ಗೃಹ ಮಂತ್ರಾಲಯದ ವರದಿಯಲ್ಲಿನ ಸುಳ್ಳು ಮಾಹಿತಿಯನ್ನು ವರದಿಯಿಂದ ತೆಗೆಯಬೇಕು ಎಂದು ಈ ಪ್ರತಿಷ್ಠಿತ ನಾಗರಿಕರು ಆಗ್ರಹಿಸಿದ್ದಾರೆ.

ಮಾತೆಂದರೆ ಇದು



ರಾಜಸ್ತಾನದ ಮುಖ್ಯಮಂತ್ರಿಗಳಿಗೆ ನಿವೃತ್ತ ಐಎಎಸ್ ಅಧಿಕಾರಿಗಳ ಬಹಿರಂಗ ಪತ್ರ : ಪೆಹ್ಲೂ ಖಾನ್ ಕೊಲೆಗಾರರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ವಿಳಂಬ ಉತ್ತಮ ಆಳ್ವಿಕೆಯ ಅಪಹಾಸ್ಯ

ರಾಜಸ್ತಾನ ಅಲವರ್‌ನಲ್ಲಿ ಪೆಹ್ಲೂ ಖಾನ್‌ರನ್ನು ಕೊಚ್ಚಿ ಹಾಕಿದ್ದು ಆತಂಕಕಾರಿ ಸಂಗತಿ ಹಾಗೂ ಈ ಘಟನೆಯ ನಂತರ ಸರಕಾರ ಮಾಡಬೇಕಾದ್ದನ್ನು ಮಾಡದಿರುವುದು, ಮಾಡಬಾರದ್ದನ್ನು ಮಾಡಿರುವುದು, ಎಲ್ಲ ಅಪರಾಧಿಗಳನ್ನು ಬಂಧಿಸುವಲ್ಲಿ ವಿಳಂಬ ಮತ್ತು ಎದ್ದು ಕಾಣುವ ಹಿಂದೇಟು ದಿಗಿಲು ಉಂಟು ಮಾಡುವ ವಿಷಯ ಎಂದು 23 ಮಾಜಿ/ನಿವೃತ್ತ ಐಎಎಸ್ ಅಧಿಕಾರಿಗಳು ರಾಜಸ್ತಾನದ ಮುಖ್ಯಮಂತ್ರಿಗಳಿಗೆ ಬರೆದ ಬಹಿರಂಗ ಪತ್ರದಲ್ಲಿ ಹೇಳಿದ್ದಾರೆ.

ಹಸುಗಳು, ಗೋಮಾಂಸ ಇತ್ಯಾದಿಗಳ ಬಗ್ಗೆ ವಿಭಿನ್ನ ಭಾವನೆಗಳು ಬಲವಾಗಿದ್ದರೂ, ಯಾವುದೋ ಸ್ವಯಂ ನೇಮಿತ ಕಾವಲುಕೋರ ಗುಂಪು ಈ ರೀತಿ ಹತ್ಯೆಯಲ್ಲಿ ತೊಡಗಿರುವುದು ನಮ್ಮ ದೇಶವನ್ನು ಕಟ್ಟಿರುವ ಮೂಲ ನೀತಿಗಳನ್ನು ಬುಡಮೇಲು ಮಾಡುವಲ್ಲಿ ನಾವೆಷ್ಟು ಯಶಸ್ವಿಯಾಗಿದ್ದೇವೆ ಎಂಬುದನ್ನು ತೋರಿಸುತ್ತದೆ ಎಂದು ಈ ಹಿರಿಯ ಅಧಿಕಾರಿಗಳು ಖೇದ ವ್ಯಕ್ತಪಡಿಸಿದ್ದಾರೆ. ಇಂತಹ ಕಾವಲುಕೋರತನವನ್ನು ತಡೆಯದಿದ್ದರೆ, ಇದು ನಗ್ನ ಹಿಂಸಾಚಾರಕ್ಕೆ, ಕಾನೂನಿನ ಬಹಿರಂಗ ಅವಗಣನೆಗೆ ದಾರಿ ಮಾಡಿಕೊಡುತ್ತದೆ, ಇದನ್ನು ತಪ್ಪಿಸಿ ಸಂವಿಧಾನದ ಅಂಶಗಳಿಗೆ ಅವಗಣನೆ ಯಾಗದಂತೆ ನೋಡಿಕೊಳ್ಳುವುದು ಯಾವುದೇ ಪ್ರಜಾಪ್ರಭುತ್ವ ಸರಕಾರದ ಹೊಣೆಗಾರಿಕೆ ಎಂದು ಇವರು ರಾಜಸ್ತಾನದ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಇದೊಂದು ಮತಿಹೀನ ಭೀಕರ ಕೃತ್ಯವಾದರೂ ಇದಾದ ನಂತರದ ವೆಳವಣಿಗೆಗಳು ಸರಕಾರದ ಅದಕ್ಷತೆ, ಅಪ್ರಯೋಜಕತೆಯನ್ನು ಬಿಂಬಿಸುತ್ತವೆ, ರಾಜಸ್ತಾನ ಮತ್ತು ಕೇಂದ್ರ ಸರಕಾರದಲ್ಲಿನ ಕೆಲವರು ಈ ಘಟನೆಯ ಭೀಕರತೆಯನ್ನು ನಿರಾಕರಿಸಿರುವುದು, ಅಥವ ಅದರ ಗಂಭೀರತೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿರುವುದು ಅತ್ಯಂತ ದೂಷಣೀಯ. ಈ ಸಂದರ್ಭದಲ್ಲಿ ತಕ್ಷಣವೇ ಕ್ರಮಕೈಗೊಳ್ಳದಿದ್ದರೆ ಅದು ಉತ್ತಮ ಆಳ್ವಿಕೆಯ ಅಪಹಾಸ್ಯವಾಗುತ್ತದೆ, ಅದು ಅನಿವಾರ್ಯವಾಗಿ ಅರಾಜಕತೆಯತ್ತ ಹೋಗುವ ದಾರಿ ಎಂದು ಈ ಅಧಿಕಾರಿಗಳು ಎಚ್ಚರಿಸಿದ್ದಾರೆ.

ತಕ್ಷಣವೇ ಎಲ್ಲ ಅಪರಾಧಿಗಳನ್ನು ಬಂಧಿಸಬೇಕು, ಗೋರಕ್ಷಣೆಯ ಹೆಸರಲ್ಲಿ ಕಾವಲುಕೋರತನವನ್ನು ಕೊನೆಗೊಳಿಸಬೇಕು ಮತ್ತು ಕರ್ತವ್ಯ ನಿರ್ವಹಣೆಯಲ್ಲಿ ಲೋಪ ಮಾಡಿರುವ ಎಲ್ಲ ಪೋಲೀಸ್ ಮತ್ತು ಆಡಳಿತ ಸಿಬ್ಬಂದಿಯನ್ನು ಶಿಕ್ಷಿಸಬೇಕು ಎಂದು ಈ 23 ಐಎಎಸ್ ಅಧಿಕಾರಿಗಳು ರಾಜಸ್ತಾನದ ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ನಿರ್ನಾಮ ಮಾಡುವ ಹುನ್ನಾರ-ಆದಿವಾಸಿ ಅಧಿಕಾರ ವೇದಿಕೆಯ ಖಂಡನೆ

ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕಾರ್ಮಿಕ ಬಜೆಟ್‌ಗೆ ನೀಡಿರುವ ಹಣದಲ್ಲಿ ತೀವ್ರ ಕಡಿತ ಮಾಡಿರುವುದರಿಂದ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಉದ್ಯೋಗ ನಿರ್ಮಾಣವನ್ನು ಕೇವಲ 34 ದಿನಗಳಿಗೆ ಸೀಮಿತಗೊಳಿಸುವಂತಾಗಿದೆ. ಈ ಮೂಲಕ ನಿರುದ್ಯೋಗಿ ಗ್ರಾಮೀಣ ಬಡವರಿಗೆ ವರ್ಷದಲ್ಲಿ ಕನಿಷ್ಟ ನೂರು ದಿನಗಳ ಉದ್ಯೋಗದ ಹಕ್ಕು ನೀಡುವ ಮೂಲಕ ಕನಿಷ್ಟ ಭದ್ರತೆಯನ್ನು ಒದಗಿಸಿರುವ ಮನರೇಗ ಕಾಯ್ದೆಯನ್ನು ವ್ಯವಸ್ಥಿತವಾಗಿ ನಿರ್ನಾಮ ಮಾಡುವ ಹುನ್ನಾರ ಈ ಸರಕಾರದ್ದು ಎಂದು 'ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್'(ಎಎಆರ್‌ಎಂ) ಹೇಳಿದೆ.

ತ್ರಿಪುರಾದಲ್ಲಿ ಸರಾಸರಿ 92 ದಿನಗಳ ಉದ್ಯೋಗಗಳನ್ನು ಕಲ್ಪಿಸಲಾಗಿತ್ತು. ಇದು ದೇಶದಲ್ಲಿಯೇ ಅತಿ ಹೆಚ್ಚು . ಆದರೆ ಈಗ ಅದಕ್ಕೆ ಹಣ ಕಡಿತ ಮಾಡಿ 34 ದಿನಗಳಿಗೆ ಇಳಿಸಲಾಗುತ್ತಿದೆ. ಜಿಯೋ-ಟ್ರಾಕಿಂಗ್ ತಂತ್ರಜ್ಞಾನದ ಮೂಲಕ ಕಳೆದ ಐದು ವರ್ಷಗಳ ಕೆಲಸವನ್ನು ಅಂದಾಜು ಮಾಡಿ ಹೀಗೆ ಮಾಡಲಾಗಿದೆ ಎಂಬುದು ಸರಕಾರದ ಸಬೂಬು. ಮನರೇಗ ಕಾಮಗಾರಿಗಳಲ್ಲಿ ಬಹಳಷ್ಟನ್ನು ಈ ವಿಧಾನದ ಮೂಲಕ ಅಂದಾಜು ಮಾಡಲು ಸಾಧ್ಯ ಎಂಬುದು ಅಪಹಾಸ್ಯಕರ. ವಾಸ್ತವವಾಗಿ ಇದರ ಹಿಂದಿರುವ ದುರುದ್ದೇಶವೆಂದರೆ ಈ ವಿಷಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಸಂತೃಪ್ತಿ ಉಂಟು ಮಾಡುವುದು, ಮತ್ತು ಕ್ರಮೇಣ ಈ ಕಾಯ್ದೆಯನ್ನೇ ನಿರ್ನಾಮ ಮಾಡುವುದು.

ಇದು ಕೇವಲ ತ್ರಿಪುರಕ್ಕೆ ಸಂಂಧಿಸಿದ ಪ್ರಶ್ನೆ ಅಲ್ಲ ಎಂದಿರುವ ಎಎಆರ್‌ಎಂ, ಈ ಕಾಯ್ದೆಯ ಅಡಿಯಲ್ಲಿ ಮಾಡಿದ ಕೆಲಸಕ್ಕೆ ಕೂಲಿ ಪಾವತಿಯನ್ನೂ ಸಕಾಲದಲ್ಲಿ ಕೊಡದೆ ತೀವ್ರ ಕಡಿತ ಮಾಡುತ್ತಿರುವುದು ಪಿತೂರಿಯನ್ನು ಸೂಚಿಸುತ್ತದೆ ಎಂದಿದೆ.

ಎಎಆರ್‌ಎಂ ಈ ಸಂಗತಿಯನ್ನು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಎತ್ತುತ್ತದೆ, ರಾಷ್ಟ್ರೀಯ ಪರಿಶಿಷ್ಟ ಜಾತಿ/ಬುಡಕಟ್ಟು ಆಯೋಗ ಮತ್ತು ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಗಮನಕ್ಕೂ ತರುತ್ತದೆ ಎನ್ನುತ್ತ ಈ ಜನ-ವಿರೋಧಿ ಕ್ರಮದ ವಿರುದ್ಧ ಪ್ರತಿಭಟಿಸಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಮತ್ತು ಎಲ್ಲ ಪ್ರಜಾಪ್ರಭುತ್ವವಾದಿಗಳಿಗೂ ಕರೆ ನೀಡಿದೆ.

ಕೊರಗರ ಔತಣಕ್ಕೆ ಭಜರಂಗಿಗಳ ಕಲ್ಲು – ಜಿ.ವಿ.ಶ್ರೀರಾಮರೆಡ್ಡಿ

ಸಂಪಾದಕೀಯ

ಮದುವೆ ನಿಶ್ಚಿತಾರ್ಥ ಪ್ರಯುಕ್ತ ಬಾಡೂಟದ ಔತಣದ ಸಂಭ್ರಮಕ್ಕೆ ಸಿದ್ಧರಾಗುತ್ತಿದ್ದ ಕೊರಗ ಸಮುದಾಯದ ಮನೆಯೊಂದರ ಮೇಲೆ ನಡುರಾತ್ರಿ ಭಜರಂಗ ದಳ ಮತ್ತು ವಿಶ್ವ ಹಿಂದೂ ಪರಿಷತ್ತಿನ 50ಕ್ಕೂ ಹೆಚ್ಚು ಗೂಂಡಾಗಳು ದಾಳಿ ನಡೆಸಿದ ದಾರುಣ ಪ್ರಕರಣ ವರದಿಯಾಗಿದೆ. ಈ ಪ್ರಕರಣ ನಡೆದಿರುವುದು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹೊಸನಾಡ ಪ್ರದೇಶದ ಮೊವಾಡಿ ಗ್ರಾಮದಲ್ಲಿ. ಹೆಂಗಸರು ಮಕ್ಕಳು ಇದ್ದ ಮನೆಗಳಿಗೆ ಈ ಗೂಂಡಾ ಪಡೆ ನುಗ್ಗಿ ಮನೆಯಲ್ಲಿದ್ದವರನ್ನು ಹೊರಗೆಳೆದು ಹಲ್ಲೆ ನಡೆಸಿತು. ಕುಟುಂಬದ ಯಜಮಾನಿಯಾದ ಮಹಿಳೆಯನ್ನು ಸಹ ಬಿಡದೆ ಆಕೆಗೆ ಅತ್ಯಂತ ಅವಾಚ್ಯ ಶಬ್ದಗಳಲ್ಲಿ ಬೈದು ಮೂರು ರಸ್ತೆ ಕೂಡುವ ಕಡೆ ನಿನ್ನ ಮೇಲೆ ಅತ್ಯಾಚಾರ ನಡೆಸುತ್ತೇವೆ ಎಂಬ ಬೆದರಿಕೆಯನ್ನೂ ಒಡ್ಡಿತು. ಮನೆಯಲ್ಲಿ ಮಲಗಿದ್ದ ವಯೋವೃದ್ಧರೋರ್ವರನ್ನು ಸಹ ಹೊರಗೆಳೆದು ಹಿಂಸೆ ನೀಡಿತು. ಕುಟುಂಬದ ಯಜಮಾನಿ ಶ್ರೀಮತಿ ಶಕುಂತಲ ಮತ್ತಿತ್ತರ 12 ಜನ ಸಣ್ಣ ವಯಸ್ಸಿನ ಯುವತಿಯರ ಮೇಲೆ ಗಂಭೀರ ಹಲ್ಲೆಯನ್ನು ನಡೆಸಿತು. ಕಾರಣ? ಅವರ ಪ್ರಕಾರ ನಿಶ್ಚಿತಾರ್ಥಕ್ಕೆ ದನದ ಮಾಂಸದ ಅಡುಗೆ ಮಾಡಲಾಗುತ್ತಿತ್ತು. ಅದಕ್ಕೆ ಆಕ್ಷೇಪಿಸಿ ಅಡುಗೆಯನ್ನು ಹಾಳುಗೆಡವಿತು ಮತ್ತು ಇಷ್ಟೆಲ್ಲಾ ದಾಂಧಲೆ ಮಾಡಿತು.

ಬಹಳ ಹೊತ್ತಿನ ಬಳಿಕ ಬಂದ ಪೊಲೀಸರು ದನದ ಮಾಂಸ ಮಾಡುತ್ತಿದ್ದಾರೆ ಎಂದು ಮನೆಯಲ್ಲಿದ್ದ ಮೂವರು ಯುವಕರನ್ನು ಜೀಪಿನಲ್ಲಿ ಕೂರಿಸಿಕೊಂಡು ಠಾಣೆಗೆ ಕರೆದುಕೊಂಡು ಹೋಗಿ ಗೋಹತ್ಯಾ ನಿಷೇಧ ಕಾನೂನಿನ ಅಡಿಯಲ್ಲಿ ಮೂವರ ಮೇಲೆ ಕೇಸು ದಾಖಲಿಸಿತು. ಆದರೆ ನಡುರಾತ್ರಿ ಮನೆಗೆ ನುಗ್ಗಿದ ಭಜರಂಗಿಗಳ ಮೇಲೆ ಯಾವ ಕ್ರಮವನ್ನೂ ಪೊಲೀಸರು ಕೈಗೊಳ್ಳಲಿಲ್ಲ. ಆಶ್ಚರ್ಯದ ಸಂಗತಿಯೆಂದರೆ ಮನೆಯ ಯಜಮಾನಿ ಕಾಂಗ್ರೆಸ್ ಪಕ್ಷದ ಗ್ರಾಮ ಪಂಚಾಯತ್ ಸದಸ್ಯೆ. ಆದರೂ ಇಂತಹ ದಾಳಿ, ಪೋಲಿಸರ ಈ ವಿಲಕ್ಷಣ ಮತ್ತು ಅತಿರೇಕದ ಕ್ರಮಗಳು. ಇನ್ನು ಸಾಮಾನ್ಯರಾದರೆ ಏನು ಗತಿ? ಅಥವಾ ಕಾಂಗ್ರೆಸ್ ಗ್ರಾಮ ಪಂಚಾಯತ್ ಸದಸ್ಯೆ ಆದ್ದರಿಂದಲೇ ಸಂಘಿ ಗೂಂಡಾಗಳ ಈ ದಾಳಿಯೇ?


ಶಕುಂತಲಾ

ಕರಾವಳಿ ಕರ್ನಾಟಕದ ದಲಿತರಲ್ಲೇ ಅತ್ಯಂತ ದಮನಿತ ಮತ್ತು ದಲಿತ ಸಮುದಾಯವೆಂದರೆ ಕೊರಗ ಸಮುದಾಯ. ಈ ಸಮುದಾಯ ಶತಮಾನಗಳಿಂದ ಬಡತನ, ಹಸಿವು, ಅವಮಾನಗಳನ್ನೇ ನಿತ್ಯವೂ ಬದುಕಿದ ಅತ್ಯಂತ ಶೋಷಿತ ಸಮುದಾಯ. ಪರಿಶಿಷ್ಟ ಪಂಗಡದಲ್ಲಿ ಬರುವ ಈ ಸಮುದಾಯವನ್ನು ಉಳಿದವರು ಬಿಡಿ, ಇಲ್ಲಿನ ಪರಿಶಿಷ್ಟ ಜಾತಿಯವರೆ ಹತ್ತಿರ ಸೇರಿಸಿಕೊಳ್ಳುವುದಿಲ್ಲ. ಇತ್ತೀಚೆಗಷ್ಟೆ ಶೈಕ್ಷಣಿಕವಾಗಿ ಒಂದಷ್ಟು ಮಕ್ಕಳು ಈ ಸಮುದಾಯದಲ್ಲಿ ಮುಂದೆ ಬರುತ್ತಿದ್ದಾರೆ. ಕುಂದಾಪುರ ಪುರಸಭೆಯ ಪೌರಕಾರ್ಮಿಕರಲ್ಲಿ ಮುಕ್ಕಾಲು ಪಾಲು ಇದೇ ಸಮುದಾಯದವರು. ಇಲ್ಲಿನ ಪ್ರತಿಷ್ಠಿತ ವಸತಿ ಗೃಹಗಳಲ್ಲಿ ಸಫಾಯಿ ಕರ್ಮಚಾರಿಗಳೂ ಹೆಚ್ಚಿನವರು ಇದೇ ಸಮುದಾಯದವರು, ಅದರಲ್ಲಿ ಹೆಚ್ಚಿನವರು ಗಂಡಸರು. ಈಗ್ಗೆ ಇಪ್ಪತ್ತು ವರ್ಷಗಳ ಹಿಂದಿನ ತನಕವೂ ಮದುವೆ ಮನೆಗಳಲ್ಲಿ ಉಂಡು ಎಸೆದ ಎಲೆಗಳಲ್ಲಿರುವ ಅನ್ನ, ಪಲ್ಯ ಇತ್ಯಾದಿಗಳನ್ನು ಸಂಗ್ರಹ ಮಾಡಿಕೊಂಡು ಮನೆಗೆ ಹೋಗಿ ಅದನ್ನೇ ಶೇಖರಿಸಿಟ್ಟು ಊಟ ಮಾಡುತ್ತಿದ್ದ ಈ ಸಮುದಾಯ ಈ ಸಮಾಜದ ಅವಕೃಪೆಗೆ ಒಳಗಾದಷ್ಟು ಕರಾವಳಿಯಲ್ಲಿ ಇತರ ಯಾವುದೇ ಸಮುದಾಯಗಳು ಒಳಗಾಗಿಲ್ಲ ಎನ್ನಬಹುದು. ಇಂತಹ ಸಮುದಾಯದ ಕುಟುಂಬವೊಂದು ದಿನಾ ಹೊಟ್ಟೆ ತುಂಬಾ ಊಟ ಮಾಡುತ್ತಾರಾ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳದ ಈ ಸಂಘಿಗಳು, ಅವರ ಆಹಾರವಾದ ದನದ ಮಾಂಸದ ಔತಣಕ್ಕೆ ತಯಾರಿ ನಡೆಸುತ್ತಿದ್ದಾಗ ದಾಳಿ ಮಾಡುವುದು ಅವರದ್ದೇ ಕೀಳುಮಟ್ಟದ ಮಾನದಂಡದಿಂದಲೂ ಅಮಾನವೀಯ ಕ್ರೌರ್ಯದ ಪರಮಾವಧಿ.

ಈ ಭೀಕರ ದಾಳಿಯ ಸುದ್ದಿ ಕೇಳುತ್ತಲೇ ನಾನು ನಮ್ಮ ಸ್ಥಳೀಯ ಸಂಗಾತಿಗಳಾದ ಕೆ. ಶಂಕರ್ ಮತ್ತು ವೆಂಕಟೇಶ ಕೋಣಿಯವರೊಂದಿಗೆ ಶಕುಂತಲಾ ಅವರ ಮನೆಗೆ ಭೇಟಿ ನೀಡಿದೆ. ಹಲ್ಲೆಗೊಳಗಾದ ಶಕುಂತಲಾ ಮತ್ತು ಅವರ ಕುಟುಂಬದ ಯುವಕ, ಯುವತಿ, ವೃದ್ಧರಿಗೆ ಸಾಂತ್ವನ ಹೇಳಿದೆ. ಸಂಘಿ ಗೂಂಡಾಗಳ ನಡುರಾತ್ರಿ ದಾಳಿಯ ಪರಿಣಾಮ ನೋಡುವುದು ಹೃದಯವಿದ್ರಾವಕ ದೃಶ್ಯವಾಗಿತ್ತು. ನನ್ನ ಜೊತೆ ಮಾತನಾಡಿದ ಶಕುಂತಲಾ, "ನಾವು ಹಿಂದಿನಿಂದಲೂ ದನವನ್ನು ಆಹಾರವನ್ನಾಗಿ ಆಯ್ಕೆ ಮಾಡಿ ತಿನ್ನುತ್ತಿದ್ದೇವೆ. ಮೊನ್ನೆ ನಮ್ಮ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಅವರೆಲ್ಲರೂ ಭಜರಂಗದಳದವರು ಎನ್ನುತ್ತಿದ್ದರು. ಇದೇ ಆಸುಪಾಸಿನ ಯುವಕರು ಅನೇಕರಿದ್ದರು. ಮೊನ್ನೆ ನಮ್ಮ ಮೇಲೆ ದಾಳಿ ನಡೆಸಿದ ಯುವಕರ ಮನೆಯವರೇ ಈ ಹಿಂದೆಯೂ ಕೂಡ ಸಾಕಲಿಕ್ಕಾಗದ ಗಂಡು ದನವನ್ನು ನಮಗೆ ಕೊಡುತ್ತಿದ್ದರು. ಮೊನ್ನೆಯೂ ಕೂಡ ಹಿಂದೂಗಳ ಮನೆಯವರೇ ನಮಗೆ ದನವನ್ನು ನೀಡಿದ್ದರು. ನಾವು ಎಲ್ಲೂ ಕದ್ದುಕೊಂಡು ಬಂದಿಲ್ಲ. ದನ ಕೊಟ್ಟವರ ವಿಳಾಸ, ಫೋನ್ ನಂಬರ್ ಅನ್ನು ನಾವು ತೆಗೆದುಕೊಂಡಿದ್ದೇವೆ. ಸತ್ತ ದನವನ್ನು ಹೂಳಲು ನಮ್ಮ ಮನೆಯ ಗಂಡಸರು ಬೇಕು. ಆದರೆ ದನವನ್ನು ನಾವು ತಿನ್ನಬಾರದು ಎನ್ನುತ್ತಿದ್ದಾರೆ. ಮುಸ್ಲಿಮರಿಗೆ ದನ ಕೊಟ್ಟರೆ ತುಂಬಾ ಸಮಸ್ಯೆಗಳಾಗುತ್ತೆ ಹಾಗಾಗಿ ನೀವೆ ತೆಗೆದುಕೊಂಡು ಹೋಗಿ ಎಂದು ಹೇಳಿ ಕೊಟ್ಟವರು ಅನೇಕರಿದ್ದರು" ಎಂದು ಹೇಳಿದ್ದಾರೆ. ಎಂತಹ ಘೋರ ಅನ್ಯಾಯ?!

ಆಗಲೇ ಶಕುಂತಲಾ ಅವರು ದಾಳಿ ಮಾಡಿದ ಹತ್ತಕ್ಕೂ ಹೆಚ್ಚು ಮಂದಿಯ ಮೇಲೆ ಕೇಸು ದಾಖಲಿಸಿದ್ದರು. ಸಿಪಿಐ(ಎಂ), ಉದಯ ಕುಮಾರ್ ತಲ್ಲೂರ್ ಅವರ ನಾಯಕತ್ವದ ದಲಿತ ಸಂಘರ್ಷ ಸಮಿತಿಯ ಪ್ರತಿಭಟನೆ ನಡೆದಿತ್ತು. ಪ್ರಕರಣದ ಕುರಿತು ಇನ್ನೂ ಯಾಕೆ ಯಾರನ್ನೂ ಬಂಧಿಸಿಲ್ಲವೆಂದು ಬೈಂದೂರು ಸಿಪಿಐ ರಾಘವ ಪಡೀಲ್ ಹಾಗೂ ಗಂಗೊಳ್ಳಿ ಎಸ್ಐ ಸುಬ್ಬಣ್ಣ ಅವರನ್ನು ನಾನು ತರಾ–ಟೆಗೆ ತೆಗೆದುಕೊಂಡೆ.

ಈ ನಡುರಾತ್ರಿ ದಾಳಿಯೇ ಸರಕಾರಕ್ಕೆ ಸಮಾಜಕ್ಕೆ ನಮಗೆಲ್ಲರಿಗೂ ಅತ್ಯಂತ ನಾಚಿಕೆಗೇಡಿನ ಘಟನೆ. ಆದರೆ ಈ ದಾಳಿಯ ನಂತರದ ಘಟನಾವಳಿಗಳು ಇನ್ನಷ್ಟು ನಾಚಿಕೆಗೇಡಿನದ್ದೂ ಹಾಗೂ ಭೀಕರವಾದದ್ದು. ಕೇಸು ದಾಖಲಾಗುತ್ತಿದ್ದಂತೆ ಬಿಜೆಪಿ ಮುಖಂಡರು ಎಚ್ಚೆತ್ತುಕೊಂಡರು. ವಿಪರ್ಯಾಸ ಎಂದರೆ ಭಜರಂಗಿಗಳನ್ನು ಕೇಸ್‌ನಿಂದ ರಕ್ಷಿಸಲು ಬಿಜೆಪಿಯವರ ಜೊತೆ ಕಾಂಗ್ರೆಸ್‌ನವರು ಸೇರಿಕೊಂಡರು. ಸ್ಥಳೀಯ ಶಾಸಕ ಗೋಪಾಲ ಪೂಜಾರಿ ದೌರ್ಜನ್ಯ ನಡೆದ ಮನೆಗೆ ಭೇಟಿ ನೀಡಲೂ ಇಲ್ಲ, ಮಾತ್ರವಲ್ಲ ತಮ್ಮದೇ ಪಕ್ಷದ ಗ್ರಾಮ ಪಂಚಾಯತ್ ಸದಸ್ಯೆ ಶಕುಂತಳಾ ಅವರನ್ನೂ ಗೋಪಾಲ ಪೂಜಾರಿ ಮಾತನಾಡಿಸಲು ಹೋಗಿಲ್ಲ. ಈಕೆಯ ಮತದಿಂದಲೇ ಅಧ್ಯಕ್ಷರಾಗಿ ಆಯ್ಕೆಯಾದ ಹೊಸನಾಡ ಗ್ರಾಮಪಂಚಾಯತ್ ಅಧ್ಯಕ್ಷ ಚಂದ್ರಶೇಖರ್ ಕೂಡ ಈ ಕೊರಗ ಕುಟುಂಬಗಳ ನೆರವಿಗೆ ಬರಲಿಲ್ಲ. ಇಡೀ ಪ್ರಕರಣದಲ್ಲಿ ಅತ್ಯಂತ ನಾಚಿಕೆಗೇಡಿನ ಸಂಗತಿ ಎಂದರೆ ಇಲ್ಲಿನ ಸ್ಥಳೀಯ ನಿವಾಸಿ, ಮೀಸಲಾತಿಯಲ್ಲಿ ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಸದಸ್ಯರಾಗಿ ಹಲವಾರು ಬಾರಿ ಆಯ್ಕೆಯಾದ ಕಾಂಗ್ರೆಸ್ ಪಕ್ಷದ ಅನಂತ ಮೊವಾಡಿ ಎಂಬ ದಲಿತ ರಾಜಕಾರಣಿ ಈ ಪ್ರಕರಣದಲ್ಲಿ ನಡೆದುಕೊಂಡ ರೀತಿ. ತನ್ನ ಮನೆಯ ಪಕ್ಕ ಇರುವ ಕೊರಗರ ಮನೆಯತ್ತ ಕಣ್ಣೆತ್ತಿಯೂ ನೋಡದ ಈ ಕಾಂಗ್ರೆಸ್ ನಾಯಕ ಬೈಂದೂರು ಬಿಜೆಪಿ ನಾಯಕರ ಜೊತೆ ಸೇರಿಕೊಂಡು ಸೀದಾ ಗಂಗೊಳ್ಳಿ ಠಾಣೆಗೆ ಧಾವಿಸಿದರು. ಕೇಸು ಮಾಡಬಾರದು ಎಂದು ಭಜರಂಗಿಗಳ ಪರವಾಗಿ ಈತ ವಕಾಲತ್ತು ಮಾಡಿದರು. ಶಾಸಕ ಗೋಪಾಲ ಪೂಜಾರಿಯಂತೂ ಮೌನಕ್ಕೆ ಶರಣಾಗಿದ್ದಾರೆ. ಹಾಗಂತ ಅವರು ಸುಮ್ಮನೆ ಕೂತಿಲ್ಲ. ಈ ಪ್ರಕರಣದಲ್ಲೀಗ ಕಾಂಗ್ರೆಸ್ ಮತ್ತು ಬಿಜೆಪಿ ಒಟ್ಟಾಗಿ ಶಕುಂತಳಾ ಮತ್ತು ಸಂತ್ರಸ್ತ ಕೊರಗ ಕುಟುಂಬಕ್ಕೆ ಇನ್ನಷ್ಟು ಅನ್ಯಾಯ ಮಾಡಲು ಹೊರಟಿರುವಂತೆ ಕಾಣುತ್ತಿದೆ..

ಇಂತಹ ಪ್ರಕರಣಗಳಿಂದಾಗಿ ಭಾರತ ದೇಶ ತಲೆ ತಗ್ಗಿಸಿ ನಿಲ್ಲುವ ಸ್ಥಿತಿ ನಿರ್ಮಾಣವಾಗಿದೆ. ಭಾರತದ ಆಹಾರದ ಪದ್ಧತಿಯಲ್ಲಿ ದನದ ಮಾಂಸವು ಒಂದು. ಆಹಾರ ಆಯ್ಕೆ ನಮ್ಮ ಹಕ್ಕಾಗಿದೆ. ಅದನ್ನು ಇಂದು ಕಸಿದುಕೊಳ್ಳುತ್ತಿರುವುದು ದುರಂತ. ಈ ದಾಳಿ ಮಾಡುವಂತಹದ್ದು ಸಾಮಾನ್ಯ ಜನರ, ದಲಿತರ, ಅಲ್ಪಸಂಖ್ಯಾತರ ಆಹಾರದ ಹಕ್ಕಿನ ಮೇಲೆ ದಾಳಿ ನಡೆಯುತ್ತಿರುವುದು. ಮೊವಾಡಿ ಕೊರಗರ ಕುಟುಂಬದ ಮೇಲಾದ ದಾಳಿಯನ್ನು ಖಂಡಿಸಿ ಎಲ್ಲಾ ಕಡೆ ಸಿಪಿಐ(ಎಂ) ಪ್ರತಿಭಟನೆಗೆ ಕರೆ ಕೊಡಲಾಯಿತು.

ಅಹಿಂದ ಸರಕಾರವೆಂದು ಕೊಚ್ಚಿಕೊಳ್ಳುವ ಸಿದ್ಧರಾಮಯ್ಯನವರ ಕಾಂಗ್ರೆಸ್ ಸರಕಾರ ಮತ್ತು ಪಕ್ಷವು ಪ್ರಕರಣದಲ್ಲಿ, ಬಿಜೆಪಿ ಹಾಗು ಸಂಘಪರಿವಾರದಷ್ಟೇ ಅಪರಾಧಿ ಸ್ಥಾನದಲ್ಲಿದೆ. ತನ್ನದೇ ಪಕ್ಷದ ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯೆ ಮತ್ತು ಅವರ ಕುಟುಂಬದವರನ್ನು ರಕ್ಷಿಸಲಾಗದ ಸರಕಾರಕ್ಕೆ ತಾನು ದಲಿತರ–ಪರ ಎಂದು ಹೇಳುವ ಹಕ್ಕು ಇಲ್ಲ. ಇಡೀ ಪ್ರಕರಣದಲ್ಲಿ ಸಕಾರಾತ್ಮಕವಾದದ್ದು ಎಂದರೆ ಶಕುಂತಳಾ ಯೋಜಿಸಿದಂತೆ ದಾಳಿ ಆದ ಮೇಲೂ ಹೆದರದೆ ನಿಶ್ಚಿತಾರ್ಥ ಕಾರ್ಯಕ್ರಮ ನಡೆಸಿದ್ದು ಮತ್ತು ಧೈರ್ಯ ಮಾಡಿ ಕೇಸು ದಾಖಲಿಸಿ ಅಪರಾಧಿಗಳ ಬಂಧನಕ್ಕೆ ಹೋರಾಟಕ್ಕೆ ಮುಂದಾಗಿರುವುದು. ಆಕೆಯ ಮತ್ತು ಕುಟುಂಬದ ಧೈರ್ಯ ಮೆಚ್ಚಬೇಕಾದ್ದು ಮತ್ತು ದಮನದ ವಿರುದ್ಧ ಹೋರಾಟಗಾರರಿಗೆ ಸ್ಫೂರ್ತಿದಾಯಕ.

ಈ ನಡುವೆ ಆರೋಪಿಗಳ ಬಂಧನಕ್ಕೆ ಸಿಪಿಐ(ಎಂ) ಮತ್ತು ಇತರ ಸಂಘಟನೆಗಳ ಒತ್ತಡ ಹೆಚ್ಚಾದಂತೆ ತಲೆ ಮರೆಸಿಕೊಂಡಿದ್ದ ಆರೋಪಿಗಳಾದ ಸುನಿಲ್ ಪೂಜಾರಿ, ಚಂದ್ರಕಾಂತ ಪೂಜಾರಿ, ಗುರುರಾಜ ಆಚಾರ್ಯ, ಧೀರಜ್, ವಿನಯ, ಸತೀಶ, ಲಕ್ಷ್ಮೀಕಾಂತ, ಪ್ರಸನ್ನ, ಶ್ರೀಕಾಂತ, ಭರತ, ಶರತ್ ನ್ಯಾಯಾಲಯಕ್ಕೆ ನೇರವಾಗಿ ಶರಣಾದರು. ಶಕುಂತಳಾ ಅವರಿಗೆ ಅತ್ಯಾಚಾರ ಬೆದರಿಕೆ ಒಡ್ಡಿ, ಜಾತಿ ನಿಂದಿಸಿ, ಮೂವರು ಯುವಕರಿಗೆ ಹಾಗೂ ಹಲ್ಲೆಗೈದ ಪ್ರಕರಣದ ಎಲ್ಲ 11 ಆರೋಪಿಗಳಿಗೆ ನ್ಯಾಯಾಲಯ ಜಾಮೀನು ನೀಡಿದೆ. ಆರೋಪಿಗಳ ವಿರುದ್ಧ ಗಂಗೊಳ್ಳಿ ಠಾಣೆಯಲ್ಲಿ ಕಲಂ 143, 147, 148, 448, 323, 506, 324, 504 ಜೊತೆಗೆ 149 ಐಪಿಸಿ ಮತ್ತು ದಲಿತ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಆರೋಪಿಗಳ ಮೇಲೆ ದಲಿತ ದೌರ್ಜನ್ಯ ಕಾಯ್ದೆಯಡಿ ಜಾಮೀನು–ರಹಿತ ಪ್ರಕರಣ ದಾಖಲಿಸಬೇಕು. ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ವಹಿಸಬೇಕು. ಕುಟುಂಬಕ್ಕೆ ಅಗತ್ಯ ಪರಿಹಾರ ಮತ್ತು ಸೂಕ್ತ ಚಿಕಿತ್ಸೆ ಸರಕಾರ ನೀಡಬೇಕು. ಕರಾವಳಿಯಲ್ಲಿ ಸಂಘ ಪರಿವಾರದ ಕಾನೂನುಬಾಹಿರ ಚಟುವಟಿಕೆಗಳಿಗೆ ಮಟ್ಟ ಹಾಕುವ ರಾಜಕೀಯ ಇಚ್ಛಾಶಕ್ತಿ ಕಾಂಗ್ರೆಸ್ ಸರಕಾರಕ್ಕಾಗಲಿ ಪಕ್ಷಕ್ಕಾಗಲಿ ಇಲ್ಲ. ಆದ್ದರಿಂದ ಇದಕ್ಕೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಹೋರಾಟಗಳ ಮೂಲಕ ಒತ್ತಡ ಹಾಕಬೇಕಾಗಿದೆ.


ಸಿಪಿಐ(ಎಂ) ನಿಯೋಗವು ಶಕುಂತಲಾ ಅವರ ಮನೆಗೆ ಭೇಟಿ ನೀಡಿ ಮಾತನಾಡುತ್ತಿರುವುದು

ಸುಳ್ಳಿನ ರಾಜಕೀಯದಿಂದ ಬಿಜೆಪಿಗೆ ಮುಖಭಂಗ

ಕೊಣಾಜೆ ಕಾರ್ತಿಕ್ ರಾಜ್ ಕೊಲೆಯನ್ನು ಆತನ ತಂಗಿಯೇ ಮಾಡಿಸಿದ್ದೆಂಬುದು ಇದೀಗ ಬಯಲಾಗಿದೆ. ಈ ತನಕ ಸುಳ್ಳಿನ ಕತೆ ಕಟ್ಟಿ ಜನರನ್ನು ಕೋಮುಗಲಬೆಗೆ ಪ್ರಚೋದಿಸಿದ ಸಂಘ ಪರಿವಾರಗಳನ್ನು ಮತ್ತು ಸಂಸದ ನಳಿನ್ ಕುಮಾರ್ ಕಟೀಲ್ ಅವರುಗಳು ಇಂದು ತಮ್ಮ ತಪ್ಪಿಗೆ ಬಹಿರಂಗ ಕ್ಷಮೆ ಕೇಳಲು ಸಿದ್ದರಿದ್ದಾರೆಯೇ? ಇಲ್ಲದಿದ್ದರೆ ಅವರುಗಳನ್ನು ತಕ್ಷಣ ಕಾನೂನು ಕ್ರಮಕ್ಕೆ ಒಳಪಡಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಬೆಳ್ತಂಗಡಿ ತಾಲೂಕು ಪ್ರಧಾನ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ತಾಲೂಕು ಮುಖಂಡರಾದ ಬಿ.ಎಂ.ಭಟ್ ಹೇಳಿದರು.

ಸಂಘ ಪರಿವಾರ ಈ ಕೊಲೆ ಮುಸಲ್ಮಾನರಿಂದ ಆಗಿದೆ ಎಂದು ಗುಲ್ಲೆಬ್ಬಿಸಿ ಸುಳ್ಳಿನ ರಾಜಕೀಯ ನಡೆಸಿದರು. ಸಂಸದ ನಳಿನ್ ಕುಮಾರ್‌ಕಟೀಲ್ ಅವರು ಪೋಲೀಸರು ಕಾಂಗ್ರೇಸ್ ಸರಕಾರ ಆಣತಿಯಂತೆ ನಡೆಯುತ್ತಾ ಮುಸ್ಲಿಮರು ಆರೋಪಿಗಳಾದ ಕಾರಣ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ ಹಾಗೂ ಕಾರ್ತಿಕ್‌ರಾಜ್ ಕೊಲೆಗಡುಕರನ್ನು ಹಿಡಿಯದೆ ಜಿಲ್ಲೆಗೆ ಅನ್ಯಾಯ ಮಾಡುತ್ತಿದ್ದಾರೆಂದು ಹೇಳಿದ್ದು ಮಾತ್ರವಲ್ಲ ಜಿಲ್ಲೆಗೆ ಬೆಂಕಿ ಕೊಡುತ್ತೇನೆಂದು ಬೆದರಿಕೆ ಹಾಕಿ ಕ್ರಿಮಿನಲ್ ಹೇಳಿಕೆಯನ್ನು ನೀಡಿದ್ದನ್ನು ಸ್ಮರಿಸಬಹುದು ಎಂದವರು ಹೇಳಿದರು. ಆದರೆ ಹಿಂದು ಜಾಗರಣಾ ವೇದಿಕೆ ಆಯೋಜಿಸಿದ್ದ ಹೋರಾಟದಲ್ಲಿ ಮಾತಾಡುತ್ತಿದ್ದ ಅವರ ಎದುರೇ ಕೂತು ಅಳುತ್ತಿದ್ದ ಕಾರ್ತಿಕ್ ರಾಜ್ ಅವರ ತಂಗಿಯೇ ಕೊಲೆಗಡುಕಿ ಎಂಬುದು ಇಂದು ಬಹಿರಂಗವಾಗಿದೆ. ಚೀ ಎಂತಹ ನಾಚಿಕೆ ! ವಿಚಾರ ಯಾರು ಯಾರನ್ನು ರಕ್ಷಿಸಲು ಮುಂದಾಗಿದ್ದಾರೆ ಎಂಬ ಸತ್ಯವೂ ಇಂದು ಬಯಲಾಯಿತು ಎಂದರು.

ವಿನಾಯಕ ಬಾಳಿಗ ಪ್ರಕರಣ, ಹರೀಶ್ ಕೊಲೆ ಇತ್ಯಾದಿಗಳು ಇವಕ್ಕೆ ಜೀವಂತ ಉದಾಹರಣೆ. ಇದೀಗ ಕಾರ್ತಿಕ್‌ರಾಜ್ ಕೊಲೆ ಪ್ರಕರಣ ಇವರ ಸುಳ್ಳಿನ ರಾಜಕೀಯಕ್ಕೆ ಹೊಸ ಸೇರ್ಪಡೆ. ಸತ್ಯವನ್ನು ಹೊರಹಾಕಿದ ಹಾಗೂ ಜಿಲ್ಲೆಯ ಮಾನ, ಶಾಂತಿ ಕಾಪಾಡಿದ ಪೋಲೀಸ್‌ರನ್ನು ಈ ಬಗ್ಗೆ ಅಭಿನಂದಿಸಲೇ ಬೇಕು ಎಂದವರು ಹೇಳಿದರು.

– ಬಿ.ಎಂ. ಭಟ್

ಉಡುಪಿಯಲ್ಲಿ ಡೇವಿಡ್ ಎ. ಕರ್ಕಡ ಸ್ಮರಣೆ

ವರದಿ: ವಾ.ಉ.

ಕಾ। ಡೇವಿಡ್ ಎ. ಕರ್ಕಡ ಅವರು ವಿಧಿವಶರಾದ 10ನೇ ವರ್ಷದ ಸ್ಮರಣ ದಿನದ ಅಂಗವಾಗಿ "ಉಡುಪಿ ಜಿಲ್ಲೆಯಲ್ಲಿ ಅಭಿವೃದ್ಧಿ ಪರ್ಯಾಯ ಕಣ್ಣೋಟ" ಕುರಿತಾದ ವಿಚಾರ ಸಂಕಿರಣವನ್ನು ಎಪ್ರಿಲ್ 25ರಂದು ಉಡುಪಿಯಲ್ಲಿ ಏರ್ಪಡಿಸಲಾಗಿತ್ತು. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಎಂ.ಚಂದ್ರ ಪೂಜಾರಿ ಪ್ರಧಾನ ಉಪನ್ಯಾಸ ನೀಡಿದರು.

ಎಲ್ಲಿಯವರೆಗೆ ರಾಜಕೀಯ ಗುಣಮಟ್ಟ ಸುಧಾರಣೆಯಾಗುವುದಿಲ್ಲವೋ ಅಲ್ಲಿಯವರೆಗೆ ಅಭಿವೃದ್ಧಿಯ ಗುಣಮಟ್ಟ ಸುಧಾರಿಸುವುದಿಲ್ಲ. ಜಾತಿ, ಧರ್ಮಗಳನ್ನು ಒಡೆದು ಆಳುವ ರಾಜಕೀಯ ವ್ಯವಸ್ಥೆ ಇರುವವರೆಗೆ ಗುಣಮಟ್ಟದ ಅಭಿವೃದ್ಧಿಯನ್ನು ಕಾಣಲು ಸಾಧ್ಯವಿಲ್ಲ. ಇಂದಿನ ಅಭಿವೃದ್ಧಿಯು ಸಂಸ್ಕೃತಿ ಮತ್ತು ಪ್ರಕೃತಿಗೆ ವಿರುದ್ಧವಾಗಿದ್ದು, ಎರಡನ್ನೂ ದೊಡ್ಡ ಪ್ರಮಾಣದಲ್ಲಿ ನಾಶ ಮಾಡುತ್ತಿದೆ. ಬಡತನ, ಅಸಮಾನತೆ ಇವುಗಳ ಪಿರಮಿಡ್ ರೂಪಕದಲ್ಲಿ ಮೇಲುಸ್ತರದಲ್ಲಿ ಶ್ರೀಮಂತರು, ನಂತರದಲ್ಲಿ ಮಧ್ಯಮ ಶ್ರೀಮಂತರು ಮತ್ತು ಮಧ್ಯಮ ವರ್ಗದವರು ಇದ್ದು, ಎಲ್ಲ ಅಧಿಕಾರ ಮತ್ತು ಸಂಪತ್ತು ಅವರ ಕೈಯಲ್ಲಿದೆ. ಶೇ.70ರಷ್ಟು ಭಾಗ ಕೆಳಸ್ತರದವರಿದ್ದರೂ ಸಂಪತ್ತು–ಅಧಿಕಾರ ಅವರಲ್ಲಿ ಇಲ್ಲ ಎಂದು ಪ್ರೊ.ಚಂದ್ರ ಪೂಜಾರಿ ಹೇಳಿದರು.

ಈ ಸಮಾಜದ ಅಡಿಪಾಯ, ಅರ್ಥವ್ಯವಸ್ಥೆಯ ಅಡಿಪಾಯ, ರಾಜಕೀಯದ ಅಡಿಪಾಯ ಹಾಗೂ ಸಂಸ್ಕೃತಿಯ ಅಡಿಪಾಯ ಕೆಳಸ್ತರದವರೇ ಆಗಿದ್ದಾರೆ. ಆದರೆ ಅವರಿಗೆ ದೊಡ್ಡ ಮಟ್ಟದ ಸ್ಥಾನಮಾನ, ಅಧಿಕಾರ ಹಾಗೂ ಆದಾಯ ಇಲ್ಲದೆ ಇತ್ತೀಚೆಗೆ ಕೇಂದ್ರ ಸರಕಾರ ಹೆಚ್ಚು ಬಲಗೊಳ್ಳುತ್ತಿದೆ. ರಾಜ್ಯ ಸರಕಾರ ಬಲಹೀನಗೊಂಡಿದೆ. ಹಿಂದೆ ರಾಜ್ಯ ಸರಕಾರಕ್ಕೆ ತೆರಿಗೆ ವಿಧಿಸುವ ಅಧಿಕಾರವಿತ್ತು. ಆದರೆ ಜಿಎಸ್‌ಟಿ ಮಸೂದೆ ಜಾರಿಯಾದ ಆನಂತರ ತೆರಿಗೆ ವಿಧಿಸುವ ಅಧಿಕಾರವನ್ನು ರಾಜ್ಯಗಳು ಕಳೆದುಕೊಂಡಿವೆ. ಪೆಟ್ರೋಲ್, ಅಬಕಾರಿ ಇತ್ಯಾದಿ ಮೂರ್ನಾಲ್ಕು ವಿಭಾಗಗಳಿಗೆ ತೆರಿಗೆ ವಿಧಿಸುವ ಅಧಿಕಾರ ಇದೆ ಬಿಟ್ಟರೆ, ಉಳಿದೆಲ್ಲ ಅಧಿಕಾರ ಕೇಂದ್ರ ಸರಕಾರಕ್ಕಿರುತ್ತದೆ. ಸಂಪನ್ಮೂಲ ಕ್ರೋಢೀಕರಿಸುವ ಯಾವುದೇ ಅಧಿಕಾರ ರಾಜ್ಯಕ್ಕಿಲ್ಲ. ಹಾಗಾಗಿ ಪ್ರತ್ಯೇಕ ರಾಜ್ಯ ಎನ್ನುವುದು ಕೇವಲ ಭ್ರಮೆ ಎಂದರು.

ಪರ್ಯಾಯ ಅಭಿವೃದ್ಧಿ ಬಗ್ಗೆ ಆಲೋಚಿಸಬೇಕಾಗಿದೆ. ನ್ಯಾಯಯುತ ಸಮಾಜವನ್ನು ನಿರ್ಮಿಸುವ ಆದರ್ಶ ಅಭಿವೃದ್ಧಿಯ ಪರಿಕಲ್ಪನೆಯ ಬಗ್ಗೆ ಚಿಂತಿಸಬೇಕಾಗಿದೆ. ಆದರ್ಶ ಅಭಿವೃದ್ಧಿಯಲ್ಲಿ ಮೂಲ ಸೌಕರ್ಯಗಳಿಗೆ ಕೊರತೆ ಇರುವುದಿಲ್ಲ. ಆದರೆ ಆದರ್ಶ ಅಭಿವೃದ್ಧಿಗೂ ಉಡುಪಿಗೂ ಸಾಕಷ್ಟು ಅಂತರವಿದೆ ಎಂದವರು ಹೇಳಿದರು.

ಸಮಾಜದಲ್ಲಿ ಲಿಂಗ ಮತ್ತು ಜಾತಿ ತಾರತಮ್ಯ ಇರಬಾರದು. ಇದು ಅಭಿವೃದ್ಧಿಗೆ ದೊಡ್ಡ ಹೊಡೆತ ನೀಡುತ್ತಿದೆ. ಅಭಿವೃದ್ಧಿ ಹಾಗೂ ಲಿಂಗಾನುಪಾತಕ್ಕೂ ನೇರ ಸಂಬಂಧವಿದೆ. ಅಭಿವೃದ್ಧಿಯಾಗುತ್ತಿದ್ದಂತೆ ಲಿಂಗಾನುಪಾತ ಕುಸಿಯುತ್ತಿದೆ. ಪ್ರಸ್ತುತ ಜಿಲ್ಲೆಯ ಪರ್ಯಾಯ ಅಭಿವೃದ್ಧಿಯ ಜೊತೆಗೆ ದೇಶದ ಪರ್ಯಾಯ ಅಭಿವೃದ್ಧಿಯ ಬಗ್ಗೆಯೂ ಆಲೋಚಿಸಬೇಕಾಗಿದೆ ಎಂದು ಪ್ರೊ.ಚಂದ್ರ ಪೂಜಾರಿ ಅಭಿಪ್ರಾಯಪಟ್ಟರು. ಸಂಘದ ಯು.ಗುರುದತ್, ಎಐಬಿಇಎಯ ಹೆರಾಲ್ಡ್ ಡಿಸೋಜ, ಬಿಇಎಫ್‌ಐಯ ರವೀಂದ್ರ, ಬಿಎಸ್‌ಎನ್‌ಎಲ್ ನೌಕರ ಸಂಘಟನೆಯ ಶಶಿಧರ ಗೊಲ್ಲ ಇತರ ಕಾರ್ಮಿಕ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಕವಿರಾಜ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಾರ್ವಜನಿಕ ಸಭೆಗೂ ಮೊದಲು ಉಡುಪಿ ಜೋಡುಕಟ್ಟೆಯಿಂದ ಬಸ್ ನಿಲ್ದಾಣದ ವರೆಗೆ ಕಾರ್ಮಿಕರ ಮೆರವಣಿಗೆ ನಡೆಯಿತು.

ಕೇಳಿಸಿದ್ದು

ಉದ್ಯೋಗ ಖಾತರಿಯು ಬಂದು ಆಗಲೇ ಹತ್ತು ವರ್ಷಗಳ ಮೇಲಾಯಿತು.
ಆದಾಗ್ಯೂ ಇನ್ನೂ ನೂರಕ್ಕೆ 80 ಭಾಗ ಗ್ರಾಮೀಣ ಕೃಷಿ ಕೂಲಿಕಾರರನ್ನು ತಲುಪಿಯೇ ಇಲ್ಲವೆಂದು ಬೆಂಗಳೂರಿನ 'ಆ್ಯಕ್ಷನ್ ಏಡ್' ಸಂಸ್ಥೆ ಮಾಡಿರುವ ಅಧ್ಯಯನವೊಂದು ಎತ್ತಿ ತೋರಿಸಿದೆ. ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆ, ದಕ್ಷಿಣ ಕರ್ನಾಟಕದ ಚಾಮರಾಜನಗರ ಜಿಲ್ಲೆಗಳ ಹಳ್ಳಿಗಳಲ್ಲಿ ನಡೆದಿರುವ ಅಧ್ಯಯನವು ಕೇವಲ 130 ರೂಪಾಯಿ ದಿನಗೂಲಿಯನ್ನು ಗಳಿಸಲು ಜನರು 50–60 ಕಿ.ಮೀ. ಹೋಗುತ್ತಿರುವುದನ್ನು ದಾಖಲಿಸಿದೆ.
ಆಹಾರ ಭದ್ರತಾ ಕಾನೂನಿನ ಅಂಶಗಳನ್ನು ಜಾರಿಯಲ್ಲಿ ತರುತ್ತಿಲ್ಲವೆಂದು ಸುಪ್ರೀಂ ಕೋರ್ಟ್, ಕರ್ನಾಟಕದ ಅಧಿಕಾರಿಗಳಿಗೆ ಛೀಮಾರಿ ಹಾಕಿದ್ದು ರಾಜ್ಯಕ್ಕಂತೂ ಶೋಭೆ ತರುವಂಥದ್ದಲ್ಲ.
ಕುಂದುಕೊರತೆಗಳನ್ನು ಆಲಿಸಲು ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳನ್ನು ನೇಮಕ ಮಾಡಬೇಕು, ಆಹಾರ ಆಯೋಗವನ್ನು ರಚಿಸಬೇಕು ಎಂಬುದು ಕಾನೂನಿನಲ್ಲಿರುವ ಅಂಶ. ಪಡಿತರ ಹಂಚಿಕೆ, ಕಾರ್ಡುಗಳ ಹಂಚಿಕೆಗಳ ಬಗ್ಗೆ ಜನರಿಗಾಗುತ್ತಿರುವ ಸಮಸ್ಯೆಗಳನ್ನು ಹೇಳಿಕೊಳ್ಳಲು, ಸರ್ಕಾರದ ಗಮನಕ್ಕೆ ತರಲು ವ್ಯವಸ್ಥೆಯೇ ಇಲ್ಲದ ಶೂನ್ಯ ಸ್ಥಿತಿ ಇದು.

– ಶಾರದಾ ಗೋಪಾಲ (ಪ್ರಜಾವಾಣಿ)

ಬೀದಿಬದಿ ವ್ಯಾಪಾರಸ್ಥರ ಮೇಲಿನ ದಾಳಿ ಖಂಡಿಸಿ ವಾಹನ ಪ್ರಚಾರ ಜಾಥಾ



ಬೀದಿಬದಿ ವ್ಯಾಪಾರಸ್ಥರ ಮೇಲೆ ನಡೆಯುತ್ತಿರುವ ನಿರಂತರ ಧಾಳಿಯನ್ನು ಖಂಡಿಸಿ, ಹಾಗೂ ಪರ್ಯಾಯ ವ್ಯವಸ್ಥೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಒತ್ತಾಯಿಸಿ ಸಿಐಟಿಯುಗೆ ಸಂಯೋಜಿತಗೊಂಡಿರುವ ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘದ ನೇತೃತ್ವದಲ್ಲಿ ಮಂಗಳೂರು ನಗರದಾದ್ಯಂತ ಇಂದು (04–05–2017) ವಾಹನ ಪ್ರಚಾರ ಜಾಥಾವನ್ನು ನಡೆಸಲಾಯಿತು.

ನಗರದ ಸ್ಟೇಟ್‌ಬ್ಯಾಂಕ್ ಬಳಿಯಲ್ಲಿ ಪ್ರಾರಂಭಗೊಂಡ ಜಾಥಾದ ಉದ್ಘಾಟನೆಯನ್ನು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ನೆರವೇರಿಸುತ್ತಾ, ಮಂಗಳೂರು ನಗರದಲ್ಲಿ ಯಾವುದೇ ಸಮಸ್ಯೆಗಳು ತಲೆದೋರಿದರೂ, ಅದಕ್ಕೆ ಬೀದಿಬದಿ ವ್ಯಾಪಾರಸ್ಥರೇ ನೇರಹೊಣೆ ಎಂಬಂತೆ ಮಂಗಳೂರು ಮಹಾನಗರ ಪಾಲಿಕೆ ವರ್ತಿಸುತ್ತಿದೆ. ಬೀದಿಬದಿ ವ್ಯಾಪಾರಸ್ಥರ ಪ್ರಬಲ ಹೋರಾಟದ ಭಾಗವಾಗಿ ಸಂಸತ್ತಿನಲ್ಲಿ ಮಸೂದೆಯೊಂದು ಜಾರಿಗೊಂಡಿದೆ. ರಾಜ್ಯ ಸರ್ಕಾರವೂ ಕೂಡ ವಿಶೇಷ ನಿಯಮಾವಳಿಯನ್ನು ರೂಪಿಸಿದೆ. ಆದರೆ ಸ್ಥಳೀಯಾಡಳಿತಗಳು ಕಿಂಚಿತ್ತೂ ಗಮನ ಹರಿಸುತ್ತಿಲ್ಲ. ಕಳೆದ 6 ವರ್ಷಗಳ ಹಿಂದೆ ಮಂಗಳೂರಿನಲ್ಲಿ ಬೀದಿಬದಿ ವ್ಯಾಪಾರಸ್ಥರ ವಿರುದ್ಧ ಟೈಗರ್ ಕಾರ್ಯಾಚರಣೆಯನ್ನು ನಡೆಸಿದ ಅಂದಿನ ಬಿಜೆಪಿ ನೇತೃತ್ವದ ಮನಪಾ ಆಡಳಿತದ ವಿರುದ್ಧ ಸಮರಧೀರ ಹೋರಾಟ ನಡೆಸಿದ್ದರ ಫಲವಾಗಿ ಸರ್ವೇ ಕಾರ್ಯ ನಡೆದಿದೆ. ಬಳಿಕ ಸಮೀಕ್ಷೆ ನಡೆಸಿ ನಿಜವಾದ ಬೀದಿಬದಿ ವ್ಯಾಪಾರಸ್ಥರಿಗೆ ಗುರುತುಚೀಟಿ, ನೀಡಬೇಕೆಂದಿದ್ದರೂ ಕೇವಲ 208 ಮಂದಿಗೆ ಕಳೆದ 2 ವರ್ಷಗಳ ಹಿಂದೆ ಗುರುತು ಚೀಟಿ ನೀಡಿದ್ದು, ಉಳಿದವರಿಗೆ ಕೊಡಬೇಕೆಂದಿದ್ದರೂ, ಹಲವು ಬಾರಿ ತೀರ್ಮಾನವಾಗಿದ್ದರೂ ಇನ್ನೂ ಕೂಡ ಮಾಡಿಲ್ಲ. 208 ಮಂದಿಯ ಗುರುತುಚೀಟಿಯ ಅವಧಿ ಮುಗಿದಿದ್ದರೂ, ಮರುನೊಂದಾವಣೆ ಮಾಡಿಲ್ಲ. ಪರ್ಯಾಯ ವ್ಯವಸ್ಥೆಯ ಭಾಗವಾಗಿ ವೆಂಡಿಂಗ್ ಝೋನ್ ರಚನೆಗೊಂಡು ಆತುರಾತುರವಾಗಿ ಉದ್ಘಾಟನೆಗೊಂಡರೂ, ಅದಕ್ಕೆ ಸರಿಯಾದ ರೀತಿಯಲ್ಲಿ ವ್ಯವಸ್ಥೆಯಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಜಾಥಾವು ಹಂಪನಕಟ್ಟೆ, ಕಂಕನಾಡಿ, ಪಂಪುವೆಲ್, ಕೆಎಸ್‌ಆರ್‌ಟಿಸಿ, ಬೊಂದೇಲ್, ಕಾವೂರು, ಸೆಂಟ್ರಲ್ ಮಾರ್ಕೆಟ್ ಸೇರಿದಂತೆ ಸುಮಾರು 15 ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿ ಲೇಡಿಗೋಷನ್ ಜಂಕ್ಷನ್‌ನಲ್ಲಿ ಸಮಾರೋಪಗೊಂಡಿತು.

ಜಾಥಾದ ಸಮಾರೋಪ ಭಾಷಣ ಮಾಡಿದ ಸಂಘದ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್‌ರವರು ಬಡಪಾಯಿ ಬೀದಿಬದಿ ವ್ಯಾಪಾರಸ್ಥರ ಮೇಲೆ ಕಾಂಗ್ರೆಸ್ಸ್ ನೇತೃತ್ವದ ಮನಪಾ ಆಡಳಿತವು ಹೀನಾಯವಾಗಿ ಧಾಳಿ ನಡೆಸುತ್ತಿರುವುದು ತೀರಾ ಖಂಡನೀಯವಾಗಿದೆ. ನಗರದ 5% ರಸ್ತೆಗಳ ಬದಿಯಲ್ಲಿ ಬೀದಿಬದಿ ವ್ಯಾಪಾರಸ್ಥರಿದ್ದು, ಉಳಿದ 95% ರಸ್ತೆಗಳ ಬದಿಯಲ್ಲಿ ವಾಹನ ಪಾರ್ಕಿಂಗ್ ಹಾಗೂ ಬಹುಮಹಡಿ ಕಟ್ಟಡಗಳ ಮಾಲಕರು ರಸ್ತೆಗಳನ್ನು ಅತಿಕ್ರಮಿಸಿದ್ದರೂ ನಗರದ ಎಲ್ಲಾ ಸಮಸ್ಯೆಗಳಿಗೆ ಬೀದಿಬದಿ ವ್ಯಾಪಾರಸ್ಥರೇ ಕಾರಣ ಎಂದು ಹೇಳುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಜಾಥಾದಲ್ಲಿ ಸಿಐಟಿಯು ಜಿಲ್ಲಾ ಮುಖಂಡರು ಯೋಗೀಶ್ ಜಪ್ಪಿನಮೊಗರು, ಸಂಘದ ಅಧ್ಯಕ್ಷರಾದ ಮಹಮ್ಮದ್ ಮುಸ್ತಫಾ, ಪ್ರಧಾನ ಕಾರ್ಯದರ್ಶಿ ಸಂತೋಷ್ ಆರ್. ಎಸ್, ಜಿಲ್ಲಾ ಮುಖಂಡರಾದ ಮಹಮ್ಮದ್ ಆಸಿಫ್, ಮುಜಾಫರ್, ಅಬ್ದುಲ್ ಖಾದರ್, ಹಿತೇಶ್ ಪೂಜಾರಿ, ಆದಂ ಬಜಾಲ್ ಉಪಸ್ಥಿತರಿದ್ದರು.

– ಸಂತೋಷ್ ಆರ್. ಎಸ್.

“ಅಂಗವಿಕಲರಿಗೆ ಉದ್ಯೋಗವೇ ಘನತೆಯ ಜೀವನ”



ಅಂಗವಿಕಲರು ತಮ್ಮದೇ ಆದಾಯ ಮೂಲವಿಲ್ಲದೇ ಪರಾವಲಂಬಿಯಾಗಿ ಬದುಕುವುದು, ಅವರನ್ನು ದೈನ್ಯತೆಯ ಬದುಕಿಗೆ ದೂಡುತ್ತದೆ. ಈ ಪಾಳೇಗಾರಿ ಸಮಾಜದಲ್ಲಿ ಅಂಗವಿಕಲತೆಯ ಬಗ್ಗೆ ಹೊಂದಿರುವ ಕಣ್ಣೋಟ, ಮೂಡನಂಬಿಕೆ ಇವರನ್ನು ಸಾಮಾಜಿಕ, ಆರ್ಥಿಕ ಚಟುವಟಿಕೆಗಳಿಂದ ದೂರವಿಡುತ್ತದೆ. ಇದ-ರಿಂದಾಗಿ ಇವರ ಜೀವನ ಹಸಿವು, ಸಂಕಟಗಳಿಂದ ತುಂಬಿದ ದಯನೀಯ ಸ್ಥಿತಿಯಾಗಿರುತ್ತದೆ. ಇವರು ಮದುವೆ, ಕುಟುಂಬ, ಕೌಟುಂಬಿಕ ಆಸ್ತಿಗಳಿಂದ ವಂಚಿತರಾಗಿರುತ್ತಾರೆ, ಅಂಗವಿಕಲ ಮಹಿಳೆಯರ ಸ್ಥಿತಿಯಂತೂ ಅತ್ಯಂತ ನಿಕೃಷ್ಟವಾಗಿರುತ್ತದೆ.

ಉದ್ಯೋಗ ಮಾತ್ರವೇ ಅಂಗವಿಕಲರನ್ನು ಘನತೆಯಿಂದ ಜೀವನ ನಡೆಸಲು ಅನುವು ಮಾಡಿಕೊಡುತ್ತದೆ. ಅಂಗವಿಕಲರ ಉದ್ಯೋಗದ ಕುರಿತಂತೆ ಕಾರ್ಯಕ್ರಮ ಹೋರಾಟಗಳನ್ನು ಮಾಡುತ್ತಿರುವುದರ ಭಾಗವಾಗಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ “ಅಂಗವಿಕಲರ ಉದ್ಯೋಗ ಮತ್ತು ಘನತೆಯ ಜೀವನ” ಕುರಿತಂತೆ ವಿಚಾರ ಸಂಕಿರಣವನ್ನು 27ನೇ ಏಪ್ರಿಲ್ 2017 ರಂದು ಬೆಂಗಳೂರಿನ ಕೊಂಡಜ್ಜಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಈ ವಿಚಾರ ಸಂಕಿರಣದ ಉದ್ಘಾಟನೆಯನ್ನು ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀಯುತ ಡಿವಿ. ಪ್ರಸಾದ್‌ರವರು ನೆರವೇರಿಸಿದರು. ಇವರು ಮಾತನಾಡಿ ಅಂಗವಿಕಲರು ಸಂಕಷ್ಟಗಳ ನಡುವೆಯೂ ತಮ್ಮ ಬದುಕಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಅಂಗವಿಕಲರ ನಡುವೆ ಜಾಗೃತಿಯ ಕೊರತೆ ಇತ್ತು, ಈಗ ಅಂಗವಿಕಲರು ಜಾಗೃತರಾಗುತ್ತಿದ್ದಾ-ರೆ. ತಾವು ಘನತೆಯಿಂದ ಜೀವನ ನಡೆಸಬೇಕೆಂಬ ಮಹತ್ವಾಕಾಂಕ್ಷೆ ಅವರಲ್ಲಿ ಮೂಡತೊಡಗಿದೆ. ಅಂಗವಿಕಲರಿಗಿರುವ ಉದ್ಯೋಗ ಮೀಸಲಾತಿಯನ್ನು ಸಮರ್ಪಕವಾಗಿ ಬಳಸಬೇಕಾಗಿದೆ. ಅಂಗವಿಕಲರಿಗೆ ಉದ್ಯೋಗದ ಕುರಿತಂತೆ ಹೆಚ್ಚೆಚ್ಚು ತರಬೇತಿಗಳಾಗಬೇಕು. ಅದಕ್ಕೆ ಬೇಕಾದ ಪೂರಕ ಕ್ರಮಗಳನ್ನು ನಮ್ಮ ಇಲಾಖೆಗಳಿಂದ ತೆಗೆದುಕೊಳ್ಳುತ್ತೇನೆ. ತರಬೇತಿಗೊಂಡ ಅಂಗವಿಕಲರಿಗೆ ಉದ್ಯೋಗ ನೀಡುವ ಕುರಿತಂತೆ ಕೈಗಾರಿಕಾ ಇಲಾಖೆಯ ಮುಖ್ಯಸ್ಥರ ಸಭೆ ಕರೆದು ಉದ್ಯೋಗ ಸೃಷ್ಟಿಸಿ ಅಂಗವಿಕಲರಿಗೆ ಉದ್ಯೋಗ ನೀಡಲಾಗುವುದು ಎಂದು ಭರವಸೆ ನೀಡಿದರು.

ಆಶಯ ಪ್ರಬಂಧ ಮಂಡಿಸಿದ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಅಧ್ಯಕ್ಷರಾದ ಶ್ರೀ ಜಿಎನ್. ನಾಗರಾಜ್ ಮಾತನಾಡಿ ಅಂಗವಿಕಲರ ಉದ್ಯೋಗ, ಜೀವನ ಭದ್ರತೆಗಾಗಿ ಒಂದು ಸಮಗ್ರ ಯೋಜನೆಯನ್ನು ಸರ್ಕಾರ ರೂಪಿಸಬೇಕಾಗಿದೆ. ಇದಕ್ಕೆ ಖಾಸಗಿ ಉದ್ದಿಮೆಗಳ ಸಂಘ, ಅಂಗವಿಕಲರ ಬೇರು ಮಟ್ಟದ ಸಂಘಟನೆಗಳು ಮತ್ತು ಅನುಭವ ತಜ್ಞರನ್ನು ಜೊತೆಗೂಡಿಸಿಕೊಳ್ಳಬೇಕು. ಪದವಿ, ಸ್ನಾತಕೋತ್ತರ ಪದವಿ ಪಡೆದ ಅಂಗವಿಕಲರು ಅಸಮರ್ಥರು ಎಂಬ ಕಾರಣ ಹೇಳಿ ಉದ್ಯೋಗ ನಿರಾಕರಿಸಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಮುಗಿಸಿದ ಅಂಗವಿಕಲರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇವರಿಗೆಲ್ಲಾ ಉದ್ಯೋಗ ನೀಡಲು ಸಾಧ್ಯವಾಗಬೇಕು. ಸಿ ಮತ್ತು ಡಿ ದರ್ಜೆಯ ಸರ್ಕಾರಿ ಉದ್ಯೋಗದಲ್ಲಿ ಅಂಗವಿಕಲರಿಗೆ ಶೇಕಡ 5% ಮೀಸಲಾತಿ ಖಾತರಿಗೊಳಿಸಬೇಕು. ಕುಳಿತಲ್ಲೇ ಸುಲಭವಾಗಿ ಬುದ್ಧಿಮಾಂದ್ಯರನ್ನೊಳಗೊಂಡು, ಅಂಗವಿಕಲರೇ ಮಾಡಬಲ್ಲ ಕೆಲಸಗಳಿದ್ದು, ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಈ ಕುರಿತಂತೆ ಆದೇಶ ಹೊರಡಿಸಲು ಸಾಧ್ಯವಾಗಬೇಕು. ಅರಣ್ಯ ಇಲಾಖೆಯ ನರ್ಸರಿ ವಿಭಾಗದಲ್ಲಿ, ಸರ್ಕಾರಿ ಫೈಲುಗಳು, ಪುಸ್ತಕಗಳು, ಉದ್ಯೋಗ ಖಾತ್ರಿಯಲ್ಲಿ ಮೇಟಿ ಕೆಲಸ, ಈ ರೀತಿಯ ಸಾಕಷ್ಟು ಯೋಜನೆಗಳಲ್ಲಿ ಅಂಗವಿಕಲರಿಗೆ ಉದ್ಯೋಗ ನೀಡಬಹುದಾಗಿದೆ. ಸರ್ಕಾರ ಮಾದರಿ ವರ್ಕ್‌ಶಾಪ್, ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ವಿಶೇಷ ಶೆಡ್‌ಗಳನ್ನು ಅಂಗವಿಕಲರಿಗಾಗಿ ನಿರ್ಮಿಸಿ ಖಾಸಗಿ ಕೈಗಾರಿಕೆಗಳಿಗೆ ಮಾದರಿಯಾಗುವುದು. ಈ ರೀತಿಯ ಸಮಗ್ರ ಯೋಜನೆಗಳನ್ನು ಅಂಗವಿಕಲರಿಗಾಗಿ ಮಾಡಬೇಕಾಗಿದೆ ಎಂದರು.

ಕರ್ನಾಟಕ ಬುದ್ಧಿಮಾಂದ್ಯ ಮಕ್ಕಳ ಪೋಷಕರ ಸಂಘ ದ ಗೌರವ ಕಾರ್ಯದರ್ಶಿ ಶ್ರೀ ಜೆಪಿ. ಗಡ್ಕರಿಯವರು ‘ಬೌದ್ಧಿಕ ಸವಾಲುಗಳನ್ನು ಎದುರಿಸುತ್ತಿರುವವರಿಗೆ ಉದ್ಯೋಗದ ಅವಶ್ಯಕತೆ ಮತ್ತು ಸವಾಲುಗಳು’ ಈ ಕುರಿತಂತೆ ಪ್ರಬಂಧ ಮಂಡಿಸಿ, ಮಾತನಾಡಿ ಸರ್ಕಾರಗಳು ಅಂಗವಿಕಲರನ್ನು ಕಡೆಗಣಿಸುತ್ತಿವೆ, ಉದ್ಯೋಗಗಳನ್ನು ನಿರಾಕರಿಸಲಾಗುತ್ತಿದೆ. ಬುದ್ಧಿಮಾಂದ್ಯ ಮಕ್ಕಳನ್ನು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವ ರೀತಿಯಲ್ಲಿ ಅನುಕೂಲತೆಗಳು ಮತ್ತು ನಿಯಮಗಳನ್ನು ರೂಪಿಸಬೇಕಾಗಿದೆ ಎಂದರು. ಅಂಗವಿಕಲರ ಸರ್ಕಾರೇತರ ಸಂಸ್ಥೆಗಳ ಕೂಟ-ಡಿಎನ್‌ಎ ದ ಸಿಇಓ ರಾದ ಶ್ರೀ ವಿಎಸ್. ಬಸವರಾಜ್‌ರವರು ‘ಅಂಗವಿಕಲರಿಗೆ ಉದ್ಯೋಗ-ಅನುಭವಗಳು’ ಈ ಕುರಿತಂತೆ ಪ್ರಬಂಧ ಮಂಡಿಸಿ, ಮಾತನಾಡಿ ಅಂಗವಿಕಲರು ಈಗಲೂ ಘನತೆಯ ಜೀವನಕ್ಕಾಗಿ ಹೋರಾಟ ಮಾಡಬೇಕಾಗಿದೆ. ಎಲ್ಲಾ ಇಲಾಖೆಗಳಲ್ಲಿ ಅಂಗವಿಕಲರ ಅನುದಾನವಿದ್ದು ಅದನ್ನು ಅಂಗವಿಕಲರಿಗಾಗಿ ಸಮರ್ಪಕವಾಗಿ ಬಳಸಬೇಕಾಗಿದೆ. ಎಲ್ಲಾ ಇಲಾಖೆಗಳಲ್ಲಿ ಅಂಗವಿಕಲರಿಗೆ ಉದ್ಯೋಗ ನೀಡಲು ಸಾಧ್ಯವಾಗಬೇಕು ಎಂದರು.

ವೇದಿಕೆಯ ಮೇಲೆ ಅಂಗವಿಕಲರ ರಕ್ಷಣಾ ವೇದಿಕೆಯ ಕಾರ್ಯದರ್ಶಿ ಚಂದ್ರಶೇಕರ ಕುಟ್ಟಪ್ಪ, ರಫೀಕ್. ಸೋಚಾರ್ ಸಂಸ್ಥೆಯ ಆಲ್ಫ್ರೆಡ್ ರಾಜು, ಸ್ವಾಸ್ತಿಕ್ ಸೊಸೈಟಿಯ ಸಂಯೋಜ-ಕರಾದ ಚಾಂದಬಾಷ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರಾದ ಯಮುನಾ, ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಪದಾದಿಕಾರಿಗಳಾದ ಜಿಎನ್. ಯಶಸ್ವಿ, ಸೋಮಪ್ಪ ಆಯಟ್ಟಿ, ಉಸ್ಮಾನ ಬಾಷ, ಪಿ, ಚಾಂದಬೀ, ಕರಿಯಪ್ಪ ಅಜ್ಜೊಳ್ಳಿ, ಮಂಜುನಾಥ ಹೆಬ್ಬಾರ್, ಎಸ್. ವೆಂಕಟೇಶ್, ವೆಂಕಟೇಶ್ ಕೋಣಿ, ಕುಮಾರ್‌ಮಂಡ್ಯ, ಉಪಸ್ಥಿತರಿದ್ದರು. ವಿಚಾರ ಸಂಕಿರಣದ ಕಾರ್ಯಕ್ರಮವನ್ನು ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳಾದ ರಂಗಪ್ಪ ದಾಸರ ನಿರೂಪಿಸಿದರು, ಸ್ವಾಗತವನ್ನು ಒಕ್ಕೂಟದ ಖಜಾಂಚಿ ಅರ್ಷದ ರಾಜನ್ ಮಾಡಿದರೆ ವಂದನಾರ್ಪಣೆಯನ್ನು ಒಕ್ಕೂಟದ ಕಾರ್ಯದರ್ಶಿ ಜಿಎನ್. ಯಶಸ್ವಿ ನೆರವೇರಿಸಿದರು.

10 ಜಿಲ್ಲೆಗಳಿಂದ ಅಂಗವಿಕಲರು ಭಾಗವಹಿಸಿದ್ದರು. ಅಂಧರು, ಕುಬ್ಜರು, ಶ್ರವಣ ದೋಷವುಳ್ಳವರು ಮತ್ತು ಅವರ ಪಾಲಕರು, ಮಾನಸಿಕ, ದೈಹಿಕ ಅಂಗವಿಕಲರು, ಅವರ ಪೋಷಕರು, ಅಂಗವಿಕಲರ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಕ್ರೈಸ್ಟ್ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

– ರಂಗಪ್ಪ ದಾಸರ

ಸಂಗಾತಿ ಗುಂಪು ವಲಯ ಸಮಾವೇಶ ಲಾಭಾಂಶ ವಿತರಣೆ



ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಅವಿರತ ಹೋರಾಟಗಾರ ಬಿ.ಎಂ.ಭಟ್ ನೇತೃತ್ವದಲ್ಲಿ ಸಂಗಾತಿ ಗುಂಪು ಯೋಜನೆ ಸಾಧಿಸಿ ತೋರಿಸಿದೆ ಎಂದು ಅಳದಂಗಡಿ ಗ್ರಾಮ ಪಂಚಾಯತು ಅಧ್ಯಕ್ಷರಾದ ಶ್ರೀ ಸತೀಶ್ ಮಿತ್ತಮಾರ್ ಹೇಳಿದರು.

ಅವರು ಇಂದು ಅಳದಂಗಡಿ ಗ್ರಾಮ ಪಂಚಾಯತ್ ಸಬಾಂಗಣದಲ್ಲಿ ಮೇ ದಿನಾಚರಣೆ-ಯ ಅಂಗವಾಗಿ ನಡೆದ ಸಂಗಾತಿ ಗುಂಪು ಸದಸ್ಯರ ವಲಯ ಸಮಾವೇಶ, ಲಾಭಾಂಶ ವಿತರಣೆ ಮಾಡಿ ಸಭೆಯನ್ನುದ್ದೇಶಿಸಿ ಮಾತಾಡುತ್ತಿದ್ದರು. ಸ್ವಸಹಾಯ ಗುಂಪುಗಳಿಗೆ ಗ್ರಾಮ ಪಂಚಾಯತಿನಿಂದ ಎಲ್ಲಾ ರೀತಿಯ ಸಹಾಯ ನೀಡಲಾಗುವುದು ಎಂದವರು ಈ ಸಂದರ್ಬ ಹೇಳಿದರು.

ಸಂಗಾತಿ ಗುಂಪು ಯೋಜನೆಯ ವ್ಯವಸ್ಥಾಪಕ ನಿರ್ಧೇಶಕರಾದ ನ್ಯಾಯವಾದಿ ಬಿ.ಎಂ.ಭಟ್ ಮಾತಾಡುತ್ತಾ ಇಂದಿನ ಬಂಡವಾಳಶಾಹಿ ಪ್ರಜಾಪ್ರಭುತ್ವದಡಿ ನಮ್ಮ ರೈತ-ಕಾರ್ಮಿಕರ ಏಳಿಗೆ ಅಸಾಧ್ಯ. ಜನತಾ ಪ್ರಜಾಪ್ರಭುತ್ವ ಜಾರಿಯಾಗಲು ನಾವೂ ಹೋರಾಡಬೇಕಿದೆ ಇಲ್ಲದಿದ್ದರೆ ನಮ್ಮ ಹಿರಿಯರು ನಮಗೆ ನೀಡಿದ ಈ ಬದುಕು ಕೂಡಾ ಮುಂದಿನ ಪೀಳಿಗೆಗೆ ಇಲ್ಲದಾದೀತು. ಮುಂದಿನ ಭವಿಷ್ಯದ ಒಳಿತಿಗೆ ಹೋರಾಟದ ಹಾದಿಯನ್ನು ಆರಿಸಿಕೊಂಡು ಸಂಗಾತಿ ಸದಸ್ಯರು ಮುನ್ನಡೆಯಬೇಕು ಎಂದರು.

ಸುಮಾರು 42 ಗುಂಪುಗಳ ಸದಸ್ಯರು ಹಾಜರಿದ್ದು, 5 ವರ್ಷತುಂಬಿದ 18 ಗುಂಪುಗಳಿಗೆ 6 ಲಕ್ಷ ರೂಗಳ ಲಾಭಾಂಶಗಳನ್ನು ವಿತರಣೆ ಮಾಡಲಾಯಿತು. ಸಭೆಯ ಅದ್ಯಕ್ಷತೆಯನ್ನು ಸಂಗಾತಿ ಗುಂಪಿನ ಸದಸ್ಯರೂ, ಗ್ರಾಮಪಂಚಾಯತು ಸದಸ್ಯೆಯೂ ಆದ ಶ್ರೀಮತಿ ಸುನೀತ ವಹಿಸಿದ್ದರು. ಅಳದಂಗಡಿ, ನಾರಾವಿ ವಲಯಗಳ ಸಂಚಾಲಕರಾದ ಲೋಕೇಶ್ ಕುದ್ಯಾಡಿ, ಕಟ್ಟಡ ಕಾರ್ಮಿಕರ ಸವಲತ್ತುಗಳ ಬಗ್ಗೆ ವಿವರಣೆ ನೀಡಿದರು. ತಾಲೂಕು ಸಂಚಾಲಕರಾದ ಜಯರಾಮ ಮಯ್ಯ ಅವರು ಸಂಗಾತಿ ಗುಂಪುಗಳ ಶಿಸ್ತುಬದ್ಧ ನಿರ್ವಹಣೆ ಬಗ್ಗೆ ವಿವರಿಸಿದರು. ವೇದಿಕೆಯಲ್ಲಿ ಡಿ.ವೈ.ಎಫ್.ಐ. ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ವಿಠಲ ಎಂ.ಕೆ., ಸಿಐಟಿಯು ಜಿಲ್ಲಾ ಸಮಿತಿ ಸದಸ್ಯರಾದ ಶ್ರೀಮತಿ ದೇವಕಿ, ರೈತ ಮುಖಂಡರಾದ ಸುಜಾತ ಹೆಗ್ಡೆ, ವೀನಸ ಮೊದಲಾದವರಿದ್ದರು. ನೂತನ ವಲಯ ಸಮಿತಿ ರಚಿಸಲಾಯಿತು.

ಅರಣ್ಯ ಇಲಾಖೆಯ ಕಾಮಗಾರಿಯನ್ನು ಮನರೇಗಾ ಅಡಿಯಲ್ಲಿ ಆರಂಭ

3 ಮೇ 2017 ರಂದು ಚಿಂಚೋಳಿ ತಾಲ್ಲೂಕಿನ ವೆಂಕಟಾಪೂರ ಗ್ರಾಮ ಪಂಚಾಯತ ವ್ಯಾಪ್ತಿಯ ಒಂಟಿಚಿಂತಾ ತಾಂಡಾದಲ್ಲಿ ಅರಣ್ಯ ಇಲಾಖೆಯ ಕಾಮಗಾರಿಯನ್ನು ಮನರೇಗಾ ಅಡಿಯಲ್ಲಿ ಆರಂಭ ಮಾಡಲಾಯಿತು. ಒಟ್ಟು 140 ಜನ ಕೆಲಸಗಾರರ ಎನ್.ಎಂ.ಆರ್. ಸೃಜಿಸಲಾಗಿದ್ದು ಕಾಮಗಾರಿಯ ಉದ್ಘಾಟನೆಯನ್ನು ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ನಂದಾದೇವಿ ಮಂಗೊಂಡಿ ಇವರು ನೆರವೇರಿಸಿದರು. ಒಂಟಿಚಿಂತಾ ತಾಂಡಾದಿಂದ ಈಗಾಗಲೇ ಸಂಘಟನೆಯಿಂದ ಜಾಗೃತಿ ಅಭಿಯಾನ ನಡೆಸಿ 307 ಜನರ ಕೆಲಸ ಬಯಸಿದ ಅರ್ಜಿ ನಮೂನೆ 6ನ್ನು ಭರ್ತಿ ಮಾಡಿ ಕೊಡಲಾಗಿತ್ತು. ಇನ್ನೂಳಿದವರ ಎನ್.ಎಂ.ಆರ್. ಕೂಡಲೇ ಸೃಜಿಸಿ ಬೇಗ ಕೆಲಸ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ನಂದಾದೇವಿಯವರು ಆಗ್ರಹಿಸಿದರು. ಈ ಭಾಗದ ವಲಸೆ ತಪ್ಪಿಸಲು ಮತ್ತು ದುಡಿವ ಜನರ ಕೈಗೆ ಕೆಲಸ ಒದಗಿಸಲು ಮನರೇಗಾವನು ಸಂಪೂರ್ಣ ಅನುಷ್ಠಾನಕ್ಕೆ ತರುವ ಹೊಣೆಯು ಹೊರಬೇಕಾದದ್ದು ಗ್ರಾಮ ಪಂಚಾಯತನ ಜವಾಬ್ದಾರಿಯಾಗಿದೆ. ಈಗಾಗಲೇ ಫೆಬ್ರವರಿ ಮಾರ್ಚ್ ತಿಂಗಳಲ್ಲಿ ಕೆಲಸಗಾರರ ಬ್ಯಾಂಕ್ ಖಾತೆಯನ್ನೊಳಗೊಂಡ ಇನ್ನಿತರ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿಕೊಂಡು ಎಪ್ರಿಲ್ ಒಂದರಿಂದ ಕೆಲಸ ದೊರಕಿಸುವ ದಿಕ್ಕಿನಲ್ಲಿ ಸಿದ್ಧಗೊಳಿಸಿಕೊಳ್ಳಬೇಕಾಗಿತ್ತು. ಈ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದರಿಂದ ಮನರೇಗಾದ ಪೂರ್ತಿ ಪ್ರಯೋಜನ ಪಡೆಯುವಲ್ಲಿ ಸಮಸ್ಯೆಯಾಗುತ್ತಿದೆ ಎಂದು ಹೇಳಿದರು.

ಜನವಾದಿ ಮಹಿಳಾ ಸಂಘಟನೆಯ ನೀಲಾ ಕೆ ಮತ್ತು ನಿಂಗಪ್ಪ ಮಂಗೊಂಡಿ ಇವರು ಮಾತನಾಡಿದರು. ಯಲ್ಲಮ್ಮ, ಕ್ಷೇತ್ರ ಸಹಾಯಕರಾದ ಚಂದ್ರಶೇಖರ್, ಗಂಗಾಧರ ಮತ್ತು ಖಾಸಿಂ ಅಲಿ ಇತರರು ಹಾಜರಿದ್ದರು.

ವಿವಾದಗಳು, ಚಿತ್ರ ವಿಮರ್ಶಕರ ಟೀಕೆಗಳಾಚೆಗೂ ಬಾಹುಬಲಿ ಲಾಭ ಬಾಚಿಕೊಳ್ಳುತ್ತ ನಾಗಾಲೋಟದಲ್ಲಿದೆ. ಒಂದೆಡೆ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಲಾಗಿರುವ ಸಿನೆಮಾದಲ್ಲಿ ಸನಾತನ ಅಪಮೌಲ್ಯಗಳನ್ನು ಬಿತ್ತಲಾಗಿದೆ. ಆದ್ದರಿಂದ ಗಳಿಕೆಯ ಲೆಕ್ಕದಲ್ಲಿ ಅದೆಷ್ಟು ದಾಖಲೆಗಳನ್ನು ಮುರಿದರೂ ನೈತಿಕತೆಯಲ್ಲಿ ಶ್ರೇಷ್ಠತೆಯ ಅಂಚನ್ನೂ ಬಾಹುಬಲಿ ಮುಟ್ಟಲು ಸಾಧ್ಯವಿಲ್ಲ ಎಂದು ಸೂಕ್ಷ್ಮಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಗ್ರಾಫಿಕ್ಸ್ ಕಣ್ಕಟ್ಟನ್ನು ಬದಿಗಿಟ್ಟು ನೋಡಿದರೆ ಬಾಹುಬಲಿ ಸೀಕ್ವೆಲ್ ಅಪ್ಪಟ ತಾರತಮ್ಯವಾದಿ. ಇಲ್ಲಿ ಪೌರುಷ, ಕ್ಷಾತ್ರ ಧರ್ಮ ಹಾಗೂ ಶ್ವೇತವರ್ಣಗಳ ವಿಜೃಂಭಣೆಯಿದೆ.

– ಗಾಯತ್ರಿ ಎಚ್. ಎನ್

ಹಿಂದಿ ಹೇರಿಕೆ: 'ಭಾರತ'ದ ಆಶಯಕ್ಕೆ ಅಪಾಯ

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ್

ಇಂದು ನಮ್ಮ ಒಕ್ಕೂಟ ವ್ಯವಸ್ಥೆಗೆ ಹೇಗೆ ದಕ್ಕೆ ಬರುತ್ತಿದೆ ಎಂಬುದನ್ನು ಜನಶಕ್ತಿಯ ಹಿಂದಿನ ಸಂಚಿಕೆಯಲ್ಲಿ ಚರ್ಚೆ ಮಾಡಲಾಗಿದೆ(ಜನಶಕ್ತಿ 12, ಮ: 2, 6 ಮತ್ತು 14). ನಮ್ಮ ಒಕ್ಕೂಟ ವ್ಯವಸ್ಥೆಯ ಮೇಲೆ ವಿವಿಧ ರೀತಿಯಿಲ್ಲಿ ಕೇಂದ್ರದ ಆಕ್ರಮಣ ನಡೆದಿದೆ. ನಮ್ಮ ಸಂವಿಧಾನವನ್ನು ವಿದ್ವಾಂಸರು 'ರಚನೆಯಲ್ಲಿ ಒಕ್ಕೂಟ: ಆಶಯದಲ್ಲಿ ಏಕಾತ್ಮಕ' ಎಂದು ವಿಮರ್ಶೆ ಮಾಡಿದ್ದಾರೆ. ಇದಕ್ಕೆ ಇಂಬು ಕೊಡುವ ರೀತಿಯಲ್ಲಿ ಇಂದು ವಿವಿಧ ಬಗೆಯಲ್ಲಿ ಒಕ್ಕೂಟ ಸೂತ್ರಕ್ಕೆ ವಿರುದ್ಧವಾದ ಕ್ರಮಗಳು ಜಾರಿಯಾಗುತ್ತಿವೆ. ನಮ್ಮ ದೇಶದಲ್ಲಿ ಇಂದು ಅಖಂಡತೆ, ದೇಶನಿಷ್ಠೆ, ಏಕರೂಪತೆ ಮುಂತಾದ ಏಕಾತ್ಮಕ ಸಂಗತಿಗಳ ಬಗ್ಗೆ ಹೆಚ್ಚಿನ ಅವಧಾರಣೆ ದೊರೆಯುತ್ತಿದೆ. ಅಖಂಡತೆ, ಏಕರೂಪತೆಗಳಿಗೆ ಸಂಬಂಧಿಸಿದಂತೆ ಇಲ್ಲದ ಅಪಾಯವನ್ನು ಊಹಿಸಿಕೊಂಡು ಒಕ್ಕೂಟ ವ್ಯವಸ್ಥೆಯನ್ನು ಮೂರಾಬಟ್ಟೆಗೊಳಿಸುವ ಕ್ರಮಗಳು ಕಂಡುಬರುತ್ತಿವೆ. ಅಖಂಡತೆ ಅನ್ನುವುದು ನಾವು ಭಾವಿಸುವ ಸಂಗತಿಯೇ ವಿನಾ ಭವದ ಸಂಗತಿಯಲ್ಲ.

ಪ್ರಾಚೀನ ಕಾಲದಿಂದಲೂ ಭಾರತ ಅನ್ನುವುದು ಒಕ್ಕೂಟ ವ್ಯವಸ್ಥೆಯಾಗಿ ಬೆಳೆದುಕೊಂಡು ಬಂದಿದೆ. ಅದು ಒಂದು ಆಡಳಿತ ದಡಿಯಲ್ಲಿ ಬಾರದಿದ್ದರೂ ಭಾವನೆಯಲ್ಲಿ ಭಾರತ ಅನ್ನುವುದು ಜನರ ಮನಸ್ಸಿನಲ್ಲಿತ್ತು. ಏಕಚಕ್ರಾಧಿಪತ್ಯ ಅನ್ನುವುದು ನಮ್ಮಲ್ಲಿ ಇದ್ದಿದ್ದರೂ ಅದು ಸೀಮಿತ ನೆಲೆಯಲ್ಲಿತ್ತು. ಅದಕ್ಕೆ ಅನೇಕ ಮಿತಿಗಳಿದ್ದವು. ಕರ್ನಾಟಕ ಒಕ್ಕೂಟ ಮೀಮಾಂಸೆಗೆ ಸಾವಿರ ವರ್ಷಕ್ಕೂ ಮೀರಿದ ಚರಿತ್ರೆಯಿದೆ. ಅತ್ಯಂತ ಜವಾಬ್ದಾರಿಯುತವಾಗಿ ಅದನ್ನು ಕರ್ನಾಟಕಸ್ಥರು ಕಾಯ್ದುಕೊಂಡು ಬಂದಿದ್ದಾರೆ. ಹತ್ತನೆಯ ಶತಮಾನಕ್ಕೆ ಸೇರಿದ ಕವಿರಾಜಮಾರ್ಗ ಎಂಬ ಕನ್ನಡ ಕೃತಿ ಇದನ್ನು ಹೀಗೆ ಹಿಡಿದಿಟ್ಟಿದೆ.

ಕಾವೇರಿಯಿಂದ ಮಾ ಗೋದಾವರಿವರಮಿರ್ಪ
ನಾಡದಾ ಕನ್ನಡದೊಳ್ ಭಾವಿಸಿದ ಜನಪದ
ವಸುಧಾ ವಲಯ ವಿಲೀನ ವಿಶದ ವಿಷಯ
ವಿಶೇಷಂ

ಈ ಕಂದ ಪದ್ಯದಲ್ಲಿರುವ ಮೊದಲ ಎರಡು ಸಾಲುಗಳ ಬಗ್ಗೆ ಕನ್ನಡ ಹೋರಾಟಗಾರರು ಹಾಗೂ ವಿದ್ವಾಂಸರು ಟೀಕೆ– ಟಿಪ್ಪಣಿ, ಚರ್ಚೆ–ಸಂವಾದ ನಡೆಸಿಕೊಂಡು ಬಂದಿದ್ದಾರೆ. ಈ ಪದ್ಯದ ಮೂರನೆಯ ಸಾಲು ಭಾಷೆಯನ್ನು ಬಿಟ್ಟು ರಾಜಕೀಯವಾಗಿ ಪ್ರಮುಖವಾದ ಚಿಂತನೆಯೊಂದನ್ನು ಪ್ರತಿಪಾದಿಸುತ್ತಿದೆ. ಕನ್ನಡನಾಡು ಅನ್ನುವ 'ವಲಯ'ವು 'ವಸುಧೆ'ಯಲ್ಲಿ (ವಿ)ಲೀನವಾಗಿದೆ. ಆದರೆ ಅಲ್ಲಿ ಅದು ತನ್ನತನವನ್ನು ರೂಪಿಸಿಕೊಂಡಿದೆ. ವಸುಧೆಯಲ್ಲಿ ಅದು ವಿಲೀನವಾಗಿದ್ದರೂ ವಿಶಾಲವಾದ ಅದು ತನ್ನದೇ ಆದ ಅತಿಶಯವಾದ ಗುಣವನ್ನು ಹೊಂದಿದೆ. ಅದಕ್ಕೆ ತನ್ನದೇ ಆದ ವಿಶೇಷತೆಯಿದೆ. ಅದನ್ನು ಅದು ಕಾಯ್ದುಕೊಂಡು ಬರುತ್ತಿದೆ. ವಿಶಿಷ್ಠತೆ ಮತ್ತು ವಿಶ್ವಾತ್ಮಕತೆ– ಎರಡೂ ಕರ್ನಾಟಕ ಒಕ್ಕೂಟ ಮೀಮಾಂಸೆಯ ಗುಣಗಳಾಗಿವೆ. ಈ ಒಕ್ಕೂಟ ಮೀಮಾಂಸೆಯಲ್ಲಿರುವ ರಾಜಕೀಯ ಚಿಂತನೆಯನ್ನು ನಾವು ಮರೆಯಲು ಸಾಧ್ಯವಿಲ್ಲ. ವಿಶಿಷ್ಠತೆ ಮತ್ತು ವಿಶ್ವಾತ್ಮಕತೆಗಳ ನಡುವೆ ಸಮತೋಲನವನ್ನು ಅದು ಸಾಧಿಸಿಕೊಂಡು ಬರುತ್ತಿದೆ.

ಹಿಂದಿ: ರಾಷ್ಟ್ರ ಭಾಷೆಯಲ್ಲ!

ನಮ್ಮ ಸಂವಿಧಾನ ಕರ್ತೃಗಳು



ಜವಾಬ್ದಾರಿಯುತವಾಗಿ ಹಿಂದಿಯನ್ನು ಒಂದು ಸಂಪರ್ಕ–ಅಧಿಕೃತ ಭಾಷೆಯನ್ನಾಗಿ ಘೋಷಿಸಿದ್ದಾರೆ ವಿನಾ ಅದನ್ನು ರಾಷ್ಟ್ರ ಭಾಷೆಯನ್ನಾಗಿ ಘೋಷಿಸಿಲ್ಲ. ಅಂತಹ ಪ್ರಯತ್ನ ನಡೆದರೂ ಮುತ್ಸದ್ದಿಗಳಾಗಿದ್ದ ನಮ್ಮ ಹಿರಿಯರು ಒಕ್ಕೂಟ ತತ್ವವನ್ನು ಒಪ್ಪಿಕೊಂಡಿದ್ದರು. ಆದರೆ ಇಂದು ಅಖಂಡತೆಯ ಹೆಸರಿನಲ್ಲಿ ಹಿಂದಿಯನ್ನು ಹಿಂದಿಯೇತರರ ಮೇಲೆ ಹೇರುವ ಪ್ರಯತ್ನ ನಡೆದಿದೆ. ಪ್ರಸಿದ್ಧ ಅಂಕಣಗಾರ ಕುಲದೀಪ್ ನಯ್ಯರ್ ಹೇಳಿರುವಂತೆ(ಡೆಕ್ಕನ್ ಹೆರಾಲ್ಡ್ 27.04.2017) ಕೇಂದ್ರ ಸರ್ಕಾರವು ಹಿಂದಿ ಭಾಷಾಂಧರ ಮಾರ್ಗದರ್ಶನದಲ್ಲಿ ನಡೆಯುತ್ತಿರುವಂತೆ ಕಾಣುತ್ತಿದೆ. ಕೇಂದ್ರದ ಕೆಲವು ಉದಾರವಾದಿ ಸಚಿವರು ಹಿಂದಿಯನ್ನು ಸಾವಕಾಶವಾಗಿ ದಕ್ಷಿಣದಲ್ಲಿ ಜಾರಿಗೆ ತರಬೇಕು ಎಂಬ ಸೌಜನ್ಯದ ಮಾತುಗಳನ್ನಾಡುತ್ತಿದ್ದಾರೆ. ಆದರೆ ಇವರ ಪ್ರಭಾವ ಕೇಂದ್ರದಲ್ಲಿ ನಿರ್ಣಾಯಕವಾದುದೇನಲ್ಲ. ಇಂತಹ ಕ್ರಮಗಳಿಂದಾಗಿ 'ಭಾರತ' ಅನ್ನುವ ಆಶಯಕ್ಕೆ ಅಪಾಯ ಉಂಟಾಗುತ್ತಿದೆ. ಬಹುಸಂಖ್ಯಾತ ಹಿಂದಿಯೇತರ ಭಾರತೀಯರ ಭಾವನೆಗಳಿಗೆ ದಕ್ಕೆ ಉಂಟಾಗುತ್ತಿದೆ.

ನಮ್ಮ ಸಂವಿಧಾನ ಕರ್ತೃಗಳು ಜವಾಬ್ದಾರಿಯುತವಾಗಿ ಹಿಂದಿಯನ್ನು ಒಂದು ಸಂಪರ್ಕ–ಅಧಿಕೃತ ಭಾಷೆಯನ್ನಾಗಿ ಘೋಷಿಸಿದ್ದಾರೆ ವಿನಾ ಅದನ್ನು ರಾಷ್ಟ್ರ ಭಾಷೆಯನ್ನಾಗಿ ಘೋಷಿಸಿಲ್ಲ. ಆದರೆ ಇಂದು ಅಖಂಡತೆಯ ಹೆಸರಿನಲ್ಲಿ ಹಿಂದಿಯನ್ನು ಹಿಂದಿಯೇತರರ ಮೇಲೆ ಹೇರುವ ಪ್ರಯತ್ನ ನಡೆದಿದೆ. ಕೇಂದ್ರ ಸರ್ಕಾರವು ಹಿಂದಿ ಭಾಷಾಂಧರ ಮಾರ್ಗದರ್ಶನದಲ್ಲಿ ನಡೆಯುತ್ತಿರುವಂತೆ ಕಾಣುತ್ತಿದೆ. ಇಂತಹ ಕ್ರಮಗಳಿಂದಾಗಿ 'ಭಾರತ' ಅನ್ನುವ ಆಶಯಕ್ಕೆ ಅಪಾಯ ಉಂಟಾಗುತ್ತಿದೆ. ಬಹುಸಂಖ್ಯಾತ ಹಿಂದಿಯೇತರ ಭಾರತೀಯರ ಭಾವನೆಗಳಿಗೆ ದಕ್ಕೆ ಉಂಟಾಗುತ್ತಿದೆ.

ನಮ್ಮ ಒಕ್ಕೂಟ ವ್ಯವಸ್ಥೆ ; ಮತ್ತು ಅದಕ್ಕೆ ಬರುತ್ತಿರುವ ಅಪಾಯಗಳು

- ಸರ್ಕಾರಿ ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ವಿಷಯವನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಚರ್ಚಿಸುವಾಗ ಹಿಂದಿ ಭಾಷೆಯನ್ನೇ ಬಳಸಬೇಕು ಎಂಬ ಆದೇಶ
- ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಮೈಲುಗಲ್ಲುಗಳ ಮೇಲೆ ಮಾರ್ಗದರ್ಶನ ಹಿಂದಿಯಲ್ಲಿರಬೇಕು ಅನ್ನುವ ಕ್ರಮ
- ನಮ್ಮ ಸಂವಿಧಾನದಲ್ಲಿ ರಾಷ್ಟ್ರೀಯ ಭಾಷೆ ಅನ್ನುವುದಕ್ಕೆ ಸಂಬಂಧಿಸಿದಂತೆ ಯಾವುದೇ ಪರಿಚ್ಛೇದವಿಲ್ಲ(ಆರ್ಟಿಕಲ್)
- ನಮ್ಮ ಸಂವಿಧಾನದಲ್ಲಿ ಹಿಂದಿಯನ್ನು ಸೇರಿಸಿಕೊಂಡು 22 ಭಾಷೆಗಳಿಗೆ 'ಅಧಿಕೃತ(ಅಫಿಶಿಯಲ್) ಭಾಷೆಗಳು' ಎಂದು ಮನ್ನಣೆ ನೀಡಲಾಗಿದೆ.
- ನಮ್ಮ ದೇಶದಲ್ಲಿ ಹಿಂದಿ ಮಾತನಾಡುವ/ ಜ್ಞಾನವಿರುವವರ ಪ್ರಮಾಣ ಶೇ. 45. ಆದರೆ ಹಿಂದಿ ತಾಯಿನುಡಿಯಾಗಿರುವವರ ಪ್ರಮಾಣ ಕೇವಲ ಶೇ. 26.
- ಸಂಸ್ಕೃತವನ್ನು ಮಾತನಾಡುತ್ತಾರೆಂದು ಭಾವಿಸಿರುವ ಜನರ ಸಂಖ್ಯೆ ಲಕ್ಷಕ್ಕಿಂತ ಕಡಿಮೆ.
- ನಮ್ಮ ರಾಷ್ಟ್ರಗೀತೆ ದೇಶಭಾಷೆಯಾದ ಬಂಗಾಳಿಯಲ್ಲಿದೆ. ಅದು ಹಿಂದಿಯಲ್ಲಿಲ್ಲ
- 'ಒಂದು ರಾಷ್ಟ್ರ, ಹಲವು ಭಾಷೆಗಳು' ಅನ್ನುವುದು ಭಾರತ ಒಕ್ಕೂಟದ ಹೆಗ್ಗುರುತು(ಕವಿರಾಜಮಾರ್ಗಕಾರನ ಕಂದ ಪದ್ಯ)
- 'ಒಂದು ರಾಷ್ಟ್ರ, ಒಂದು ಮಾರುಕಟ್ಟೆ, ಒಂದು ಬ್ಯಾಂಕು, ಒಂದು ಭಾಷೆ' ಅನ್ನುವ ಸಂಗತಿಗಳು ಇಂದು ಮುಂಚೂಣಿಗೆ ಬಂದಿವೆ.
- ಕನ್ನಡ ಭಾಷೆಗೆ ಕ್ರಿ. ಪೂ. 230ರಷ್ಟು (ಅಂದರೆ 2230 ವರ್ಷಗಳು) ಪ್ರಾಚೀನ ಚರಿತ್ರೆಯಿದ್ದರೆ ಹಿಂದೆಗೆ ಕ್ರಿ. ಶ. 1500 ವರ್ಷಗಳ ಚರಿತ್ರೆಯಿದೆ.
- ಆರೋಗ್ಯ, ಶಿಕ್ಷಣ, ಸ್ವಚ್ಛತೆ ಮುಂತಾದವುಗಳು ಸಂವಿಧಾನಬದ್ಧವಾಗಿ ರಾಜ್ಯಗಳ ಜವಾಬ್ದಾರಿ. ಈ ವಿಷಯಗಳಲ್ಲಿ ಕೇಂದ್ರವು ಪ್ರಧಾನಪಾತ್ರ ನಿರ್ವಹಿಸತೊಡಗಿದೆ.
- ಹಿಂದಿ ಪ್ರಚಾರ ಸಭೆ ಅನ್ನುವ ಸಂಸ್ಥೆಯು ಸ್ವಾತಂತ್ರ್ಯಪೂರ್ವದಿಂದಲೂ ದಕ್ಷಿಣ ಭಾರತದ ರಾಜ್ಯಗಳಲ್ಲಿ ಕೆಲಸ ಮಾಡುತ್ತಿದೆ. ಆದರೆ ಉತ್ತರದ ಯಾವುದೇ ರಾಜ್ಯದಲ್ಲಿ ದಕ್ಷಿಣ ಭಾರತದ ಭಾಷೆಗಳನ್ನು ಪೋಷಿಸುವ ಸಂಸ್ಥೆಗಳಿಲ್ಲ.

ಭಿನ್ನತೆ ಮತ್ತು ವೈವಿಧ್ಯತೆ

ಕರ್ನಾಟಕ ಸಂಸ್ಕೃತಿ ಅನ್ನುವುದು ಇತರೆ ಸಂಸ್ಕೃತಿಗಳಿಗಿಂತ ಭಿನ್ನವೂ ಹೌದು ಮತ್ತು ವಿಶ್ವಾತ್ಮಕವೂ ಹೌದು. ಅದು ವೈವಿಧ್ಯಮಯವಾದುದಾಗಿದೆ. ನಮ್ಮ ದೇಶಕ್ಕೆ ಸಂಬಂಧಿಸಿದಂತೆ ಹೇಳುವ 'ಏಕತೆಯಲ್ಲಿ ವೈವಿಧ್ಯತೆ, ವೈವಿಧ್ಯತೆಯಲ್ಲಿ ಏಕತೆ' ಅನ್ನುವ ನಂಬಿಕೆ ಕರ್ನಾಟಕಕ್ಕೂ ಅನ್ವಯವಾಗುತ್ತದೆ. ಬಹುವಚನ ಭಾರತವಿದ್ದಂತೆ ಬಹುವಚನ ಕರ್ನಾಟಕ. ಕನ್ನಡನಾಡು ವಸುಧೆಯಲ್ಲಿ ಲೀನವಾಗಿದೆ, ನಿಜ. ಅದೇನು ದ್ವೀಪದಂತೆ ಬದುಕುತ್ತಿಲ್ಲ. ಅದಕ್ಕೆ ತನ್ನದೇ ಆದ ಒಂದು ಸಾವಿರ ವರ್ಷಕ್ಕೂ ಮೀರಿದ ಚರಿತ್ರೆಯಿರುವ ಭಾಷೆಯಿದೆ. ಆ ಭಾಷೆಯಲ್ಲಿ ವಿಶ್ವಮಾನ್ಯವಾಗಬಹುದಾದ ಶ್ರೀಮಂತ ಸಾಹಿತ್ಯವಿದೆ. ಅದಕ್ಕೆ ತನ್ನದೇ ಆದ ಒಂದು ಜೀವನದರ್ಶನವಿದೆ. ಅದಕ್ಕೆ ತನ್ನದೇ ಆದ ಪ್ರಾಚೀನ ಚರಿತ್ರೆಯಿದೆ. ಕನ್ನಡ ಸಮಾಜ, ಆರ್ಥಿಕತೆ, ರಾಜಕಾರಣ ಇದೆ. ಕನ್ನಡ ಜಗತ್ತು ಅನ್ನುವುದಿದೆ. ಅದು ರಾಜ್ಯವೂ(ವಲಯ) ಹೌದು ಮತ್ತು ಅದು (ಉಪ)ರಾಷ್ಟ್ರವೂ ಹೌದು. ಯೂರೋಪಿನ ಅನೇಕ ದೇಶಗಳ ಜನಸಂಖ್ಯೆಗೆ ಕರ್ನಾಟಕದ ಜನಸಂಖ್ಯೆ ಸಮನಾಗಿದೆ.

ಕನ್ನಡನಾಡಿನ ವಿಶೇಷತೆಗೆ, ವಿಶಿಷ್ಠತೆಗೆ ಇಂದು ಅಪಾಯ ಬಂದಿದೆ. ಒಂದು ಒಕ್ಕೂಟದಲ್ಲಿ ಎರಡೂ ಪಕ್ಷಗಳಿಗೆ ಸಮಾನ ಅಧಿಕಾರ ಮತ್ತು ಅವಕಾಶಗಳಿರಬೇಕು. ಈ ಸಮಾನತೆಯಲ್ಲಿ ಏರುಪೇರುಗಳುಂಟಾದರೆ ಒಕ್ಕೂಟ ಶಿಥಿಲಗೊಳ್ಳುತ್ತದೆ. ಈ ಸಮತೋಲನವು ತನ್ನ ತೋಲವನ್ನು ಕಳೆದುಕೊಳ್ಳುತ್ತಿದೆ.

ಕೇಂದ್ರ ಸರ್ಕಾರವು ಮಾರ್ಚ್ 31, 2017ರಂದು ನಿರ್ಣಯವೊಂದನ್ನು ಅಂಗೀಕರಿಸಿ ಕೇಂದ್ರೀಯ ವಿದ್ಯಾಲಯಗಳಲ್ಲಿ ಮತ್ತು ಸಿ.ಬಿ.ಎಸ್.ಸಿ. ಪಠ್ಯಕ್ರಮವಿರುವ ಶಾಲೆಗಳಲ್ಲಿ 8 ರಿಂದ 10ನೆಯ ತರಗತಿವರೆಗೆ ಹಿಂದಿಯನ್ನು ಕಡ್ಡಾಯ ಮಾಡಲಾಗಿದೆ. ಈಶಾನ್ಯ ಭಾರತದ ಮತ್ತು ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಿಂದಿಯನ್ನು ಜಾರಿಗೊಳಿಸಲು ಮತ್ತು ಬೆಳೆಸಲು ವಿಶೇಷ ಕಾರ್ಯತಂತ್ರವನ್ನು ರೂಪಿಸಿರುವುದಾಗಿ ಕೇಂದ್ರ ಸಚಿವರೊಬ್ಬರು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಹಿಂದಿ ಭಾಷೆಯನ್ನು ಪೋಷಿಸುತ್ತಿದೆ ವಿನಾ ಅಲ್ಲಿ ಹೇರಿಕೆಯಿಲ್ಲ ಎಂದು ಮತ್ತೊಬ್ಬ ಕೇಂದ್ರ ಸಚಿವರು ಹೇಳಿಕೆ ನೀಡಿದ್ದಾರೆ. ಇದರ ಬಗ್ಗೆ ಆತಂಕಗೊಳ್ಳುವ ಅಗತ್ಯವಿಲ್ಲ ಎಂದು ಮತ್ತೊಬ್ಬ ಸಚಿವರು ಸಾಂತ್ವನದ ಮಾತುಗಳನ್ನಾಡಿದ್ದಾರೆ. ಸಂವಿಧಾನದಲ್ಲಿ ನಮ್ಮ ದೇಶದ 22 ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಘೋಷಿಸಲಾಗಿದೆ. ಹಿಂದಿ ರಾಷ್ಟ್ರ ಭಾಷೆಯಲ್ಲ. ದೇಶದ 22 ಭಾಷೆಗಳಂತೆ ಅದೊಂದು ಭಾಷೆ. ಆದರೆ ಕೇಂದ್ರವು 22 ಸಂವಿಧಾನಾತ್ಮಕ ಅಧಿಕೃತ ಭಾಷೆಗಳನ್ನು ಸಮಾನವಾಗಿ ಪೋಷಿಸುವುದಕ್ಕೆ ಪ್ರತಿಯಾಗಿ ಹಿಂದಿಯನ್ನು ಹೆಚ್ಚು ಪೋಷಿಸುವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಬೆರಳೆಣಿಕೆಯಷ್ಟು ಜನರು ಮಾತನಾಡುವ(ಅದೂ ಅನುಮಾನ) ಸಂಸ್ಕೃತಕ್ಕೆ ಇನ್ನಿಲ್ಲದ ಪ್ರೋತ್ಸಾಹ, ಸಂಪನ್ಮೂಲ, ರಿಯಾಯಿತಿಗಳನ್ನೂ ನೀಡಲಾಗುತ್ತಿದೆ. ಅಖಂಡತೆಯ ಹೆಸರಿನಲ್ಲಿ ವಿಚ್ಛಿದ್ರತೆಯನ್ನು ಬಿತ್ತಲಾಗುತ್ತಿದೆ.

ಈ ಬಗೆಯ ಹಿಂದಿ ಹೇರಿಕೆಗೆ ತಮಿಳುನಾಡಿನಲ್ಲಿ ಮಾತ್ರ ವಿರೋಧವಿದೆಯೆಂದು ತಪ್ಪು ತಪ್ಪು ಸುದ್ದಿಯನ್ನು ಪ್ರಚುರಪಡಿಸಲಾಗುತ್ತಿದೆ. ದಕ್ಷಿಣ ಭಾರತದ ಕರ್ನಾಟಕ, ಕೇರಳ, ತೆಲಂಗಾಣ ಮತ್ತು ಆಂಧ್ರಪ್ರದೇಶಗಳಲ್ಲಿ ಹಿಂದಿ ವಿರುದ್ಧದ ಆಕ್ರೋಶ ಸ್ಫೋಟಗೊಳ್ಳಲು ತಡವಾಗಬಹುದು. ಆದರೆ ಅದು ಆಸ್ಫೋಟಿಸುವುದು ಖಚಿತ. ನಿಜ, ಹಿಂದಿಯನ್ನು ಒಂದು ಭಾಷೆಯಾಗಿ ಸ್ವಇಚ್ಛೆಯಿಂದ ದಕ್ಷಿಣದವರು ಕಲಿಯುತ್ತಿದ್ದಾರೆ. ಹಿಂದಿ ಸಿನಿಮಾದ ಪ್ರಭಾವನ್ನು ಇಲ್ಲಿ ಗುರುತಿಸಬೇಕು. ಕೇಂದ್ರದ ಕೆಲವು ಸಚಿವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಯುವಕರಿಗೆ ಕಾರ್ಪೋರೇಟ್ ಕಂಪನಿಗಳಲ್ಲಿ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿನ ಉದ್ಯೋಗಗಳಲ್ಲಿ ಹಿಂದಿ ಭಾಷಾ ಜ್ಞಾನ ಇರುವವರಿಗೆ ಕೃಪಾಂಕ ನೀಡಲಾಗುವುದು ಎಂದು ಹೇಳಿದ್ದಾರೆ. ಇದೊಂದು ಭಾಷಾ ತಾರತಮ್ಯದ ಪರಮೋಚ್ಛ ಭಾವನೆಯಾಗಿದೆ.

ಒಟ್ಟಿನಲ್ಲಿ ಹಿಂದಿ ಭಾಷೆಯ ಹೇರಿಗೆ ಬಗ್ಗೆ ಭಿನ್ನ ಭಿನ್ನ ರೀತಿಯಲ್ಲಿ ಸಂಬಂಧಪಟ್ಟವರು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಜನರಲ್ಲಿ ಗೊಂದಲ ಮೂಡಿಸುವ ಮತ್ತು ಅವರನ್ನು ತಪ್ಪು ದಾರಿಗೆಳೆಯುವ ತಂತ್ರವಾಗಿದೆ. ಇವುಗಳ ಪರಿಣಾಮವಾಗಿ ಹಿಂದಿ ಭಾಷೆಯು ಪ್ರಧಾನವಾಗಿ ದೇಶಭಾಷೆಗಳು ಅಧೀನ ಭಾಷೆಯಾಗುವ ಸಾಧ್ಯತೆಯಿದೆ. ಏಕೆಂದರೆ ಹಿಂದಿ ಭಾಷಾಂಧರ ಹಿಂದೆ 'ಅಧಿಕಾರ' ಇದೆ. ಆದರೆ ದೇಶಭಾಷೆಯನ್ನು ಆಶ್ರಯಿಸಿರುವವರ ಹಿಂದೆ ಅಧಿಕಾರವಿಲ್ಲ. ದಕ್ಷಿಣ ಭಾರತೀಯರನ್ನು 'ಕಪ್ಪು' ಜನರೆಂದು ಹೀಗಳೆಯುವ ಕೆಲಸವೂ ಉತ್ತರದಲ್ಲಿ ನಡೆಯುತ್ತಿದೆ. ಅದೇ ಭಾವನೆಯಲ್ಲಿ ದ್ರಾವಿಡ ಭಾಷೆಗಳನ್ನು ಮೂಲೆಗುಂಪು ಮಾಡುವ ಕ್ರಮಗಳು ಕಂಡು ಬರುತ್ತಿದೆ. ಇವೆಲ್ಲವೂ ಹಿಂದಿ ಸಾಮ್ರಾಜ್ಯಶಾಹಿಯ ಅವಿಭಾಜ್ಯ ಭಾಗಗಳಾಗಿವೆ. ಹಿಂದಿಯನ್ನು ಕಲಿತರೆ ಕನ್ನಡಿಗರಿಗೆ ನಷ್ಟವೇನು ಎಂದು ಕೇಳುವ ಕನ್ನಡಿಗರಿದ್ದಾರೆ. ಇದರಿಂದ ನಷ್ಟವೇನಿಲ್ಲ. ಆದರೆ ಈ ಹೇರುವಿಕೆ, ನಿಂದನೆಯ, ತಾರತಮ್ಯಗಳ ಹಿಂದೆ ಕೆಲಸ ಮಾಡುತ್ತಿರುವ ಯಜಮಾನ ಮನೋಭಾವವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಭಾಷೆಯ ಹೇರಿಕೆಯು ರಾಜಕಾರಣದ ಒಂದು ಭಾಗವಾಗಿದೆ. ನಮ್ಮ ಒಕ್ಕೂಟ ತತ್ವ ಅಪಾಯಕ್ಕೆ ಸಿಲುಕಿದೆ. ಕನ್ನಡ ಜಗತ್ತು ಅನ್ನುವುದು ಮರೆಯಾಗುವ ಸಾಧ್ಯತೆಯಿದೆ.

ಮೋದಿ ಸರಕಾರದ ವಿಫಲ ಪಾಕಿಸ್ತಾನ ಧೋರಣೆ





ಪ್ರಕಾಶ ಕಾರಟ್

ಪೂಂಛ್ ವಲಯದಲ್ಲಿ ಪಾಕಿಸ್ತಾನದ ಕಡೆಯಿಂದ ನಡೆದ ತೀರಾ ಪ್ರಚೋದನಕಾರಿ ಕೃತ್ಯವನ್ನು ಕಾಶ್ಮೀರ ಕಣಿವೆಯಲ್ಲಿ ಕ್ರಮೇಣವಾಗಿ ಹದಗೆಡುತ್ತಿರುವ ಪರಿಸ್ಥಿತಿ ಮತ್ತು ಅದನ್ನು ಸಂಪೂರ್ಣವಾಗಿ ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಪಾಕಿಸ್ತಾನದ ಸಂಕಲ್ಪದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಈಗ ಮುಯ್ಯಿಗೆ ಮುಯ್ಯಿಯ ಮಾತು ವಾಸ್ತವವಾಗಿ ಪಾಕಿಸ್ತಾನದೊಂದಿಗೆ ವ್ಯವಹರಿಸುವಲ್ಲಿ ಮೋದಿ ಸರಕಾರದ ವ್ಯೂಹಾತ್ಮಕ ವೈಫಲ್ಯ ಮತ್ತು ಕಾಶ್ಮೀರ ಸಮಸ್ಯೆಯನ್ನು ರಾಜಕೀಯವಾಗಿ ನಿಭಾಯಿಸುವಲ್ಲಿನ ಅದರ ವೈಫಲ್ಯವನ್ನು ಮರೆಮಾಚುವ ಪ್ರಯತ್ನ.

ಪೂಂಛ್ ವಲಯದಲ್ಲಿ ಗಡಿ ನಿಯಂತ್ರಣ ರೇಖೆಯ ಒಳಗೆ ಭೂಸೇನೆಯ ಒಬ್ಬ ಯೋಧ ಹಾಗೂ ಗಡಿ ಭದ್ರತಾ ಪಡೆಯ ಇನ್ನೊಬ್ಬ ಯೋಧನ ಶಿರಚ್ಛೇಧ ಮಾಡಿರುವುದು ನಿಸ್ಸಂಶಯವಾಗಿಯೂ ಒಂದು ಬರ್ಬರ ಪ್ರಚೋದಕ ಕೃತ್ಯವಾಗಿದೆ. ಇಬ್ಬರು ಯೋಧರನ್ನು ಕೊಂದಿರುವುದು ಮತ್ತು ಅವರ ದೇಹಗಳನ್ನು ವಿಕೃತಗೊಳಿಸಿದ್ದು ಪಾಕಿಸ್ತಾನಿ ಸೇನೆಯ ಕೃತ್ಯವೋ, ಅಥವ ಅದರ ನೆರವಿನಿಂದ ನುಸುಳಿ ಬಂದ ಉಗ್ರಗಾಮಿಗಳ ಕೃತ್ಯವೋ– ಏನೇ ಇದ್ದರೂ ಇದೊಂದು ಹೇಯ ಕೃತ್ಯ ಹಾಗೂ ಎಲ್ಲಾ ಮಿಲಿಟರಿ ವಿದಿ–ವಿಧಾನಗಳ ಮತ್ತು ಜಿನೇವಾ ಒಡಂಬಡಿಕೆಯ ಉಲ್ಲಂಘನೆಯಾಗಿದೆ.

ಇದಕ್ಕೆ ಭಾರತೀಯ ಸೇನೆಯ ಸ್ಪಂದನೆ ಯುಕ್ತ ಪ್ರಮಾಣದಲ್ಲಿ ಇರಬೇಕಾಗಿದೆ. ಅದಕ್ಕಾಗಿ, ಗಡಿಯಲ್ಲಿ ಮತ್ತು ಜಮ್ಮು–ಕಾಶ್ಮೀರದಲ್ಲಿ ಉದ್ಭವಿಸಿರುವ ಪರಿಸ್ಥಿತಿಯ ಸೂಕ್ತವಾದ ಪರಾಮರ್ಶೆ ನಡೆಸಬೇಕಾಗಿದೆ. ಗಡಿ ನಿಯಂತ್ರಣ ರೇಖೆಯಲ್ಲಿ ಕದನ ವಿರಾಮ ಉಲ್ಲಂಘನೆ 2015ರಲ್ಲಿ ಹೆಚ್ಚಿತು ಹಾಗೂ 2016ರಲ್ಲಿ ಮತ್ತು ಆನಂತರವೂ ಅದು ದೊಡ್ಡ ಮಟ್ಟದಲ್ಲಿ ಮುಂದುವರಿದಿದೆ. ಇದು ಮೋದಿ ಸರಕಾರ ಅಧಿಕಾರಕ್ಕೆ ಬಂದ ತಕ್ಷಣದಿಂದ ಉಭಯ ದೇಶಗಳ ನಡುವಿನ ಸಂವಾದ ಮುರಿದು ಬಿದ್ದಿರುವುದನ್ನು ತೋರಿಸುತ್ತದೆ.

ಕಳೆದ ಕೆಲವು ತಿಂಗಳಿಂದ ಉಭಯ ದೇಶಗಳ ಸಂಬಂಧಗಳ ವಿಚಾರದಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಪಾಕಿಸ್ತಾನದಲ್ಲಿ ಭಾರತಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಲ್ಲಿಯ ಮಿಲಿಟರಿಯದ್ದೇ ಮೇಲುಗೈ. ಇದಕ್ಕೆ ಮೋದಿ ಸರಕಾರದ ಕಾಲುಕೆದರುವ ನಿಲುವು ಅನುಕೂಲ ಕಲ್ಪಿಸಿ ಕೊಟ್ಟಿದೆ. ಪಾಕಿಸ್ತಾನ ಸೇನಾ ನ್ಯಾಯಾಲಯವೊಂದು ಕುಲಭೂಷಣ್ ಜಾಧವ್‌ಗೆ ಮರಣದಂಡನೆ ವಿಧಿಸಿರುವುದರಿಂದ ಬಿಗುವು ಇನ್ನಷ್ಟು ಉಲ್ಬಣಗೊಂಡಿದೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಮೇಲ್ ಟುಡೆ

ಮೋದಿ ಸರಕಾರ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಉರಿ ಸೇನಾ ನೆಲೆಯ ಮೇಲೆ ಉಗ್ರಗಾಮಿಗಳ ದಾಳಿಗೆ ಪ್ರತಿಕ್ರಿಯೆಯಾಗಿ ಮಿಂಚಿನ ಪ್ರಹಾರ(ಸರ್ಜಿಕಲ್ ಸ್ಟ್ರೈಕ್)ಗಳನ್ನು ನಡೆಸಿತ್ತು. ಆದರೂ ನಿಯಂತ್ರಣ ರೇಖೆಯುದ್ದ ಉಲ್ಲಂಘನೆ ಆಗುವ ಪ್ರಕರಣಗಳೇನೂ ಕಡಿಮೆಯಾಗಲಿಲ್ಲ. ಅಲ್ಲದೆ ಗಡಿಯೊಳಗೆ ನುಸುಳಿ ಬರುವುದಕ್ಕೆ ಬೆಂಬಲ ನೀಡುವ ಮತ್ತು ಕಾಶ್ಮೀರ ಕಣಿವೆಯಲ್ಲಿ ಉದ್ಭವಿಸಿರುವ ಪರಿಸ್ಥಿಯ ಲಾಭ ಗಿಟ್ಟಿಸುವ ಪಾಕಿಸ್ತಾನದ ಯತ್ನಗಳೂ ಕಡಿಮೆಯಾಗಿಲ್ಲ.

ಕಳೆದ ವರ್ಷ ಜುಲೈನಲ್ಲಿ ಬುರ್ಹನ್ ವನಿ ಹತ್ಯೆಯ ನಂತರದಿಂದ ಕಾಶ್ಮೀರದಲ್ಲಿ ಕ್ಷೋಭೆಯುಂಟಾಗಿದೆ. ಎಲ್ಲಾ ಬಗೆಯ ಪ್ರತಿಭಟನೆಗಳನ್ನು ಬರ್ಬರ ಬಲಪ್ರಯೋಗದ ಮೂಲಕ ಹತ್ತಿಕ್ಕುವ ಮೋದಿ ಸರಕಾರದ ಹಠಮಾರಿ ಧೋರಣೆಯಿಂದಾಗಿ ಪರಿಸ್ಥಿತಿ ಹದಗೆಟ್ಟಿದೆ. ಪುರುಷರು, ಮಹಿಳೆಯರು ಮತ್ತು ಮಕ್ಕಳು ಆದಿಯಾಗಿ ಜನಸಮೂಹವೆಲ್ಲ ಭಾರತೀಯ ಪ್ರಭುತ್ವದ ವಿರುದ್ಧ ಬಂಡೆದ್ದಿದೆ. ಈ ಮೂಲಕ ರಾಜಕೀಯ ಚಟುವಟಿಕೆಗಳು ಮತ್ತು ಸಂವಾದದ ಎಲ್ಲಾ ಅವಕಾಶಗಳನ್ನು ಹಿಸುಕಿ ಹಾಕಿದಂತಾಗಿದೆ.

ಪೂಂಛ್ ವಲಯದಲ್ಲಿ ಪಾಕಿಸ್ತಾನದ ಕಡೆಯಿಂದ ನಡೆದ ತೀರಾ ಪ್ರಚೋದನಕಾರಿ ಕೃತ್ಯವನ್ನು ಕಾಶ್ಮೀರ ಕಣಿವೆಯಲ್ಲಿ ಕ್ರಮೇಣವಾಗಿ ಹದಗೆಡುತ್ತಿರುವ ಪರಿಸ್ಥಿತಿ ಮತ್ತು ಅದನ್ನು ಸಂಪೂರ್ಣವಾಗಿ ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಪಾಕಿಸ್ತಾನದ ಸಂಕಲ್ಪದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ.

ಮುಯ್ಯಿಗೆ ಮುಯ್ಯಿ ನೀತಿಯನ್ನು ಅಳವಡಿಸಿ ಕೊಳ್ಳಬೇಕು ಹಾಗೂ 'ನಮ್ಮವರ ಒಂದು ತಲೆಗೆ ಹತ್ತು ತಲೆ' ತೆಗೆಯಬೇಕು ಎಂಬ ಆಗ್ರಹದ ಮರೆಯಲ್ಲಿ ವಾಸ್ತವವಾಗಿ ಪಾಕಿಸ್ತಾನದೊಂದಿಗೆ ವ್ಯವಹರಿಸುವಲ್ಲಿ ಮೋದಿ ಸರಕಾರದ ವ್ಯೂಹಾತ್ಮಕ ವೈಫಲ್ಯ ಮತ್ತು ಕಾಶ್ಮೀರ ಸಮಸ್ಯೆಯನ್ನು ರಾಜಕೀಯವಾಗಿ ನಿಭಾಯಿಸುವಲ್ಲಿನ ಅದರ ವೈಫಲ್ಯವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸಲಾಗುತ್ತಿದೆ.

ಮಿಲಿಟರಿ ಕಾರ್ಯಾಚರಣೆ ಮೂಲಕ ಪಾಕಿಸ್ತಾನದೊಂದಿಗಿನ ಲೆಕ್ಕವನ್ನು ಒಂದೇ ಬಾರಿಗೆ ಅಂತಿಮವಾಗಿ ಚುಕ್ತಾ ಮಾಡಬೇಕೆಂಬ ಉದ್ರೇಕದ ಕರೆಗಳು ಭಾರತ–ಪಾಕಿಸ್ತಾನ ಸಂಘರ್ಷವನ್ನು ಪರಿಹರಿಸಲು ಒಂದು ಸುಸಂಬದ್ಧ ತಂತ್ರವನ್ನು ಅನುಸರಿಸುವುದಕ್ಕೆ ಪರ್ಯಾಯವಾಗಲಾರದು. ಆ ನಿಟ್ಟಿನಲ್ಲಿ ಹೆಜ್ಜೆಯಿಡಬೇಕಾದರೆ, ಮೋದಿ ಸರಕಾರ ತಕ್ಷಣವೇ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿವಿಧ ರಾಜಕೀಯ ಅಭಿಪ್ರಾಯ ಹೊಂದಿರುವ ಎಲ್ಲಾ ವಿಭಾಗಗಳ ಜೊತೆ ರಾಜಕೀಯ ಸಂವಾದವನ್ನು ಆರಂಭಿಸಬೇಕು. ಕಾಶ್ಮೀರಿ ಜನತೆಯ ವಿಶ್ವಾಸವನ್ನು ಸ್ವಲ್ಪ ಮಟ್ಟಿಗಾದರೂ ಗಳಿಸಿಕೊಳ್ಳದೆ ಪಾಕಿಸ್ತಾನ ಕಡೆಯಿಂದಾಗುವ ಯಾವುದೇ ವೈಷಮ್ಯಪೂರ್ಣ ಕ್ರಮಗಳನ್ನು ಎದುರಿಸಲಾಗಲೀ, ನಿಷ್ಕ್ರಿಯಗೊಳಿಸಲಾಗಲೀ ಸಾಧ್ಯವಿಲ್ಲ.

ಗಡಿಯಾಚೆಯಿಂದ ಭಯೋತ್ಪಾದಕರು ನುಸುಳುವುದನ್ನು ಎದುರಿಸುವಲ್ಲಿ ದೃಢ ನಿಲುವನ್ನು ತಳೆಯುತ್ತಲೇ, ಪಾಕಿಸ್ತಾನದೊಂದಿಗೆ ಸಂವಾದವನ್ನು ಪುನರಾರಂಭಿಸುವ ದಾರಿಗಳನ್ನು ಶೋಧಿಸದ ಹೊರತು ಬೇರಾವುದೇ ಮಾರ್ಗ ಇಲ್ಲ ಎಂಬುದನ್ನು ಕೂಡ ಮೋದಿ ಸರಕಾರ ಗುರುತಿಸಬೇಕಾಗಿದೆ. ಪಾಕಿಸ್ತಾನದ ಜೊತೆಗೆ ಸಂಬಂಧದಲ್ಲಿ ಭಯೋತ್ಪಾದನೆಯ ವಿರುದ್ಧದ ಹೋರಾಟವನ್ನು ಕೇಂದ್ರ ಬಿಂದುವಾಗಿ ಮಾಡಿಕೊಂಡರೂ, ಅದರೊಂದಿಗೆ ಒಂದು ಸಂಘರ್ಷದ ನಿಲುವು ತಳೆಯುವುದಕ್ಕೆ ಭಾರತ ಅಂತರ್‍ರಾಷ್ಟ್ರೀಯವಾಗಿ ಯಾಗಲೀ ಮತ್ತು ಪ್ರಾದೇಶಿಕ ಮಟ್ಟದಲ್ಲೂ ಬಹಳಷ್ಟೇನೂ ಬೆಂಬಲ ಪಡೆಯಲಾರದು ಎಂಬುದನ್ನು ಮೋದಿ ಸರಕಾರ ಅರಿತುಕೊಳ್ಳಬೇಕಾಗಿದೆ.

ಅನು: ವಿಶ್ವ

ಕಾರ್ಪೊರೇಟ್ ಸಾಲ ಬಾಕಿ ವಸೂಲು ಮಾಡಲಾಗದವರ ವಿಧ–ವಿಧ ಕಸರತ್ತು

ಸರಕಾರೀ ಕಂಪನಿಗಳು ವಹಿಸಿಕೊಳ್ಳುವುದು, ಬ್ಯಾಂಕುಗಳ ಮರುಖಾಸಗೀಕರಣ ಇತ್ಯಾದಿ ಇತ್ಯಾದಿ

ಬ್ಯಾಂಕುಗಳು ನೀಡಿದ ಸಾಲಗಳಲ್ಲಿ 'ಕೆಟ್ಟ ಸಾಲ'ಗಳ, ಅಂದರೆ ಮರುಪಾವತಿಯಾಗಲಾರದ ಸಾಲಗಳ ಮೊತ್ತ ಕಳೆದ ಹಣಕಾಸು ವರ್ಷದ ಅಂತ್ಯದ ವೇಳೆಗೆ 8.5ಲಕ್ಷ ಕೋಟಿ ರೂ.. ಅದು ಈ ಹಣಕಾಸು ವರ್ಷದ ಮೊದಲ 9 ತಿಂಗಳಲ್ಲಿ ಮತ್ತೆ 1ಲಕ್ಷ ಕೋಟಿ ರೂ.ಗೂ ಹೆಚ್ಚಿ ಡಿಸೆಂಬರ್31ರ ವೇಳೆಗೆ 9.64 ಲಕ್ಷ ಕೋಟಿ ರೂ.ಗಳಿಗೇರಿದೆ. ಇವುಗಳಲ್ಲಿ 8ಲಕ್ಷ ಕೋಟಿ ರೂ.ಗೂ ಹೆಚ್ಚು ದೇಶದ ಅತಿ ಶ್ರೀಮಂತರ ಒಡೆತನದಲ್ಲಿರುವ ಕಂಪನಿಗಳದ್ದು ಎಂಬುದು ಎಲ್ಲರಿಗೂ ತಿಳಿದಿರುವ ಗುಟ್ಟು.. ಆದರೂ ಯಾರ್‍ಯಾರದ್ದು ಎಷ್ಟೆಷ್ಟು ಎಂದು ಬಹಿರಂಗ ಪಡಿಸಲು ಸರಕಾರ ಸಿದ್ಧವಿಲ್ಲ. ಮಾಹಿತಿ ಕೇಳಿರುವ ಸುಪ್ರಿಂ ಕೋರ್ಟ್‌ಗೆ ಅದನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದೆ. ಇದಲ್ಲದೆ 2014 ಮತ್ತು 15ರಲ್ಲಿ ಈ ಸರಕಾರ ಒಟ್ಟು 1,12,708 ಕೋಟಿ ರೂ.ಗಳಷ್ಟು ಸಾಲವನ್ನು 'ಪನರ್‍ರಚನೆ'ಯ ಹೆಸರು ಕೊಟ್ಟು ವಾಸ್ತವವಾಗಿ ಮನ್ನಾ ಎಂದೇ ಮಾಡಿದೆ.

ಅಂದರೆ ತಾನು ಬಡವರ ಪರ ಎಂದು ಇತ್ತೀಚಿನ ದಿನಗಳಲ್ಲಿ ಸಾರಿ–ಸಾರಿ ಹೇಳುತ್ತಿರುವ ಈ ಸರಕಾರ ಅದನ್ನು ತೀರಿಸುವ ಸಾಮರ್ಥ್ಯ ಇದ್ದರೂ ಬೇಕೆಂದೇ ತೀರಿಸದಿರುವ ಶ್ರೀಮಂತರಿಂದ ವಸೂಲಿ ಮಾಡಲು ಸಿದ್ಧವಿಲ್ಲ. ಆದರೆ ಸಾರ್ವಜನಿಕರ ಉಳಿತಾಯಗಳಿಂದ ಸಂಗ್ರಹಿಸಿಕೊಟ್ಟ ಈ ಅಪಾರ ಮೊತ್ತ ವಾಪಾಸು ಬರದೇ ಬ್ಯಾಂಕುಗಳ ಪರಿಸ್ಥಿತಿ ಹದಗೆಡುತ್ತಿರುವುದು ಈ ಸರಕಾರಕ್ಕೆ ದೊಡ್ಡ ತಲೆನೋವಾಗಿ ಬಿಟ್ಟಿದೆ. ಐಎಂಎಫ್–ವಿಶ್ವಬ್ಯಾಂಕ್ ಸಭೆಗಳಲ್ಲಿ ಭಾಗವಹಿಸಲು ಅಮೆರಿಕಾಕ್ಕೆ ಹೋಗಿ ಬಂದ ಮೇಲೆ ನಮ್ಮ ಹಣಕಾಸು ಮಂತ್ರಿಗಳಿಗೆ ಇದು ಇನ್ನಷ್ಟು ತುರ್ತಿನ ಪ್ರಶ್ನೆಯಾಗಿ ಬಿಟ್ಟಿದೆ. ಆದ್ದರಿಂದ ಅದನ್ನು ವಸೂಲಿ ಮಾಡುವುದು ಹೇಗೆ ಎಂಬುದನ್ನು ಬಿಟ್ಟು ಬೇರೆಲ್ಲ ವಿಧ–ವಿಧದ ಕಸರತ್ತುಗಳನ್ನು ಮಾಡುತ್ತಿದೆ.

ಈ ವಾರ ತೇಲಿಬಿಟ್ಟಿರುವ ಅಂತಹ ಎರಡು ಕಸರತ್ತುಗಳಲ್ಲಿ ಒಂದು, ಸಾರ್ವಜನಿಕ ವಲಯದ ಕೆಲವು ಉದ್ದಿಮೆಗಳು ಈ 'ಕೆಲಸ ಮಾಡದ ಆಸ್ತಿ'ಗಳನ್ನು ವಹಿಸಿಕೊಳ್ಳುವುದು. ಅಂದರೆ ಖಾಸಗಿಯವರು ನಷ್ಟದಲ್ಲಿ ಇಟ್ಟಿರುವ ಪ್ರಾಜೆಕ್ಟ್‌ಗಳನ್ನು ವಹಿಸಿಕೊಳ್ಳುವುದು! ಬ್ಯಾಂಕುಗಳು ಇಂತಹ 50 ಅತಿ ದೊಡ್ಡ ಕೆಟ್ಟ ಸಾಲಗಳ ಪಟ್ಟಿ ಮಾಡಬೇಕು, ಸಂಬಂಧಪಟ್ಟ ಸರಕಾರದ ಇಲಾಖೆಗಳು ತಮ್ಮ ಅಡಿಯಲ್ಲಿರುವ ಸಾರ್ವಜನಿಕ ವಲಯದ ಯಾವ ಉದ್ದಿಮೆ ಇವನ್ನು ವಹಿಸಿಕೊಳ್ಳಬೇಕು ಎಂದು ಪರಿಶೀಲಿಸಬೇಕು ಎಂದು ಹೇಳಲಾಗಿದೆಯಂತೆ. ಇದರಲ್ಲಿ **ಸಾಲ ಕೊಟ್ಟ ಬ್ಯಾಂಕುಗಳೂ 'ಹೇರ್ ಕಟ್'ಗೆ ಸಿದ್ಧವಾಗಬೇಕು** ಎಂದೂ ಹೇಳಲಾಗಿದೆಯಂತೆ.

ಇನ್ನೊಂದು ಕಸರತ್ತು ಎಂದರೆ ಸಾರ್ವಜನಿಕ ವಲಯದ ಕೆಲವು ಬ್ಯಾಂಕುಗಳ ಮರು ಖಾಸಗೀಕರಣ– ಸಾರ್ವಜನಿಕರ ಉಳಿತಾಯಗಳನ್ನು ನುಂಗಿರುವ ಖಾಸಗೀ ವಲಯಕ್ಕೆ ತಾವು ಸುಲಿದ ಕೆಲವು ಬ್ಯಾಂಕ್‌ಗಳನ್ನೇ ಬಕ್ಷೀಸಾಗಿ ಕೊಡುವುದು! ಈ ಸಲಹೆ ನೀಡಿರುವವರು ರಿಝರ್ವ್ ಬ್ಯಾಂಕಿನ ಗವರ್ನರ್ ಮತ್ತು ಇತ್ತೀಚೆಗೆ ಬ್ಯಾಂಕಿಗೆ ಡೆಪ್ಯುಟಿ ಗವರ್ನರ್ ಆಗಿ ನೇಮಕಗೊಂಡಿರುವ ವಿರಲ್ ಆಚಾರ್ಯ ಅವರು. ಇದು ಖಾಸಗಿ ಕಾರ್ಪೊರೇಟ್‌ಗಳು ಮಾಡಿದ ನಷ್ಟಗಳನ್ನು ಭರ್ತಿ ಮಾಡಲು ಸಾರ್ವಜನಿಕರ ತೆರಿಗೆ ಹಣವಷ್ಟೇ ಅಲ್ಲ, ಸಾರ್ವಜನಿಕರ ಉಳಿತಾಯವನ್ನೂ ಬಳಸುವ ಘನ ಸಲಹೆ!

ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ಅವುಗಳ ಸಾಮಾಜಿಕ ಹೊಣೆಗಾರಿಕೆಯ ಅರಿವಿಲ್ಲದ ಈ ಇಬ್ಬರು ಮಹಾಶಯರುಗಳು ಭಾರತದ ಜನತೆಗಿಂತ ಹೆಚ್ಚಾಗಿ ಕಾರ್ಪೊರೇಟ್ ಕುಳಗಳಿಗೆ ವಿಧೇಯರಾರುವುದನ್ನು ಇದು ತೋರಿಸುತ್ತದೆ ಎಂದು ಇದನ್ನು ಬ್ಯಾಂಕ್ ನೌಕರರ ಸಂಘಟನೆಗಳು ಬಲವಾಗಿ ವಿರೋಧಿಸಿವೆ. ಇದು ಸಾರ್ವಜನಿಕ ವಲಯದ ಬ್ಯಾಂಕುಗಳ ಕೆಟ್ಟ ನಿರ್ವಹಣೆಯಿಂದ ಆಗಿರುವ ನಷ್ಟ ಅಲ್ಲ ಎಂಬ ಸಂಗತಿಯತ್ತ ಈ ಮಹಾಶಯರ ಮತ್ತು ಸಾರ್ವಜನಿಕರ ಗಮನ ಸೆಳೆದಿದ್ದಾರೆ. ವಾಸ್ತವವಾಗಿ ಮಾರ್ಚ್ 31, 2016ರ ವೇಳೆಗೆ ಸಾರ್ವಜನಿಕ ವಲಯದ ಬ್ಯಾಂಕುಗಳು 1,37,306 ಕೋಟಿ ರೂ.ಗಳ ಲಾಭ ಮಾಡಿವೆ. ಆದರೆ ರಿಝರ್ವ್ ಬ್ಯಾಂಕ್ ನಿಯಮಗಳ ಪ್ರಕಾರ ಕಾರ್ಪೊರೇಟ್‌ಗಳ 'ಕೆಟ್ಟ ಸಾಲ'ಗಳಿಗೆಂದು 1,55,297 ಕೋಟಿ ರೂ.ಗಳನ್ನು ಎತ್ತಿಡಬೇಕಾದ್ದರಿಂದಾಗಿ ನಿವ್ವಳ 17,991 ಕೋಟಿ ರೂ.ಗಳ ನಷ್ಟ ಎಂದು ಹೇಳಲಾಗುತ್ತಿದೆ.

ರಿಝರ್ವ್ ಬ್ಯಾಂಕ್ ಈ 'ಕೆಟ್ಟ ಸಾಲ'ಗಳನ್ನು ಸೃಷ್ಟಿಸಿದವರ ಪಟ್ಟಿಯನ್ನು ಬಿಡುಗಡೆ ಮಾಡಲಿ, ಅದಕ್ಕೆ ರಿಝರ್ವ್ ಬ್ಯಾಂಕ್ ಕಾಯ್ದೆ ಅಡ್ಡಿಯಾಗಿದ್ದರೆ, ಅದನ್ನು ತಿದ್ದುಪಡಿ ಮಾಡಲಿ, ಉದ್ದೇಶಪೂರ್ವಕವಾಗಿ ಸಾಲ ಹಿಂದಿರುಗಿಸದಿರುವುದು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸಿ ಇಂತವರ ವಿರುದ್ಧ ಕ್ರಿಮಿನಲ್ ಕ್ರಮಗಳನ್ನು ಕೈಗೊಳ್ಳಲಿ ಎಂದು ಬ್ಯಾಂಕ್ ನೌಕರರ ಮುಖಂಡರು ಸವಾಲು ಹಾಕಿದ್ದಾರೆ. ಈ 'ಕಟ್ಟ ಸಾಲ'ಗಳಿಗೆ ಹೊಣೆಗಾರರು ಯಾರು ಎಂದು ನಿರ್ಧರಿಸಬೇಕು. ಈ ಎಲ್ಲ ದೊಡ್ಡ ಸಾಲಗಳಿಗೆ ರಿಝರ್ವ್ ಬ್ಯಾಂಕಿನ ಮಂಜೂರಾತಿಯೂ ಇತ್ತು. ಆದ್ದರಿಂದ ಈ 'ಕೆಟ್ಟ ಸಾಲ'ಗಳಲ್ಲಿ ಅದರ ಜವಾಬ್ದಾರಿಯೂ ಇದೆ, ಈ ಬ್ಯಾಂಕುಗಳನ್ನು ಮತ್ತೆ ಖಾಸಗಿಯವರಿಗೆ ಕೊಟ್ಟು ಅದು ತನ್ನ ಈ ಹೊಣೆಗಾರಿಕೆಯಿಂದ ಜಾರಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳುವುದರಲ್ಲಿ ಅರ್ಥವಿದೆ.



ಅಷ್ಟಕ್ಕೂ 'ಒಳ್ಳೆಯ ದಿನ'ಗಳ ಸರಕಾರದ ಮೂರೇ ವರ್ಷಗಳಲ್ಲಿ ಕೆಟ್ಟ ಸಾಲಗಳ ಪ್ರಮಾಣ ಸುಮಾರು ಮೂರು ಪಟ್ಟು ಹೆಚ್ಚಿರುವುದೇಕೆ, ಮತ್ತು ಅದು ಈ ಸಾಲ ವಸೂಲಿಯ ಬಗ್ಗೆ ಯೋಚಿಸುತ್ತಲೂ ಇಲ್ಲ ಏಕೆ? ಏಕೆಂದರೆ ಈ ಅವಧಿಯಲ್ಲಿ ಚಮಚಾ ಬಂಡವಾಳಶಾಹಿಗಳ ಪ್ರಭಾವ ಹಿಂದೆಂದಿಗಿಂತಲೂ ಹೆಚ್ಚಾಗಿ ಬೆಳೆದಿದೆ ಎಂದು ಆರ್ಥಿಕ ತಜ್ಞರು ಹೇಳುತ್ತಾರೆ.

ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಿಜಯ ಕರ್ನಾಟಕ

ಕರ್ನಾಟಕದ ತುಂಬ ಸಂಭ್ರಮದ ಮೇ ದಿನ

ಕರ್ನಾಟಕದ ಕಾರ್ಮಿಕ ಕೇಂದ್ರಗಳು ಸೇರಿದಂತೆ ಹಲವು ಜಿಲ್ಲಾ/ತಾಲೂಕು ಕೇಂದ್ರಗಳಿಂದ ಈ ವರ್ಷದ ಮೇ ದಿನವನ್ನು ಸಂಭ್ರಮದಿಂದ ಆಚರಿಸಿದ ವರದಿಗಳು ಬಂದಿವೆ. ಬೆಂಗಳೂರು, ಮೈಸೂರುಗಳಲ್ಲಿ ಹಲವು ಕೇಂದ್ರೀಯ ಮತ್ತು ವಿವಿಧ ಟ್ರೇಡ್ ಯೂನಿಯನ್ ಕೇಂದ್ರಗಳು ಜಂಟಿಯಾಗಿ ಮೇ ದಿನಾಚರಣೆ ನಡೆಸಿದವು. ಬೆಂಗಳೂರು ಮೈಸೂರುಗಳಲ್ಲಿ 'ಸಾರ್ವಜನಿಕ ಉದ್ಯಮ ಉಳಿಸಿ" ಎಂಬ ಘೋಷಣೆಯೊಂದಿಗೆ ಮೇ ದಿನ ಆಚರಿಸಿ ಬಿ.ಇ.ಎಂ.ಎಲ್, ಎಚ್.ಎ.ಎಲ್ ಮುಂತಾದ ಕಾರ್ಖಾನೆಗಳಿಂದ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. ಮಂಗಳೂರು, ಬಂಟ್ವಾಳ, ತುಮಕೂರು, ದಾವಣಗೆರೆ, ಗುಲ್ಬರ್ಗ, ಕೋಲಾರ, ಚಿಕ್ಕಬಳ್ಳಾಪುರ, ಬಿಜಾಪುರ ಮುಂತಾದ ಕೇಂದ್ರಗಳಿಂದ ಬಂದ ವರದಿ/ಚಿತ್ರಗಳು ಈ ಪುಟ ಮತ್ತು ಪುಟ 16ರಲ್ಲಿ ಇವೆ.


ಮಂಗಳೂರು



ಬೆಂಗಳೂರು


ಬೆಂಗಳೂರು



ಮಂಗಳೂರಲ್ಲಿ ಮೇ ದಿನ

ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷರಾದ ಎಸ್.ವರಲಕ್ಷ್ಮಿಯವರು ಬಂಟ್ವಾಳ, ಬೆಳ್ತಂಗಡಿ ಮತ್ತು ಮಂಗಳೂರಿನಲ್ಲಿ ಸಿಐಟಿಯು ನೇತೃತ್ವದಲ್ಲಿ ಮೇ ದಿನಾಚರಣೆ ಕಾರ್ಯಕ್ರಮಗಳಲ್ಲಿ ಪ್ರಧಾನ ಭಾಷಣಗಾರರಾಗಿ ಮಾತನಾಡಿದರು. ಬಂಟ್ವಾಳದ ಬಿಸಿರೋಡಿನಲ್ಲಿ ನಗರ ಮಧ್ಯೆ ಸಾರ್ವಜನಿಕ ಸಭೆಯಾಗಿ ಮೇ ದಿನವನ್ನು ಆಚರಿಸಲಾಯಿತು. ಸಿಐಟಿಯು ಮುಖಂಡರಾದ ವಿಟ್ಲ ರಾಮಣ್ಣ, ಸಂಜೀವ ಬಂಗೇರ, ವಾಸು ಗಟ್ಟಿ, ಬಿ.ನಾರಾಯಣ ಸಭೆಯಲ್ಲಿ ಭಾಗವಹಿಸಿದ್ದರು.

ಮಂಗಳೂರಿನ ಪುರಭವನದಲ್ಲಿ ಸಿಐಟಿಯು ಹಾಗೂ ನೌಕರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಮೇ ದಿನಾಚರಣೆಯಲ್ಲೂ ಎಸ್.ವರಲಕ್ಷ್ಮಿ ಪ್ರಧಾನ ಭಾಷಣ ಮಾಡಿದರು. ಮೇ ದಿನಾಚರಣಾ ಸಮಿತಿಯ ಅಧ್ಯಕ್ಷರಾದ ಪಿ.ಹರೀಶ್ಚಂದ್ರ ರಾವ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ವಸಂತ ಆಚಾರಿ, ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಬಿಇಎಫ್ಐ ಮುಖಂಡರಾದ ಬಿ.ಎಂ.ಮಾಧವ, ಸಮಿತಿ ಗೌರವಾಧ್ಯಕ್ಷರಾದ ಯಶವಂತ ಮರೋಳಿ ಅಲ್ಲದೆ ಇತರ ನೌಕರ ಸಂಘಟನೆಗಳ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಿಐಟಿಯು ನಗರ ಸಮಿತಿ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು ಕಾರ್ಯಕ್ರಮ ನಿರೂಪಿಸಿದರು. ಸಭೆಗೂ ಮೊದಲು ಜ್ಯೋತಿವೃತ್ತದಿಂದ ಕಾರ್ಮಿಕರ ಮೆರವಣಿಗೆ ನಡೆದಿರುತ್ತದೆ. ಸಭಾ ಕಾರ್ಯಕ್ರಮದ ಬಳಿಕ ಕಾರ್ಮಿಕ ಕುಟುಂಬದ ಮಕ್ಕಳಿಂದ ವಿವಿಧ ಮನೋರಂಜನಾ ಕಲಾಪ್ರದರ್ಶನಗಳು ನಡೆದುವು.

– ವಾಸುದೇವ ಉಚ್ಚಿಲ




ಬೆಂಗಳೂರು

ಬಂಟ್ವಾಳ : ಬಲಿಷ್ಟ ಹೋರಾಟದಿಂದ ಬದಲಾವಣೆ ಸಾದ್ಯ – ವರಲಕ್ಷ್ಮಿ

ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ಅಂಗವಾಗಿ ಇಂದು ಬಂಟ್ವಾಳದ ಬಡ್ಡಕಟ್ಟೆಯಲ್ಲಿ ಸಿ.ಐ.ಟಿ.ಯು ಬಂಟ್ವಾಳ ತಾಲೂಕು ಸಮಿತಿ ನೇತೃತ್ವದಲ್ಲಿ ಕಾರ್ಮಿಕ ದಿನಾಚರಣೆಯು ನಡೆಯಿತು. ಬಹಿರಂಗ ಸಭೆಗೆ ಮುಖ್ಯ ಅತಿಥಿಯಾಗಿ ಸಿ.ಐ.ಟಿ.ಯು ರಾಜ್ಯ ಅದ್ಯಕ್ಷರಾದ ಕಾಮ್ರೇಡ್ ವರಲಕ್ಷ್ಮಿ ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ವರಲಕ್ಷ್ಮಿ ಕಾರ್ಮಿಕ ದಿನಾಚರಣೆಯು ಕಾರ್ಮಿಕರ ಪಾಲಿಗೆ ಒಂದು ವಿಶೇಷವಾದ ದಿನವಾಗಿದ್ದು ದಿನದಲ್ಲಿ ಎಂಟು ಗಂಟೆ ದುಡಿಮೆ ಎಂಟು ಗಂಟೆ ವಿಶ್ರಾಂತಿ ಪಡೆಯಲು ಸಾದ್ಯವಾಗಿಸಿದ್ದು ಮೇ ದಿನದ ಹುತಾತ್ಮರಿಂದ ಎಂದು ಹೇಳಿದರು, ಹೋರಾಟದ ಮೂಲಕ ಕಾರ್ಮಿಕರು ಪಡೆದಂತಹ ಹಕ್ಕುಗಳನ್ನು ಕಸಿದುಕೊಳ್ಳಲು ಇಂದಿನ ಸರಕಾರಗಳು ಪ್ರಯತ್ನಿಸುತ್ತಿವೆ ಎಂದು ಆರೋಪಿಸಿದರು. ಬಂಡವಾಳಶಾಹಿಗಳ ಕಪಿಮುಷ್ಟಿಯಲ್ಲಿರುವ ಸರಕಾರಗಳು ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಬಂಡವಾಳಶಾಹಿಗಳ ಹಿತಕಾಯುತ್ತಿದೆ ಎಂದು ಆರೋಪಿಸಿದರು.

ಪುಟ 10 ಕ್ಕೆ


ಮಂಗಳೂರು



ಮೈಸೂರು


ಕೋಲಾರ

BEML-VISL ಉಳಿಸಿ, ಕರ್ನಾಟಕ-ಭಾರತ ಉಳಿಸಿ



ಮೋದಿ ಸರಕಾರ ಕರ್ನಾಟಕದ ಬಿ.ಇ.ಎಂ.ಎಲ್., ವಿ.ಎಸ್.ಐ.ಎಲ್. ಸೇರಿದಂತೆ ಹಲವು ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು ಮೂರು ಕಾಸಿಗೆ ಮಾರಿಕೊಳ್ಳಲು ಹೊರಟಿದೆ. ಇದರ ವಿರುದ್ಧ ಈ ಉದ್ಯಮಗಳ ಕಾರ್ಮಿಕರು ಬೀದಿಗಿಳಿದಿದ್ದಾರೆ. ಬೆಂಗಳೂರಿನಲ್ಲಿ ಆಚರಿಸಿದ ಈ ಮೇ ದಿನದಂದು "ಸಾರ್ವಜನಿಕ ಉದ್ಯಮ ಉಳಿಸಿ" ಎಂಬುದು ಪ್ರಮುಖ ಘೋಷಣೆಗಳಲ್ಲಿ ಒಂದಾಗಿತ್ತು. ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಕಾರ್ಮಿಕ ಯೂನಿಯನುಗಳ ವೇದಿಕೆ ಜೆ.ಎ.ಎಫ್. ಮೇ ತಿಂಗಳಲ್ಲಿ ಈ ನಿಟ್ಟಿನಲ್ಲಿ ಪ್ರಚಾರಾಂದೋಲನ ಹಮ್ಮಿಕೊಂಡಿದೆ. ಬೆಂಗಳೂರಿನ ವಾರ್ಡು-ವಾರ್ಡುಗಳಲ್ಲಿ ಮೇ 10ರಿಂದ ಪ್ರಚಾರಾಂದೋಲನ ಆರಂಭ ಆಗಿ ಮೇ 30 ರಂದು ಮುಷ್ಕರದಲ್ಲಿ ಕೊನೆಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಒಂದು ವಿಶೇಷ ಲೇಖನ.

ಬಿ. ಸುಬ್ರಮಣ್ಯ

ಇತ್ತೀಚೆಗೆ ಇಸ್ರೋ ಸಂಸ್ಥೆಯ ರಾಕೆಟ್ ನೂರಕ್ಕೂ ಹೆಚ್ಚು ಉಪಗ್ರಹಳನ್ನು ಹೊತ್ತು ಆಗಸಕ್ಕೆ ಚಿಮ್ಮಿ, ಎಲ್ಲಾ ಉಪಗ್ರಹಗಳನ್ನು ಅದರದರ ಕಕ್ಷೆಯಲ್ಲಿ ಬಿಟ್ಟಾಗ, ಇಡೀ ಜಗತ್ತೇ ಆ ಸಾಧನೆಗೆ ಬೆಕ್ಕಸಬೆರಗಾಯಿತು. ಭಾರತದ ಜನರು ಇದೆಲ್ಲಾ ಸಾಧ್ಯವೇ? ಎಂದು ಆಶ್ಚರ್ಯಪಟ್ಟರು. ಆದರೆ, ಆ ಯೋಜನೆಯ ಹೆಚ್ಚಿನ ಭಾಗ ನಮ್ಮ ಬೆಂಗಳೂರಿನಲ್ಲಿ ರೂಪಿಸಿ-ನಿರ್ಮಾಣಗೊಂಡಿತು ಎಂದು ಹೇಳಿದರೆ ಇನ್ನು ಆಶ್ಚರ್ಯವಾಗಬೇಕು.

ನವಭಾರತದ ನಿರ್ಮಾಣದಲ್ಲಿ ಬೆಂಗಳೂರಿನ ಪಾತ್ರ .

ನಮ್ಮ ಬೆಂಗಳೂರು ನಗರವನ್ನು ಐಟಿ/ಬಿಟಿ ರಾಜಧಾನಿ ಎಂದೆಲ್ಲಾ ಕೊಂಡಾಡಲಾಗುತ್ತದೆ. ಆದರೆ ಇಂದಿನ ನಮ್ಮ ಬೆಂಗಳೂರು ಒಂದೇ ದಿನದಲ್ಲಿ ಐಟಿ/ಬಿಟಿ ನಗರವಾಗಿ ಉದ್ಭವಿಸಲಿಲ್ಲ. ಬೆಂಗಳೂರು ನಗರದ ಐಟಿ/ಬಿಟಿ ಯಶಸ್ಸಿನ ಹಿಂದೆ ನಗರದಲ್ಲಿರುವ ರಾಷ್ಟ್ರದ ಪ್ರಮುಖ ಸಾರ್ವಜನಿಕ ಉದ್ಯಮಗಳಾಗಿರುವ HAL, BEL, BEML, BHEL, ITI & HMT ಸಂಸ್ಥೆಗಳ ಅಪಾರ ಕೊಡುಗೆ ಇದೆ. ಅವುಗಳ ಬೆನ್ನಿಗೆ ರಕ್ಷಣಾ ಇಲಾಖೆಯ ಸಂಶೋಧನಾಲಯವಾಗಿರುವ ಡಿ.ಆರ್.ಡಿ.ಒ, ಎಲ್. ಆರ್.ಡಿ.ಇ, ಜಿ.ಟಿ.ಆರ್.ಇ, ಎ.ಡಿ.ಎ, ಎ.ಡಿ.ಇ, ಅಲಿಸ್ಡಾ, ಸೆಮಿಲ್ಯಾಕ್, ಡೇರ್, ಸಿ.ಎ.ಐ.ಆರ್, ಕ್ಯಾಬ್ಸ್ ಪ್ರಯೋಗಾಲಯಗಳಲ್ಲಿ ದುಡಿಯುತ್ತಿರುವ ಸಾವಿರಾರು ವಿಜ್ಞಾನಿಗಳ ಪರಿಶ್ರಮವಿದೆ. ಭಾರತೀಯ ಉಪಗ್ರಹ ಕಾರ್ಯಕ್ರಮದ ಇಸ್ರೋ, ಇಸ್ಟ್ರಾಕ್ ಬೆಂಗಳೂರಿನಲ್ಲಿದೆ. ವಿಮಾನಗಳ ವಿನ್ಯಾಸ ಮಾಡುವ ಎನ್.ಎ.ಎಲ್, ಮೂಲಭೂತ ಸಂಶೋಧನೆಯಲ್ಲಿ ತೊಡಗಿರುವ ಭಾರತೀಯ ವಿಜ್ಞಾನ ಮಂದಿರ, ನಿಯಾಸ್, ಭಾರತ ರತ್ನ ಸಿಎನ್‌ಆರ್ ರಾವ್ ಮುಖ್ಯಸ್ಥರಾಗಿರುವ ಜೆ.ಎನ್.ಸಿ.ಎ.ಎಸ್.ಆರ್ ದೇಶದ ವೈಜ್ಞಾನಿಕ ಸಾಧನೆಗೆ ನಿಶಬ್ದವಾಗಿ ಕೆಲಸ ಮಾಡುತ್ತಿವೆ.

ಅಲ್ಲದೆ ನಮ್ಮ ಬೆಂಗಳೂರು ನಗರದಲ್ಲಿ ಎನ್.ಸಿ.ಬಿ.ಎಸ್, ಐ.ಡಬ್ಲ್ಯೂ.ಎಸ್.ಟಿ, ಸಿ.ಐ.ಎಂ.ಎ.ಪಿ, ಸಿಡ್ಯಾಕ್, ಸಿಡಾಟ್, ಐ.ಸಿ.ಟಿ.ಎಸ್, ಐ.ಐ.ಎ.ಪಿ, ಜಿ.ಎಸ್.ಐ, ಎನ್.ಟಿ.ಐ.ಗಳಂತಹ ಅಂತರಾಷ್ಟ್ರೀಯ ಮಟ್ಟದ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ಸಾರ್ವಜನಿಕ ಉದ್ಯಮಗಳು ಮತ್ತು ಪ್ರಯೋಗಾಲಯಗಳು ನಮ್ಮ ರಾಷ್ಟ್ರದ ರಕ್ಷಣೆಗೆ ಮತ್ತು ದೇಶದ ಸ್ವಾಯತ್ತತೆಗೆ ಬಹು ಮುಖ್ಯವಾಗಿವೆ. ಇವುಗಳನ್ನು ತಲೆ-ತಲೆಮಾರುಗಳ ಶ್ರಮದಿಂದ ವಿಜ್ಞಾನಿಗಳು, ಇಂಜಿನಿಯರುಗಳು ಮತ್ತು ಕಾರ್ಮಿಕರು ಕಟ್ಟಿ ಬೆಳೆಸಿದ್ದಾರೆ. ಅವೆಲ್ಲವೂ ಸಾಧ್ಯವಾಗಿದ್ದು ಧೀಮಂತ ಆಡಳಿತಗಾರ ಮತ್ತು ಇಂಜಿನಿಯರ್ ಭಾರತ ರತ್ನ ಸರ್ ಎಮ್. ವಿಶ್ವೇಶ್ವರಯ್ಯನವರ ದೂರದೃಷ್ಟಿ ಮತ್ತು ಮೈಸೂರು ಅರಸರ ಉದಾರ ಗುಣದಿಂದ. ಈ ಉದ್ಯಮ-ಪ್ರಯೋಗಾಲಯ ಜಾಲದಿಂದ ನಾವು ಸಮೃದ್ಧ ಕರ್ನಾಟಕ ನಿರ್ಮಿಸಲು ಸಾಧ್ಯವಾಗಿದೆ. ಮೈಸೂರಿನ ಸಿ.ಎಫ್.ಟಿ.ಆರ್.ಐ, ಡಿ.ಎಫ್.ಆರ್. ಎಲ್, ಬಿ.ಎ.ಆರ್.ಸಿ; ಚಿತ್ರದುರ್ಗದಲ್ಲಿ ಐ.ಎ.ಎಸ್.ಸಿ ಮತ್ತು ಡಿ.ಆರ್.ಡಿ.ಒ ಪ್ರಯೋಗಾಲಯ, ಕೋಲಾರ ಮತ್ತು ಮೈಸೂರಿನಲ್ಲಿ ಬೆಮೆಲ್, ತುಮಕೂರಿನ ಗುಬ್ಬಿಯಲ್ಲಿ ಹೆಲಿಕಾಪ್ಟರ್ ಕಾರ್ಖಾನೆ – ಇವೆಲ್ಲವೂ ನಮ್ಮ ಕರ್ನಾಟಕದ ಜನತೆಯ ಹೆಮ್ಮೆಯ ಸಂಪತ್ತು. ಈ ಎಲ್ಲಾ ಸಾರ್ವಜನಿಕರ ಬಂಡವಾಳದ ಹೂಡಿಕೆಯ ಆಧಾರದಲ್ಲಿ ಬೆಂಗಳೂರಿನಲ್ಲಿ ಐಟಿ/ಬಿಟಿ ಮತ್ತು ಐಟಿಇಎಸ್ ಉದ್ಯಮ ತಲೆ ಎತ್ತಲು ಸಾಧ್ಯವಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಪ್ರಗತಿಪರ ಆಧುನಿಕ ಕರ್ನಾಟಕವನ್ನು ಸಾರ್ವಜನಿಕ ವಲಯದ ಪ್ರಯೋಗಾಲಯಗಳು ಮತ್ತು ಉದ್ಯಮಗಳನ್ನು ಬೆನ್ನೆಲುಬಾಗಿ ಬಳಸಿ ನಿರ್ಮಿಸಲಾಗಿದೆ.

ಬೆಂಗಳೂರು ಎಲ್ಲರಿಗೂ ಬೇಕು!

ಬೆಂಗಳೂರಿನ ಬೃಹತ ಸಾರ್ವಜನಿಕ ಉದ್ಯಮ-ಪ್ರಯೋಗಾಲಗಳ ಜಾಲದ ಹಿನ್ನೆಲೆಯಲ್ಲಿ ಜಾಗತಿಕ ಹೂಡಿಕೆದಾರರು ಬೆಂಗಳೂರನ್ನು ಇಷ್ಟಪಡುತ್ತಾರೆ. ಇದರಿಂದ ನಮ್ಮ ನೆರೆಯ ರಾಜ್ಯಗಳಿಗೆ ಬೆಂಗಳೂರಿನ ಮೇಲೆ ಅಸೂಯೆ ಇದೆ. ಕೆಲವು ಪ್ರಾದೇಶಿಕ ಪಕ್ಷಗಳು ಕೇಂದ್ರದಲ್ಲಿ ಒತ್ತಡ ಹಾಕಿ ಬೆಂಗಳೂರಿನ ಉದ್ಯಮಗಳ ಕೆಲವು ಘಟಕಗಳನ್ನು ತಮ್ಮ ರಾಜ್ಯಗಳಲ್ಲಿ ಸ್ಥಾಪಿಸಲು ಕಾರಣವಾಗಿದ್ದಾರೆ. ಆದರೆ ಈಗ ಬೆಂಗಳೂರಿನ ಸಾರ್ವಜನಿಕ ಉದ್ಯಮಗಳ ಮೇಲೆ ನೇರ ದಾಳಿ ಆರಂಭವಾಗಿದೆ.

ಇದಕ್ಕೊಂದು ಉದಾಹರಣೆಯೆಂದರೆ ಕೇಂದ್ರ ಸಚಿವ ಶ್ರೀ. ವೆಂಕಯ್ಯ ನಾಯ್ಡು ಅವರು. ಅವರು ಹತ್ತಾರು ವರ್ಷ ರಾಜ್ಯಸಭೆಯಲ್ಲಿರಲು ಕರ್ನಾಟಕದ ಜನತೆ ಕಾರಣರಾದರೂ, ಅವರು ಕರ್ನಾಟಕ್ಕೆ ಏನು ಮಾಡಲಿಲ್ಲ. ಕಳೆದ ವರ್ಷ ನಡೆದ ರಾಜ್ಯಸಭೆಯ ಚುನಾವಣೆಯಲ್ಲಿ ಕನ್ನಡ ಸಂಘಟನೆಗಳ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಅವರು ಕರ್ನಾಟಕದಿಂದ ಕಾಲ್ಕಿತ್ತರು. ಆ ವೇಳೆಗಾಗಲೇ ಅವರ ಮೂಲ ರಾಜ್ಯವಾಗಿರುವ ಆಂಧ್ರ ಪ್ರದೇಶಕ್ಕೆ ಹತ್ತಾರು ಉದ್ಯಮಗಳನ್ನು ಆರಂಭಿಸಿಕೊಳ್ಳಲು ತಮ್ಮ ಅಧಿಕಾರ ಬಳಕೆ ಮಾಡಿದ್ದಾರೆ, ಉದಾಹರಣೆಗೆ ಬಿ.ಇ.ಎಲ್ ಸಂಸ್ಥೆಯ ನೂತನ ಘಟಕವನ್ನು ಅವರು ಅಂ ಧ್ರದ ಪಾಲಸಮುದ್ರಂ ನಲ್ಲಿ ಉದ್ಘಾಟಿಸುತ್ತಾ ಹೇಳಿದ್ದು "ಬಿ.ಇ.ಎಲ್ ಬೆಂಗಳೂರು ಮಾತ್ರ ಘಟಕಕ್ಕಿಂತ ದೊಡ್ಡ ಘಟಕವಾಗಿ ಈ(ಪಾಲಸಮುದ್ರಂ) ಘಟಕವನ್ನು ಬೆಳೆಸಲು ನಾನು ಶ್ರಮಿಸುತ್ತೇನೆ". ಅದೇ ರೀತಿ ಇನ್ನೊಂದು ಕಾರ್ಯಕ್ರಮದಲ್ಲಿ ಅವರು "ಬೆಂಗಳೂರಿನ ಬದಲಿಗೆ ಹೈದ್ರಾಬಾದು ದೇಶದ ಏರೋಸ್ಪೇಸ್ ಉದ್ಯಮದ ಕೇಂದ್ರವಾಗಲು ನಮ್ಮ ಸರ್ಕಾರ ಶ್ರಮಿಸಲಿದೆ" ಎಂದು ಘೋಷಿಸಿದರು.

ಕಳೆದ ವರ್ಷ ಆಗಸ್ಟ್ ತಿಂಗಳಿನಲ್ಲಿ ಬಯ್‌ಬ್ಯಾಕ್ ಎಂಬ ವಿಚಿತ್ರವಾದ ಕ್ರಮದ ಮೂಲಕ ಕೇಂದ್ರ ಸರ್ಕಾರ ಎಚ್.ಎ.ಎಲ್ ಸಂಸ್ಥೆಯ 4500 ಕೋಟಿ ರೂಗಳು ಮತ್ತು ಬಿ.ಇ.ಎಲ್ ಸಂಸ್ಥೆಯ 2300 ಕೋಟಿ ರೂಗಳನ್ನು ತನ್ನ ಖರ್ಚಿಗೆ ತೆಗೆದುಕೊಂಡಿದೆ. ಈಗ ಬೆಮೆಲ್ ಸಂಸ್ಥೆಯನ್ನು ಖಾಸಗಿಯವರಿಗೆ ಹಸ್ತಾಂತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಸರ್ಕಾರವು ಬೆಮೆಲ್‌ನಲ್ಲಿ ತನ್ನ ಹೂಡಿಕೆಯನ್ನು ಶೇ.26ರಷ್ಟು ಖಾಸಗಿಯವರಿಗೆ ಮಾರಾಟ ತೀರ್ಮಾನಿಸಿ, ಅದನ್ನು ಖಾಸಗಿ ಸಂಸ್ಥೆಯನ್ನಾಗಿ ಮಾರ್ಪಾಡಿಸಲು ಕ್ರಮ ಕೈಗೊಳ್ಳುತ್ತಿದೆ.

ಬಿ.ಇ.ಎಂ.ಎಲ್.ನ ಆಸ್ತಿಯ ಮೌಲ್ಯವನ್ನು ತಿಳಿದರೆ ನಿಮಗೆ ಗಾಬರಿಯಾಗಬಹುದು. ಬೆಮೆಲ್ ಸಂಸ್ಥೆ ಕರ್ನಾಟಕದ ಮೂರು ಕಡೆ – ಬೆಂಗಳೂರು, ಮೈಸೂರು ಮತ್ತು ಕೆಜಿಎಫ್‌ನಲ್ಲಿದೆ. ಮೈಸೂರಿನ ಬೆಮೆಲ್‌ಗೆ ಸುಮಾರು ಮೂರು ಸಾವಿರ ಎಕರೆ ಜಮೀನಿದೆ. ಇದು ಒಂದು ಎಕರೆಗೆ ಒಂದು ಕೋಟಿ ಎಂದರೂ ಮೂರು ಸಾವಿರ ಕೋಟಿ ರೂಗಳು. ಇನ್ನು ಬೆಂಗಳೂರಿನ ಆಸ್ತಿಯ ಮೌಲ್ಯವನ್ನು ಬೆಲೆ ಕಟ್ಟಲಾಗದು. ಅಲ್ಲದೆ, ಕೋಟ್ಯಂತರ ಬೆಲೆ ಬಾಳುವ ಸಾವಿರಾರು ಅತ್ಯಾಧುನಿಕ ಯಂತ್ರೋಪಕರಣಗಳು, ಕಟ್ಟಡಗಳು – ಏನಿಲ್ಲವೆಂದರೂ ಒಂದು ಲಕ್ಷ ಕೋಟಿ ರೂಗಳಿಗಿಂತ ಹೆಚ್ಚಿದೆ, ಬೆಮೆಲ್ ಸಂಸ್ಥೆಯ

ಪುಟ 10 ಕ್ಕೆ





ಬೆಮೆಲ್ ಒಂದು ಪರಿಚಯ . . .

ಸ್ವಾತಂತ್ರ್ಯಾನಂತರ ತೀವ್ರಗತಿಯ ಕೈಗಾರಿಕೀಕರಣದ ಯೋಜನೆಗಳನ್ನು ಕೇಂದ್ರ ಸರ್ಕಾರವು ಕೈಗೊಳ್ಳಲು ನಿರ್ಧರಿಸಿತು. ಅದಕ್ಕಾಗಿ ಭಾರಿ ಪ್ರಮಾಣದ ಗಣಿಗಾರಿಕೆಯನ್ನು ಕೈಗೊಳ್ಳಲು ಯಂತ್ರೋಪಕರಣಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿತ್ತು. ಈ ಸಮಸ್ಯೆಗೆ ಖಾಯಂ ಪರಿಹಾರವಾಗಿ, ದಿನಾಂಕ ಏಪ್ರಿಲ್ 11, 1964ರಂದು ರಕ್ಷಣಾ ಸಚಿವಾಲಯದಡಿಯಲ್ಲಿ ಬೆಮೆಲ್ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ಸಂಸ್ಥೆಯು ಪ್ರಮುಖವಾಗಿ ರಕ್ಷಣಾ ಪಡೆಗಳಿಗೆ ಅಗತ್ಯವಿರುವ ಭಾರಿ ಟ್ರಕ್ಕುಗಳನ್ನು ದೇಶೀಯವಾಗಿ ನಿರ್ಮಿಸುತ್ತಿದೆ. ಅಲ್ಲದೆ, ಗಣಿಗಾರಿಕೆಗೆ ಹತ್ತು ಹಲವು ಬಗೆಯ ಬೃಹತ್ ಯಂತ್ರೋಪಕರಣಗಳನ್ನು ನಿರ್ಮಿಸುತ್ತಿದೆ. ಬೆಮೆಲ್ ಸಂಸ್ಥೆ ಭಾರತೀಯ ರೈಲ್ವೆಗೆ ಪ್ರಮುಖ ಕೋಚು ನಿರ್ಮಾಣಕಾರನಾಗಿ ಕಾರ್ಯ ನಿರ್ವಹಿಸುತ್ತಿದೆ. ಇತ್ತೀಚೆಗೆ ಬೆಂಗಳೂರಿನ ಹೆಮ್ಮೆಯ ನಮ್ಮ ಮೆಟ್ರೋಗೆ ಅತ್ಯುತ್ಕೃಷ್ಟ ಕೋಚ್‌ಗಳನ್ನು ಬೆಮೆಲ್ ನಿರ್ಮಿಸಿಕೊಟ್ಟಿದೆ. ಈ ಎಲ್ಲಾ ಚಟುವಟಿಕೆಗಳಿಂದ ಬೆಮೆಲ್ ದೇಶೀಯ ಉದ್ಯಮಗಳನ್ನು ಪೋಷಿಸಿ ಬೆಳೆಸುವುದರೊಂದಿಗೆ, ಅಮೂಲ್ಯ ವಿದೇಶಿ ವಿನಿಮಯವನ್ನು ಉಳಿಸಿಕೊಡುತ್ತಿದೆ. ಸಂಸ್ಥೆಯು ತನ್ನ ನಾಲ್ಕು ಘಟಕಗಳಲ್ಲಿ(ಬೆಂಗಳೂರು-ಮೈಸೂರು-ಕೆಜಿಎಫ್ ಮತ್ತು ಕೇರಳ ರಾಜ್ಯದ ಪಾಲಕ್ಕಾಡ್) ಒಟ್ಟು 8827 ಉದ್ಯೋಗಿಗಳನ್ನು ಹೊಂದಿದೆ. ಅಲ್ಲದೆ ಸಾವಿರಾರು ಗುತ್ತಿಗೆ ಕಾರ್ಮಿಕರೂ ಈ ಸಂಸ್ಥೆಯಿಂದ ಜೀವನೋಪಾಯ ಕಂಡುಕೊಂಡಿದ್ದಾರೆ.

ದಿನಾಂಕ ಮಾರ್ಚ್ 31, 2016ಕ್ಕೆ ಕೊನೆಗೊಂಡ 2015-16ನೇ ಹಣಕಾಸಿನ ವರ್ಷದಲ್ಲಿ ಬೆಮೆಲ್ ಸಂಸ್ಥೆಯು ಒಟ್ಟು 3426 ಕೋಟಿ ರೂ. ವಹಿವಾಟು ನಡೆಸಿ, 64.27ಕೋಟಿ ರೂ. ತೆರಿಗೆ ಮುನ್ನ ಲಾಭವನ್ನು ಗಳಿಸಿದೆ. **ಪ್ರಸಕ್ತ ಸಂಸ್ಥೆಯ ಕಾಪು ನಿಧಿ 2067.59 ಕೋಟಿ ರೂ.ಗಳಷ್ಟಿದೆ.**

ದಿನಾಂಕ ಜನವರಿ 6, .2017ರಂದು ಕೇಂದ್ರ ಸಚಿವ ಸಂಪುಟ ಸಭೆಯು ಬೆಮೆಲ್ ಸಂಸ್ಥೆಯ ಬಂಡವಾಳದ ಉಳಿದ ಶೇ.26ರಷ್ಟನ್ನು ಮಾರಾಟ ಮಾಡಲು ತೀರ್ಮಾನಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. 1990 ಮತ್ತು 2007ರಲ್ಲಿ ಎರಡು ಬಾರಿ ಷೇರು ವಿಕ್ರಯ ಪ್ರಕ್ರಿಯೆಯಿಂದಾಗಿ, ಈವರೆಗೆ ಸಂಸ್ಥೆಯ ಶೇ.45.97ರಷ್ಟು ಷೇರು ಬಂಡವಾಳವನ್ನು ಸರ್ಕಾರ ಮಾರಾಟ ಮಾಡಿದೆ. ಬೆಮೆಲ್ ಸಂಸ್ಥೆಯಲ್ಲಿ ಪ್ರಸಕ್ತ ಕೇಂದ್ರ ಸರ್ಕಾರದ ಷೇರು ಬಂಡವಾಳದ ಪಾಲು ಪ್ರಸಕ್ತ ಶೇ. 54.03ರಷ್ಟಿದೆ. ಆದರೆ, ಕೇಂದ್ರ ಸರ್ಕಾರದ ಸಚಿವ ಸಂಪುಟದ ತೀರ್ಮಾನವು ಜಾರಿಗೊಂಡಲ್ಲಿ ಸಂಸ್ಥೆಯು ಸಂಪೂರ್ಣವಾಗಿ ಖಾಸಗಿ ಸಂಸ್ಥೆಯಾಗಲಿದೆ.

ಬೆಮೆಲ್ ಸಂಸ್ಥೆಯು ರಕ್ಷಣಾ ಸಚಿವಾಲಯದಡಿಯಲ್ಲಿರುವ ಪ್ರಮುಖ ಭಾರಿ ಕೈಗಾರಿಕೆಯಾಗಿದ್ದು, ಅದು ಖಾಸಗಿ ಪಾಲಾಗುವುದು ರಾಷ್ಟ್ರದ ಸಾರ್ವಭೌಮತೆ ಮತ್ತು ಸ್ವಾಯತ್ತ ಉತ್ಪಾದನಾ ಸಾಮರ್ಥ್ಯಕ್ಕೆ ಕೊಡಲಿ ಪೆಟ್ಟು ನೀಡಿದಂತಾಗುತ್ತದೆ. ಅಲ್ಲದೆ ಅಪಾರ ಪ್ರಮಾಣದ ಯಂತ್ರೋಪಕರಣಗಳು, ಕಾಪು ನಿಧಿ(2000ಕೋಟಿ ರೂ.ಗಿಂತಲೂ ಮಿಗಿಲು), ಕೌಶಲಯುಕ್ತ ಕಾರ್ಮಿಕವರ್ಗ ಮತ್ತು ಬುದ್ಧಿವಂತ ಇಂಜಿನಿಯರುಗಳನ್ನು ಹೊಂದಿರುವ ಬೆಮೆಲ್ ಸಂಸ್ಥೆಯನ್ನು ಕೇವಲ ಸುಮಾರು 1000 ಕೋಟಿ ರೂಗೆ ಖಾಸಗಿಯವರಿಗೆ ಪರಭಾರೆ ಮಾಡಲಾಗುತ್ತಿದೆ.

ಬಲಿಷ್ಟ ಹೋರಾಟದಿಂದ ಬದಲಾವಣೆ ಸಾಧ್ಯ....... ಪುಟ 8 ರಿಂದ


ಮಂಗಳೂರು

ಕಾರ್ಮಿಕರ ಬದುಕಿನಲ್ಲಿ ಬದಲಾವಣೆ ಆಗಬೇಕದರೆ ಅದು ಕೇವಲ ಹೋರಾಟದಿಂದ ಮಾತ್ರ ಹೊರತು ಮತ ನೀಡುವುದರಿಂದ ಅಲ್ಲ ಎಂದ ಅವರು ದೇಶ ಪ್ರೇಮದ ಹೆಸರಿನಲ್ಲಿ, ಜಾತಿ ಧರ್ಮದ ಹೆಸರಿನಲ್ಲಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯಲಾಗುತ್ತಿದ್ದು ಇದರ ವಿರುದ್ಧ ಕಾಮಿಕರು ಒಗ್ಗಟ್ಟಾಗಿ ಜಾಗೃತಗೊಳ್ಳಬೇಕು ಎಂದರು. ಇತ್ತೀಚೆಗೆ ಕೇಂದ್ರ ಸರಕಾರವು ಅಚ್ಛೇ ದಿನ್ ಹೆಸರಿನಲ್ಲಿ ಜನರ ಬದುಕನ್ನೇ ನಿರ್ನಾಮ ಮಾಡಲು ಹೊರಟಿದೆ ಎಂದು ಆರೋಪಿಸಿದರು. ಮಂತ್ರಿಗಳ ಕಾರಿನ ಕೆಂಪು ದ್ವೀಪಗಳನ್ನು ತೆಗೆದ ಕೂಡಲೇ ಜನರ ಸಂಕಷ್ಟಗಳು ದೂರವಾಗುತ್ತದೆಯೇ ಎಂದು ಮೋದಿ ಸರಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷೀಯ ಭಾಷಣವನ್ನು ಸಿ.ಐ.ಟಿ.ಯು ಜಿಲ್ಲಾ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಮಾಡಿದರು. ಸಭೆಯಲ್ಲಿ ಹಿರಿಯ ಕಾರ್ಮಿಕ ಮುಖಂಡರಾದ ಬಿ.ವಾಸುಗಟ್ಟಿ, ಸಂಜೀವ ಬಂಗೇರ, ಮೋನಪ್ಪ ಸಪಲ್ಯರನ್ನು ಸನ್ಮಾನಿಸಲಾಯಿತು. ಸಿ.ಐ.ಟಿ.ಯು ಬಂಟ್ವಾಳ ತಾಲೂಕು ಕಾರ್ಯದರ್ಶಿ ರಾಮಣ್ಣ ವಿಟ್ಲ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಸಿ.ಐ.ಟಿ.ಯು ಜಿಲ್ಲಾ ಮುಖಂಡರಾದ ಜಯಂತಿ ಶೆಟ್ಟಿ, ಲೋಲಾಕ್ಷಿ, ರಾಮಕೃಷ್ಣ .ಬಿ, ಹಾಗೂ ವಿವಿಧ ಸಂಘಟನೆಗಳ ಪದಾದಿಕಾರಿಗಳು ಉಪಸ್ತಿತರಿದ್ದರು. ಸಿ.ಐ.ಟಿ.ಯು ಬಂಟ್ವಾಳ ತಾಲೂಕು ಖಜಾಂಜಿ ಉದಯಕುಮಾರ್ ದನ್ಯವಾದ ಸಲ್ಲಿಸಿದರು, ಸಭೆಗೂ ಮುನ್ನ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯಿಂದ ಆಕರ್ಷಕ ಮೆರವಣಿಗೆ ನಡೆಯಿತು.



ಮೈಸೂರು



ಮೈಸೂರು


ಬೆಂಗಳೂರು

BEML-VISL ಉಳಿಸಿ........... ಪುಟ 9 ರಿಂದ

ಆಸ್ತಿ. ಸಂಸ್ಥೆಯ ಲೆಕ್ಕ ಪತ್ರಗಳ ಪ್ರಕಾರವೇ, ಅದ–ರೆ ಕಾಪು ನಿಧಿಯಲ್ಲಿ 2000 ಕೋಟಿ ರೂಗಳಿವೆ. ಆದರೆ ಈ ಎಲ್ಲವನ್ನು ಕೇಂದ್ರ ಸರ್ಕಾರ ಎಷ್ಟು ಹಣಕ್ಕೆ ಕೈತೊಳೆದುಕೊಳ್ಳುತ್ತಿದೆ ಎಂದರೆ ನೀವು ಎದೆ ಬಡಿದುಕೊಂಡು ಸಾಯಬಹುದು. **ಕೇಂದ್ರ ಸರ್ಕಾರ ಈ ಮಾರಾಟದಿಂದ ನಿರೀಕ್ಷಿಸುತ್ತಿರುವ ಹಣ ಕೇವಲ ಒಂದು ಸಾವಿರ ಕೋಟಿ!** ಇದೊಂದ ನಯವಂಚಕ ಹಗರಣ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕಳೆದ ಕೆಲವು ವರ್ಷಗಳ ಹಿಂದೆ ಕೇಂದ್ರದಲ್ಲಿ ಕೇರಳದ ಎ.ಕೆ.ಅಂತೋಣಿ ಅವರು ರಕ್ಷಣಾ ಸಚಿವರಾಗಿದ್ದಾಗ, ಬೆಮೆಲ್ ಮತ್ತು ಬಿ.ಇ.ಎಲ್. ಗಳ ತಲಾ ಒಂದು ಘಟಕವನ್ನು ಕೇರಳದಲ್ಲಿ ಸ್ಥಾಪಿಸಿಕೊಂಡರು.

ಆದರೆ ಕರ್ನಾಟಕದ ಸಂಸದರು ಈ ಸಂಸ್ಥೆಗಳನ್ನು ಉಳಿಸುವ ಮಾತಿರಲಿ, ಒಬ್ಬರೂ ಸರ್ಕಾರದ ನಿರ್ಧಾರದ ಬಗ್ಗೆ ದನಿ ಎತ್ತಿಲ್ಲ. ನಮ್ಮ ರಾಜ್ಯದವರಲ್ಲದ ಕಾರ್ಮಿಕ ಮುಖಂಡರಾಗಿರುವ ಸಿ.ಪಿ.ಐ.(ಎಂ)ನ ತಪನ್ ಕುಮಾರ್ ಸೇನ್ ಅವರು ರಾಜ್ಯಸಭೆಯಲ್ಲಿ ಈ ಪ್ರಶ್ನೆಯನ್ನು ಎತ್ತಿದಾಗ, ಅವರೊಟ್ಟಿಗೆ ದನಿಗೂಡಿಸಿದ ಏಕೈಕ ರಾಜ್ಯಸಭಾ ಸದಸ್ಯರೆಂದರೆ, ಕರ್ನಾಟಕದ ಬಿ ಕೆ ಹರಿಪ್ರಸಾದ್!

ಭಾರತದ ಕ್ಷಿಪಣಿ ಮತ್ತು ಉಪಗ್ರಹ ಯೋಜನೆಗಳಲ್ಲಿ ಎಚ್.ಎ.ಎಲ್. ಮತ್ತು ಬಿ.ಇ.ಎಲ್ ತೀವ್ರವಾಗಿ ತೊಡಗಿವೆ. ಬೆಮೆಲ್ "ತಾತ್ರಾ"ದಂತಹ ಸಮರ ವಾಹನಗಳನ್ನು ತಯಾರಿಸುವುದಲ್ಲದೆ, ಗಣಿಗಾರಿಕೆ ಯಂತ್ರೋಪಕರಣಗಳನ್ನು ನಿರ್ಮಿಸುತ್ತಿದೆ. ಆಧುನಿಕ ದಿನಮಾನದ ಯುದ್ಧಕ್ಕೆ ನಿರ್ಣಾಯಕವಾಗಿರುವ ವಿದ್ಯುನ್ಮಾನ ಸಂವಹನ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಬಿ.ಇ.ಎಲ್ ತಯಾರಿಸುತ್ತಿದೆ. ಸಮರ ವಿಮಾನಗಳನ್ನು ಎಚ್‌ಎಎಲ್ ಉತ್ಪಾದಿಸುತ್ತಿದೆ ಮತ್ತು ಅವುಗಳನ್ನು ದುರಸ್ತಿ ಮಾಡುತ್ತಿದೆ. ಎಚ್.ಎ.ಎಲ್, ಬಿ.ಇ.ಎಲ್ ಮತ್ತು ಬಿ.ಇ.ಎಮ್.ಎಲ್.ಗಳನ್ನು ದುರ್ಬಲಗೊಳಿಸಿದರೆ ರಾಷ್ಟ್ರದ ಸಾರ್ವಭೌಮತೆಗೆ ಅಪಾಯವಾಗುತ್ತದೆಯಲ್ಲದೆ, ನಮ್ಮ ನೆಚ್ಚಿನ ನಾಡು ಕರ್ನಾಟಕದ ಆರ್ಥಿಕತೆಗೆ ಕೊಡಲಿ ಪೆಟ್ಟಾಗಲಿದೆ.

ಸಾರ್ವಜನಿಕರ ಆಸ್ತಿ ಮಾರುವುದೆಂದರೆ

ಸಾರ್ವಜನಿಕ ಉದ್ಯಮಗಳು ಜನತೆಯ ತೆರಿಗೆಯ ಹಣದಿಂದ ನಿರ್ಮಾಣವಾಗಿವೆ. ಇಲ್ಲಿ ಎಲ್ಲಾ ಜಾತಿಯ–ಭಾಷೆಯ ಜನ ದುಡಿಯವ ಅವಕಾಶವಿದೆ, ಇಂತಹ ಸಂಸ್ಥೆಗಳನ್ನು ಖಾಸಗಿ ಪಾಲು ಮಾಡುವುದೆಂದರೆ, ಅದು ಸಾಮಾಜಿಕ ನ್ಯಾಯದ ಮೇಲೆ ನಡೆಯುತ್ತಿರುವ ದಾಳಿ ಎಂದೂ ಪರಿಗಣಿಸಬೇಕಿದೆ. ಈ ಹಿಂದೆ ಯು.ಪಿ.ಎ ಸರ್ಕಾರ ಖಾಸಗಿ ವಲಯದಲ್ಲಿ ಮೀಸಲಾತಿ ನೀಡುವ ಬಗ್ಗೆ ಕೊಂಚ ಚಿಂತಿಸುತ್ತಿದೆ ಎಂದು ತಿಳಿದ ಕೂಡಲೇ ಎಲ್ಲಾ ಉದ್ಯಮಪತಿಗಳು ಒಂದಾದರು. ಸರ್ಕಾರದ ಬಾಯಿಗೆ ಬೀಗ ಜಡಿದರು. ಸರ್ಕಾರ ಈ ಉದ್ಯಮಗಳನ್ನು ಉದ್ಯಮಪತಿಗಳಿಗೇ ಮಾರುತ್ತಿರುವುದರಿಂದ, ಅವರಿಗೆ ಖುಷಿಯೋ–ಖುಷಿ. **ಈ ಉದ್ಯಮಗಳಿಂದ ಸರ್ಕಾರ ತನ್ನ ಕೈತೊಳೆದುಕೊಳ್ಳುತ್ತಿರುವುದು ನಮ್ಮ ನಾಡಿನಲ್ಲಿ ಉದ್ಯೋಗ ಸೃಷ್ಟಿ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳಿಗೆ ಹಿನ್ನಡೆ ಉಂಟುಮಾಡುತ್ತಿದೆ.**

ರಾಷ್ಟ್ರದ ಸುಭದ್ರತೆ ಮತ್ತು ಸಾರ್ವಭೌಮತೆಗೆ ಕೊಡಲಿ ಪೆಟ್ಟು . .

ರಕ್ಷಣಾ ಉತ್ಪಾದನಾ ಕ್ಷೇತ್ರಕ್ಕೆ ಕೇಂದ್ರ ಸರ್ಕಾರವು ವಿದೇಶಿ ನೇರ ಬಂಡವಾಳಕ್ಕೆ ದಿಡ್ಡಿ ಬಾಗಿಲನ್ನು ತೆರೆದಿಟ್ಟಿದೆ. ಇದು ನಮ್ಮ ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾಗಿದೆ. ಸದಾ ಕಾಡುತ್ತಲಿರುವ ನಮ್ಮ ನೆರೆ–ಹೊರೆಯ ದೇಶಗಳು ಒಂದು ಕಡೆ, ಲಾಭಕೋರ ದೇಶಿ–ವಿದೇಶಿ ಕಂಪನಿಗಳು ರಕ್ಷಣಾ ಪೂರೈಕೆಗೆ ಕೈಹಾಕುವ ಅವಕಾಶವನ್ನು ಕೇಂದ್ರ ಸರ್ಕಾರ ನೀಡುರುವುದರಿಂದಾಗಿ, ನಮ್ಮ ದೇಶದ ರಕ್ಷಣಾ ವೆಚ್ಚವು ಅಧಿಕವಾಗಲಿದೆ. ಹೆಚ್ಚಿನ ರಕ್ಷಣಾ ವೆಚ್ಚವೆಂದರೆ ಜನ ಸಾಮಾನ್ಯರ ಮೇಲೆ ಹೆಚ್ಚಿನ ತೆರಿಗೆಯನ್ನು ರಾಷ್ಟ್ರದ ರಕ್ಷಣೆಯ ಹೆಸರಿನಲ್ಲಿ ವಿಧಿಲಾಗುತ್ತದೆ ಆದ–ರೆ, ಸಾರ್ವಜನಿಕ ವಲಯದ ಉದ್ಯಮಗಳು ತಾವು ಗಳಿಸಿದ ಲಾಭವನ್ನು ತೆರಿಗೆ, ಲಾಭಾಂಶದ ಮೂಲಕ ಸರ್ಕಾರಕ್ಕೆ ಹಿಂದಿರುಗಿಸಿ, ಸಾರ್ವಜನಿಕರ ತೆರಿಗೆ ಹೊರೆಯನ್ನು ಕಡಿಮೆ ಮಾಡುತ್ತಿವೆ.

ಹೋರಾಟ ನಡೆಯುತ್ತಲೆ ಇದೆ. . .
ಸಾರ್ವಜನಿಕರು ಏಕೆ ಗಮನಿಸುತ್ತಿಲ್ಲ?

ಕಳೆದ 25 ವರ್ಷಗಳಲ್ಲಿ ಸಾರ್ವಜನಿಕ ಉದ್ಯಮಗಳ ರಕ್ಷಣೆಗೆ ಇಲ್ಲಿ ದುಡಿಯುತ್ತಿರುವ ಕಾರ್ಮಿಕರು 13 ಅಖಿಲ ಭಾರತ ಮುಷ್ಕರಗಳನ್ನು ಕೈಗೊಂಡಿದ್ದಾರೆ. ಆದರೆ ಈಗ ದೇಶಕ್ಕೆ ಅತ್ಯುತ್ತಮ ಸಾರ್ವಜನಿಕ ವಲಯದ ಉದ್ಯಮಗಳನ್ನು ಹುಟ್ಟಿಸಿ–ಬೆಳೆಸಿದ ಕರ್ನಾಟಕದ ಮೇಲೆ ದಾಳಿ ಒದಗಿ ಬಂದಿದೆ. ಕರ್ನಾಟಕದ ಜನ–ಜಲ–ನೆಲದ ರಕ್ಷಣೆ ಎಂದರೆ ಜನತೆಯ ಬದುಕಿನ ದಾರಿಗಳನ್ನು ರಕ್ಷಿಸುವುದೂ ಸೇರಿದೆ. ಅಂದರೆ, ಕರ್ನಾಟಕದ ಜನತೆ ದುಡಿದು ಬದುಕಲು ಸಿದ್ಧರಿದ್ದಾರೆ, ಆದರೆ ಕೇಂದ್ರ ಸರ್ಕಾರಕ್ಕೆ ಅದು ಬೇಡವಾಗಿದೆ. ಈ ಸಂಸ್ಥೆಗಳನ್ನು ಮಾರಾಟ ಮಾಡಿ ರಾಜಕಾರಣಿಗಳು ತಮ್ಮ ಜೇಬು ತುಂಬಿಸಿಕೊಳ್ಳಲು ಯೋಜನೆ ಹಾಕಿದ್ದಾರೆ.

ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಪ್ರಯೋಗಾಲಯಗಳ ಮಹತ್ವದ ಹಿನ್ನೆಲೆಯಲ್ಲಿ ಕೇಂದ್ರೋದ್ಯಮದ ಕಾರ್ಮಿಕ ಸಂಘಗಳು ಒಂದೆಡೆ ಸೇರಿ ಜಂಟಿ ಕ್ರಿಯಾ ರಂಗವನ್ನು ರಚಿಸಿವೆ. ನಮ್ಮ ರಾಜ್ಯದ ಪ್ರಗತಿಯ ಅಡಿಗಲ್ಲಾಗಿರುವ ಸಾರ್ವಜನಿಕ ವಲಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮತ್ತು ಸಾರ್ವತ್ರಿಕ ಸಹಿ ಸಂಗ್ರಹ ಚಳವಳಿಯನ್ನು ಹಮ್ಮಿಕೊಳ್ಳಲಾಗಿದೆ.

ಕರ್ನಾಟಕದ ಜನ–ಜೀವನ ಮತ್ತು ಆರ್ಥಿಕತೆಯನ್ನು ಬುಡಮೇಲು ಮಾಡಲು ಮತ್ತು ಬೆಂಗಳೂರಿನ ಉದ್ಯೋಗ ಸೃಷ್ಟಿ ಸಾಮರ್ಥ್ಯವನ್ನು ಬುಡಮೇಲು ಹೊರಟಿರುವ ಕೇಂದ್ರ ಸರ್ಕಾರದ ಜನವಿರೋಧಿ ಕ್ರಮದ ವಿರುದ್ಧ ಸಾರ್ವಜನಿಕರು ಬಾಯ್ತೆರದು ದನಿ ಎತ್ತಬೇಕಾಗಿರುವುದು ಈ ಹೊತ್ತಿನ ಅಗತ್ಯ. ಇಲ್ಲಿ ಹೇಳುತ್ತಿರುವ ಉದ್ಯಮಗಳೆಲ್ಲವೂ ಸಾರ್ವಜನಿಕರ ಸ್ವತ್ತು ಅಂದರೆ ಈ ಊರಿನ ಪ್ರತಿಯೊಬ್ಬರಿಗೂ ಸೇರಿದ್ದು. ಆನರ ತೆರಿಗೆ ಹಣದಿಂದ ಅವುಗಳನ್ನು ಕಟ್ಟಿ ಬೆಳಸಲಾಗಿದೆ; ಸರ್ಕಾರಕ್ಕೆ ಅವುಗಳನ್ನು ಮಾರಾಟ ಮಾಡುವ ಯಾವ ಹಕ್ಕೂ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆಯೇ ಸರ್ವಶಕ್ತರು, ಯಾರೂ ಸರ್ಕಾರವನ್ನು ಬಳಸಿ ಸಾರ್ವಜನಿಕರ ಆಸ್ತಿಯನ್ನು ದೋಚಲಾಗದು.

ಈ ಸಂಬಂಧ ಸಾರ್ವಜನಿಕ ಉದ್ಯಮಗಳ ಕಾರ್ಮಿಕರು ಬೆಂಗಳೂರಿನಲ್ಲಿ ಬೃಹತ್ ಮೆರವಣಿಗೆಯನ್ನು ಜನವರಿ 28 ರಂದು ನಡೆಸಿ, ಜನವರಿ 29 ರಂದು ರಾಷ್ಟಮಟ್ಟದ ಕಾರ್ಮಿಕರ ಸಮಾವೇಶವನ್ನು ನಡೆಸಿದರು. ಇವ್ಯಾವೂ ಸಮರ್ಪಕವಾಗಿ ಮಾಧ್ಯಮದಲ್ಲಿ ಪ್ರಕಟವಾಗಲಿಲ್ಲ. ಇದು ನಮ್ಮ ಮಾಧ್ಯಮಗಳ–ವಾಹಿನಿಗಳ ಜನಬದ್ಧತೆಗೆ ಸಾಕ್ಷಿ.

ಬೆಮೆಲ್ ಒಂದೇ ಅಲ್ಲ. . .

ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯನವರು ದೂರದೃಷ್ಟಿಯಿಂಡ ಮೈಸೂರು ಬ್ಯಾಂಕ್ ಸ್ಥಾಪಿಸಿದರು. ಆದರೆ ಈಗಿನ ಭಾರತ ಸರ್ಕಾರ ಬ್ಯಾಂಕ್‌ಗಳ ವಿಲೀನದ ಹೆಸರಿನಲ್ಲಿ ಮೈಸೂರು ಬ್ಯಾಂಕನ್ನು ಎಸ್.ಬಿ.ಐನಲ್ಲಿ ವಿಲೀನ ಮಾಡಿದೆ. ಅಂದರೆ ಸ್ವಾತಂತ್ರ್ಯಪೂರ್ವದ ಕರ್ನಾಟಕದ ಬ್ಯಾಂಕೊಂದನ್ನು ಇಲ್ಲದಂತೆ ಮಾಡಿದೆ, ಸಂಸ್ಥೆಗಳನ್ನು ಮುಚ್ಚುವ ಇನ್ನೊಂದು ಬಗೆ ಇದು.

ಇದೇ ರೀತಿ ತಿರುವಾಂಕೂರು ಮಹಾರಾಜರು ಸ್ಥಾಪಿಸಿದ ಎಸ್.ಬಿ.ಟಿ.ಯನ್ನು ಎಸ್‌ಬಿಐನಲ್ಲಿ ವಿಲೀನದ ಪ್ರಶ್ನೆ ಉದ್ಭವಿಸಿದಾಗ, ಕೇರಳದ ಎಲ್ಲಾ ಪಕ್ಷಗಳ ಸಂಸದರು, ಮುಖ್ಯಮಂತ್ರಿಯವರು ಒಂದಾಗಿ ಬೀದಿಗಿಳಿದರು. ಆದೇ ಸಂದರ್ಭದಲ್ಲಿ ಎಸ್.ಬಿ.ಎಂ. ಬಗ್ಗೆ ಕರ್ನಾಟಕದ ಒಬ್ಬ ಜನಪ್ರತಿನಿಧಿಯೂ ಚಕಾರವೆತ್ತಲಿಲ್ಲ!

ಭದ್ರಾವತಿಯ ಉಕ್ಕಿನ ಕಾರ್ಖಾನೆಯನ್ನು ಸರ್ ಎಂ ವಿಶ್ವೇಶವರಯ್ಯನವರು ಸ್ಥಾಪಿಸಿದರು. ಈಗ ಈ ಸಂಸ್ಥೆಯ ಭಾರತ ಉಕ್ಕು ಪ್ರಾಧಿಕಾರದಡಿಯಲ್ಲಿದೆ. ಈ ಕಾರ್ಖಾನೆಯನ್ನೂ ಖಾಸಗಿ ಪಾಲು ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮತ್ತೆ ಕರ್ನಾಟಕದ ಯಾವ ಜನಪ್ರತಿನಿಧಿಯೂ ಬಾಯಿ ತೆಗೆಯುತ್ತಿಲ್ಲ!

ಕೇಂದ್ರ ಸರ್ಕಾರವು ಕರ್ನಾಟಕದ ಪ್ರಮುಖ ಉದ್ಯಮಗಳನ್ನು ಮಾರಾಟಕ್ಕಿಟ್ಟಾಗ, ಪ್ರತಿಭಟಿಸಬೇಕು, ಅಥವಾ ಆ ಉದ್ಯಮಗಳನ್ನು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಿ, ರಾಜ್ಯ ಸರ್ಕಾರದಿಂದ ನಾವು ನಡೆಸುತ್ತೇವೆ ಎಂದು ಸವಾಲು ಹಾಕಬೇಕು. ಈ ಹಿಂದೆ ಕೇಂದ್ರದ ಯುಪಿಎ ಸರ್ಕಾರ ಸೇಲಂ ಸ್ಟೀಲ್ ಕಾರ್ಖಾನೆ, ನೈವೇಲಿ ಲಿಗ್ನೈಟ್ ಕಾರ್ಖಾನೆ ಮಾರಾಟ ಮಾಡುತ್ತೇವೆಂದು ಹೇಳಿದಾಗ, ಕಾರ್ಮಿಕರ ಹೋರಾಟ, ಜನಸಾಮಾನ್ಯರ ಬೆಂಬಲ ಮತ್ತು ತಮಿಳುನಾಡಿನ ಅಂದಿನ ಮುಖ್ಯ ಮಂತ್ರಿಯವರ ಮಧ್ಯಪ್ರವೇಶದಿಂದ ಅದನ್ನು ತಡೆಯಲು ಸಾಧ್ಯವಾಗಿದೆ. ಅದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ.

ಜೂನ್ 4 : ಮೈಸೂರಿನಲ್ಲಿ "ಸಂವಿಧಾನ ಉಳಿಸಲು ದೇಶಪ್ರೇಮಿ ಸಮಾವೇಶ"



ಕಳೆದ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಅಭಿವೃದ್ಧಿಯ ಕನಸುಗಳನ್ನು ಬಿತ್ತಿ, ಕೋಮುವಾದವನ್ನು ಅಂತರ್ಗಾಮಿ ಪ್ರಚಾರಕ್ಕೆ ಬಳಸಿಕೊಂಡು ಒಂದು ಬಲ ಪಂಥೀಯ ಪ್ರತಿಗಾಮಿ ಬಿ,ಜೆ.ಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು. ಕಳೆದ ಮೂರು ವರ್ಷಗಳಲ್ಲಿ ಜನತೆಯನ್ನು ಘೋಷಣೆಗಳ ಮೂಲಕ, ಭಾವುಕ ಪ್ರಶ್ನೆಗಳ ಮೂಲಕ, ಹುಸಿ ರಾಷ್ಟ್ರವಾದದ ಮೂಲಕ, ದಿಕ್ಕು ತಪ್ಪಿಸುತ್ತ ಬಂದಿರುವ ನರೇಂದ್ರ ಮೋದಿಯವರ ಸರ್ಕಾರವು ಇಂದು ಜನರ ಬದುಕಿನ ಪ್ರಶ್ನೆಗಳಿಗೆ ಉತ್ತರಿಸುವ ಬದಲು ಜನರನ್ನು ಇನ್ನೂ ಸಂಕಷ್ಟಕ್ಕೆ ತಳ್ಳುವ ಕಾರ್ಪೋರೇಟ್ ಪರವಾದ ನೀತಿಗಳನ್ನು ಜಾರಿಗೊಳಿಸುತ್ತಿದೆ. ಪ್ರಶ್ನಿಸುವವರನ್ನು "ದೇಶದ್ರೋಹಿ" ಗಳೆಂದು ಬಿಂಬಿಸುವ ಮೂಲಕ ಜನರ ಪ್ರಜಾಸತ್ತಾತ್ಮಕ ಹಕ್ಕನ್ನು ದಮನಗೊಳಿಸಲಾಗುತ್ತಿದೆ.

ದಲಿತರು, ಅಲ್ಪಸಂಖ್ಯಾತರರ ಮೇಲೆ ನಿರಂತರ ಹತ್ಯೆ, ದಾಳಿ, ಕೊಲೆಗಳನ್ನು ಎಸಲಾಗುತ್ತಿದೆ. ಕೋಮು ಗಲಭೆಗಳನ್ನು ಸೃಷ್ಟಿಸುವ, ಕರ್ಮಠ ಹಿಂದೂ ಸಂಪ್ರದಾಯಗಳನ್ನೇ ದೇಶದ ಸಂಸ್ಕೃತಿಯೆಂದು ಬಿಂಬಿಸುವ ಮೂಲಕ ಮೋದಿ ಸರ್ಕಾರವು ತನ್ನ ಉದ್ದೇಶಿತ ರಹಸ್ಯ ಕಾರ್ಯಸೂಚಿಯನ್ನು ಅನಾವರಣಗೊಳಿಸಲು ಮುಂದಾಗುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕ್, ಚುನಾವಣೆ ಆಯೋಗಗಳಂತಹ ಸಂವಿಧಾನಿಕ ಸ್ವಾಯತ್ತ ಸಂಸ್ಥೆಗಳಲ್ಲಿ ಮಧ್ಯ ಪ್ರವೇಶ ಮಾಡಿ ಅವುಗಳನ್ನು ದುರ್ಬಳಕೆ ಮಾಡಲು ಹೊರಟಿದೆ. ಅಭಿವೃದ್ಧಿಯ ಕನಸುಗಳನ್ನು ಕೋಟ್ಯಾಂತರ ಯುವ ಮನಸ್ಸುಗಳಲ್ಲಿ ಕಟ್ಟಿ ರಾಜಕೀಯ ಲಾಭ ಪಡೆಯುವ ಭರದಲ್ಲಿ ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆಯನ್ನು ಪ್ರಧಾನಿ ಮೋದಿಯವರು ನೀಡಿದರು. ಆದರೆ ಕಳೆದ ಮೂರು ವರ್ಷಗಳ ಸರ್ಕಾರದ ಪ್ರಗತಿ ಪತ್ರ ಇದಕ್ಕೆ ವೈತ್ತಿರಿಕ್ತವಾಗಿದ್ದು, ಕೇವಲ 1,35,000 ಉದ್ಯೋಗಗಳು ಅದೂ ಅಸಂಪ್ರದಾಯಿಕ ಕ್ಷೇತ್ರಗಳಲ್ಲಿ ಸೃಷ್ಟಿಯಾಗಿರುವುದು ಬಹಿರಂಗವಾಗಿದೆ.

ಕಾರ್ಪೋರೇಟ್ ಬಂಡವಾಳಕ್ಕೆ ಪೂರಕವಾಗಿ ಕೋಮುವಾದವನ್ನು ಪ್ರತಿಪಾದಿಸಲಾಗುತ್ತಿದೆ. ಸಾಮಾಜಿಕ ಕ್ಷೋಭೆಯನ್ನು ಸೃಷ್ಟಿಸುವ ಮೂಲಕ ಹಿಂದೂ ಅಸ್ಮಿತೆಯನ್ನು ಜಾಗೃತಗೊಳಿಸಲಾಗುತ್ತಿದೆ. ಗೋ ರಕ್ಷಣೆಯ ಹೆಸರಿನಲ್ಲಿ ಮುಸ್ಲಿಂ ಸಮುದಾಯ, ದಲಿತ ಸಮುದಾಯಗಳ ಮೇಲೆ ಹಲ್ಲೆ, ಕೊಲೆ ನಡೆಸುವಂತಹ ಮುಕ್ತ ಸ್ವಾತಂತ್ರ್ಯವನ್ನು ಸಂಘ ಪರಿವಾರದ ಸಂಸ್ಥೆಗಳಿಗೆ ನಿಡಲಾಗಿದೆ. ದೇಶದ ಬೌದ್ಧಿಕ ಕೇಂದ್ರಗಳಾದ ವಿಶ್ವವಿದ್ಯಾಲಯಗಳಲ್ಲಿ ಬಿ.ಜೆ.ಪಿ.ಯ ವಿದ್ಯಾರ್ಥಿ ರಂಗದ ಅವ್ಯಾಹತ ಹಿಂಸೆಯಿಂದಾಗಿ ವಿಶ್ವವಿದ್ಯಾಲಯಗಳು ರಣರಂಗವಾಗಿ ಬದಲಾಗುತ್ತಿದೆ. ಚೆನ್ನೈನ ಐಐಟಿ ಯ ಅಂಬೇಡ್ಕರ್ ಪೆರಿಯಾರ್ ಅಧ್ಯಯನ ಗುಂಪಿನ ಮೇಲೆ ನಿಷೇಧ, ಜೆ.ಎನ್.ಯು ನಲ್ಲಿ ನ್ಯಾಯ ಕೇಳಿದ ವಿದ್ಯಾರ್ಥಿಗಳ ಮೇಲೆ ದೇಶ ದ್ರೋಹದ ಅಪಾದನೆ, ಎಫ್.ಟಿ.ಐ.ಐ.ನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಯ ಮೇಲೆ ದಮನ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ಹೈದರಬಾದ್ ವಿಶ್ವವಿದ್ಯಾಲಯದಲ್ಲಿ ರೋಹಿತ್ ವೇಮುಲಾರ ಶೈಕ್ಷಣಿಕ ಹತ್ಯೆ ಇವು ಇತ್ತೀಚಿನ ಕೆಲವು ವಿದ್ಯಾಮಾನಗಳಾಗಿವೆ. ಗುಜರಾತಿನ ಊನದಲ್ಲಿ ದಲಿತರ ಮೇಲೆ ಹಲ್ಲೆ, ದಲಿತ ಮಹಿಳೆಯನ್ನು ನಗ್ನಗೊಳಿಸುವುದು, ಮೀಸಲಾತಿ ವಿರೋಧಿ ಹೇಳಿಕೆ ನೀಡುವುದು, ಮಹಿಳೆಯರ ಕುರಿತು ಅವಹೇಳನಕಾರಿ ಹೇಳಿಕೆ ನೀಡುವುದು, ಬಿ.ಜೆ.ಪಿ ಹಾಗೂ ಅದರ ಸಂಬಂಧಿತ ವ್ಯಕ್ತಿ – ಸಂಘಟನೆಗಳ ನಿಜವಾದ ಬಣ್ಣವನ್ನು ಬಯಲು ಮಾಡಿವೆ.

ಸಂವಿಧಾನದ ಪೀಠಿಕೆಯಲ್ಲಿ ಒಟ್ಟು ಸಂವಿಧಾನದ ಆಶಯಗಳಾದ ಸಮಾನತೆ, ಭಾತೃತ್ವಗಳು ಇಂದು ಬಿ.ಜೆ.ಪಿ. ಸರ್ಕಾರ ಆಳ್ವಿಕೆಯಲ್ಲಿ ಅರ್ಥಹೀನವಾಗಿದೆ, ಆರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆಗಳು ತೀವ್ರವಾಗಲು ಮೋದಿ ಸರ್ಕಾರದ ಕಾರ್ಪೋರೇಟ್ ಪರವಾದ ನೀತಿಗಳೇ ಕಾರಣವಾಗಿವೆ. ಭಾರತೀಯ ಬಹುಮುಖಿ ಸಮಾಜವನ್ನು ಧರ್ಮ ಜಾತಿಗಳ ನೆಲೆಗಳಲ್ಲಿ ವಿಭಜಿಸುವ ಕ್ರಮಗಳು ಪುರಾತನ ಶೋಷಕ ಸಂಸ್ಕೃತಿಯ ಪುನರುತ್ಥಾನವಲ್ಲದೆ ಮತ್ತೇನು ಅಲ್ಲ. ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆಯೊದಗಿರುವ ಈ ಸಂದರ್ಭದಲ್ಲಿ ಸಂವಿಧಾನವನ್ನು ಉಳಿಸುವ ಪ್ರಜಾಸತ್ತಾತ್ಮಕ ಅನಿವಾರ್ಯ ಸಂದರ್ಭದಲ್ಲಿ ನಾವಿದ್ದೇವೆ.

ಈ ನಿಟ್ಟಿನಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಜೂನ್ 4, 2017ರಂದು ಮೈಸೂರಿನಲ್ಲಿ ಸಂವಿಧಾನ ಉಳಿಸುವ ದೇಶಪ್ರಮಿ ಸಮಾವೇಶವನ್ನು ಹಮ್ಮಿಕೊಂಡಿದೆ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಸೀತಾರಾಂ ಯೆಚೂರಿಯವರು ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಸಂವಿಧಾನವನ್ನು ಪ್ರೀತಿಸುವ, ಅದರ ಆಶಯಗಳ ಕುರಿತು ಅಭಿಮಾನ ಹೊಂದಿರುವ ಎಲ್ಲಾ ಜನ ವಿಭಾಗಗಳು ಸಮಾವೇಶದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ.

– ಜೆ.ವಿ.ಶ್ರೀರಾಮರೆಡ್ಡಿ, ಕಾರ್ಯದರ್ಶಿ,
ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ

ಓದಲೇ ಬೇಕಾದ ಪುಸ್ತಕ




ಸ್ವಾತಂತ್ರ್ಯ ಹೋರಾಟದ ರಣಕಹಳೆ, ದಾದಾಭಾಯಿ ನವರೋಜಿಯವರ ``Poverty and un-British rule in India". ರೈತ ಶೋಷಣೆಯ ಅಧ್ಯಯನ. ಕಾಂಗ್ರೆಸ್ ಮಹಾಧಿವೇಶನದ ನಿರ್ಣಯಗಳು, ಮನವಿಗಳು, ಸ್ವಾತಂತ್ರ್ಯ ಹೋರಾಟಗಾರರ ಭಾಷಣಗಳಿಗೆ ಸಾರವನ್ನು ಒದಗಿಸಿದ ಪುಸ್ತಕ. ಮೊದಲ ಪ್ರಕಟನೆ 1903. 1876 ರಿಂದಲೇ ಕಾಂಗ್ರೆಸ್‌ನ ಸ್ಥಾಪನೆಗಿಂತ ಮೊದಲೇ ಇದರ ವಿವಿಧ ಅಧ್ಯಯನಗಳನ್ನು ಭಾರತದ ಅಂದಿನ ಸಭೆ, ಸಮಾವೇಶಗಳಲ್ಲಿ ಮಂಡಿಸಲಾಗುತ್ತಿತ್ತು.

ಬ್ರಿಟಿಷರಿಂದ ಭಾರತದ ಸೂರೆಯಾಗುತ್ತಿದೆ ಎಂಬ Drain theory ಯನ್ನು ಮೊದಲ ಬಾರಿಗೆ ರೂಪಿಸಿದ ಪ್ರಮಾಣವನ್ನು ಲೆಕ್ಕಿಸಿದ, ಸ್ವಾತಂತ್ರ್ಯದ ಕಹಳೆ ಊದಿದ ಪ್ರಮುಖ ಅಧ್ಯಯನ. ಬ್ರಿಟಿಷರು ಭಾರತವನ್ನು ಉದ್ಧಾರ ಮಾಡಲೆಂದೇ ಬಂದಿದ್ದಾರೆ ಎಂದು ಸಾರುತ್ತಿದ್ದ ಕಾಲದಲ್ಲಿ ಬ್ರಿಟಿಷ್ ಅಂಕಿ ಅಂಶಗಳಿಂದಲೇ ಬ್ರಿಟಿಷ್ ಲೂಟಿಯ ಪ್ರಮಾಣವನ್ನು ಲೆಕ್ಕಿಸಿದರು. ಅದರ ಹೇಗೆ, ಏನುಗಳನ್ನು ವಿವರಿಸಿದರು. ರೈತರು ಬೆಳೆಯುವ ಹತ್ತಿ, ಅಕ್ಕಿ, ಸಕ್ಕರೆ, ಎಣ್ಣೆಬೆಳೆಗಳು, ಕಾಫಿ, ಟೀ ಇತ್ಯಾದಿಗಳ ಬೆಲೆಗಳು ಹೇಗೆ ಅವರನ್ನು ಸೂರೆ ಒಡೆಯಲು ನೆರವಾಗಿವೆ ಎಂಬುದನ್ನು ಸಾಧಿಸಿ ತೋರಿಸಿದರು. ಬ್ರಿಟಿಷ್ ಅಧಿಕಾರಿಗಳ ಸಂಬಳ, ರಾಜ ಸಮಾನ ಸವಲತ್ತುಗಳು, ಪಿಂಚಣಿ ಹೇಗೆ ಭಾರತದ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ ಎಂದು ತೋರಿಸಿದರು.

ಲಂಡನ್‌ನ ಬ್ರಿಟಿಷ್ ಸಂಸತ್ತಿನಲ್ಲಿ ಭಾರತದ ಪ್ರಜೆಗಳ ಪ್ರತಿನಿಧಿಗಳನ್ನು ಒಳಗೊಳ್ಳಬೇಕೆಂದು ಪ್ರತಿಪಾದಿಸಿದರು.

ಈ ಬೃಹತ್ ಪುಸ್ತಕವನ್ನು ನಂತರ ಸ್ವತಂತ್ರ ಭಾರತ ಸರ್ಕಾರ ಕೇವಲ ಹತ್ತು ರೂ. ಗೆ ಪ್ರಕಟಿಸಿತು. ಆದರೆ ಈಗ ಅದರ ಬೆಲೆ ರೂ. 2000 ಕ್ಕೂ ಹೆಚ್ಚು!

– ಜಿ.ಎನ್. ನಾಗರಾಜ್



ಚಿಂಚೋಳಿಯ ಕೆರೆಯಲ್ಲಿ ಬುದ್ಧ ಬಸವ ಅಂಬೇಡ್ಕರ ಜಯಂತಿ



29 ಏಪ್ರೀಲ್ 2017 ರಂದು ಕಲಬುರಗಿಯ ತಾಜಸುಲ್ತಾನಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಸೈಯ್ಯದ ಚಿಂಚೋಳಿಯ ಕೆರೆಯಲ್ಲಿ ಬುದ್ಧ ಬಸವ ಅಂಬೇಡ್ಕರ ಜಯಂತಿಯನ್ನು ಕಾಯಕ ದಿನವನ್ನಾಗಿ ಆಚರಿಸಲಾಯಿತು.

ಕೆರೆಯ ಹೂಳೆತ್ತುವ ಮೂಲಕ ಕಾರ್ಯಕ್ರಮವನ್ನು ಚಾಲನೆಗೊಳಿಸಿದ ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾದ ಹೆಬ್ಸಿಬಾ ರಾಣಿ ಇವರು ಮಾತನಾಡಿ 'ಬುದ್ಧ ಬಸವ ಅಂಬೇಡ್ಕರ ವಿಶ್ವ ಮಾನವರಾಗಿದ್ದಾರೆ. ಇವರು ಸಮಾನತೆಗಾಗಿ ಕಟ್ಟಿಕೊಂಡ ಸಂದೇಶವನ್ನು ನಾವು ಬದುಕಿನುದ್ದಕ್ಕೂ ಪಾಲಿಸಬೇಕು. ಅದರಲ್ಲಿಯೂ ಹನ್ನೆರಡನೆಯ ಶತಮಾನವು ಮಹಿಳಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿದ ಸಂದರ್ಭವಾಗಿದೆ. ಈಗಲೂ ಮಹಿಳೆಯರು ಘನತೆಯ ಬದುಕನ್ನು ನಡೆಸಲು ವಚನಗಳು ಬಹು ದೊಡ್ಡ ಆಸರೆಯಾಗಿವೆ. ಮಹಿಳೆಯರಿಗಾಗಿ ಗೌರವದ ಸಮಾಜ ಬೇಕಿದೆ. ಅದಕ್ಕಾಗಿ ಮಹಿಳೆಯರು ಮುಂಚೂಣಿಯಲ್ಲಿರಬೇಕು. ಎಲ್ಲ ಮಹಿಳೆಯರು ಶೌಚಾಲಯ ಕಟ್ಟಿಸಿಕೊಳ್ಳಲು ಮುಂದಾಗಬೇಕು. ಅದರಲ್ಲಿಯೂ ಗರ್ಭಿಣಿ ಮಹಿಳೆಯರಿಗೆ ಬಯಲು ಬಹಿರ್ದೆಸೆ ಅಪಾಯಕಾರಿಯಾದದ್ದು. ಗರ್ಭಿಣಿ ಸಂದರ್ಭದಲ್ಲಿ ಮನೆಯಲ್ಲಿಯೇ ಶೌಚಾಲಯ ಇರುವಂತೆ ನೋಡಿಕೊಳ್ಳಬೇಕು. ಅಂತಹ ಮಹಿಳೆಯರನ್ನು ಗುರುತಿಸಿ ಗ್ರಾಮ ಪಂಚಾಯತ್ತು ಅವರಿಗಾಗಿ ಅವರ ಮನೆಯಲ್ಲಿ ಶೌಚಾಲಯ ಕಟ್ಟಿಸಿಕೊಳ್ಳಲು ಸಹಕರಿಸಬೇಕು. ಹಾಗೂ ಎಲ್ಲ ಜಾತಿ ಧರ್ಮದ ಗರ್ಭವತಿ ಮಹಿಳೆಯರನ್ನು ಒಂದೆ ಕಡೆ ಸೀಮಂತ (ಕುಬುಸ) ಮಾಡಬೇಕು.' ಎಂದು ಹೇಳಿದರು.

ಇನ್ನೊಬ್ಬ ಅತಿಥಿಯಾಗಿ ನೀಲಾ ಕೆ ಮಾತನಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಅಶ್ವಿನಿ ಮದನಕರ್ ಇವರು "ಇಂದು ಬಸವ ಜಯಂತಿಯೊಂದಿಗೆ ಬುದ್ಧ ಅಂಬೇಡ್ಕರರನ್ನೂ ಸೇರಿಸಿಕೊಂಡು ಕಾಯಕ ದಿನವನ್ನಾಗಿ ಅಚರಿಸುತ್ತಿದ್ದೇವೆ. ಎಲ್ಲ ಜಾತಿಯ ಧರ್ಮದ ಶ್ರಮಿಕರು ಇಲ್ಲಿ ಸೇರಿದ್ದಾರೆ. ನಮ್ಮದು ಬೆವರ ಭಾಷೆಯಾಗಿದೆ. ಶ್ರಮಿಕ ಲೋಕ ನ್ಯಾಯಕ್ಕಾಗಿ ಮತ್ತು ಜಾತಿ ಲಿಂಗ ವರ್ಗ ವರ್ಣದ ತಾರತಮ್ಯದ ವಿರುದ್ಧ ದನಿಯೆತ್ತಬೇಕಿದೆ' ಎಂದು ಹೇಳಿದರು. ಡಾ. ಮೀನಾಕ್ಷಿ ಬಾಳಿ, ನಂದಾದೇವಿ ಮಂಗೊಂಡಿ, ನಿಂಗಪ್ಪ ಮಂಗೊಂಡಿ, ರವೀಂದ್ರ ರುದ್ರವಾಡಿ ಸಭೆಯಲ್ಲಿ ಹಾಜರಿದ್ದರು. ತಾಲ್ಲೂಕು ಪಂಚಾಯತನ ಕಾರ್ಯನಿರ್ವಹಕಾಧಿಕಾರಿಯಾದ ಶಿವಶರಣಪ್ಪ ಜೀವಣಗಿ ಇವರೂ ಮಾತನಾಡಿದರು.

ಕಾರ್ಯಕ್ರಮದಲ್ಲಿ ತವರ ಋಣ ತೀರಿಸಲು ಶ್ರಮಿಸಿದ ಆರು ಜನ ಮಹಿಳೆಯರಿಗೆ ಸಿಇಓ ಹೆಬ್ಸಿಬಾರಾಣಿ ಅಭಿನಂದಿಸಿದರು. ತವರ ಋಣ ತೀರಿಸಿದ ಶಿವಲೀಲಾ ಪೂಜಾರಿ,(ಗಣಜಲಖೇಡ), ಶರಣಮ್ಮ ಅಂಬಲಗಿ(ನರೋಣ), ಮಲ್ಲಮ್ಮ ಮದನಕರ್(ಗೌಡಗಾಂವ್), ಅನಸೂಯ (ಮುಗಟಾ), ರೇಖಾ(ಮಾಲಗತ್ತಿ) ಸುಂದ್ರಾಬಾಯಿ (ಗುಡೂರು) – ಇವರಿಗೆ ಸಂಘಟನೆಯು ಮನದುಂಬಿ ಅಭಿನಂದಿಸಿತು.

ಒಳ್ಳೆಯ ದಿನಗಳಲ್ಲಿ ಭದ್ರತಾ ಪಡೆಗಳ ಹುತಾತ್ಮರು, ಮಾನವ ಗುರಾಣಿಗಳು ಇತ್ಯಾದಿ



ಎಪ್ರಿಲ್24 ರಂದು ಛತ್ತೀಸ್‌ಗಡ ರಾಜ್ಯದ ಸುಕ್ಮಾ ಜಿಲ್ಲೆಯಲ್ಲಿ 26 ಸಿಆರ್‌ಪಿಎಫ್ ಸೈನಿಕರು ಮಾವೋವಾದಿಗಳ ದಾಳಿಗಳಿಗೆ ಬಲಿಯಾದ ಸುದ್ದಿ ದೇಶಾದ್ಯಂತ ಆಕ್ರೋಶ ಮೂಡಿಸಿದೆ. ಏಕೆಂದರೆ ಇದು 2010ರಲ್ಲಿ 75 ಸಿಬ್ಬಂದಿಯನ್ನು ಬಲಿ ತೆಗೆದುಕೊಂಡ ದಾಂತೆವಾಡದ ದುರಂತದ ನಂತರದ ಅತಿ ದೊಡ್ಡ ದುರಂತ ಎನ್ನಲಾಗಿದೆ.

ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಗೃಹಮಂತ್ರಿಗಳು ಈ ಹುತಾತ್ಮರ ಬಲಿದಾನಗಳು ವ್ಯರ್ಥವಾಗುವುದಿಲ್ಲ ಎಂದಿದ್ದಾರೆ.

ಈ ಬಗ್ಗೆ ಟಿಪ್ಪಣಿ ಮಾಡುತ್ತ ಈ ಹಿಂದೆ ಸಿಆರ್‌ಪಿಎಫ್‌ನ ಮಹಾನಿರ್ದೇಶಕರಾಗಿದ್ದ ಮತ್ತು ಪಂಜಾಬಿನ ಡಿಜಿಪಿ ಆಗಿ ಖಲಿಸ್ತಾನಿ ಭಯೋತ್ಪಾದನೆಯನ್ನು ನಿಭಾಯಿಸಿದ್ದ ಕೆಪಿಎಸ್ ಗಿಲ್ ಇಂತಹ ಪ್ರತಿಯೊಂದು ಪ್ರಮುಖ ಹೊಡೆತದ ನಂತರ ರಾಜಕೀಯ ಮುಖಂಡರು 'ನಮ್ಮ ಧೀರ ಸೈನಿಕರು', 'ಬಲಿದಾನ' ಇತ್ಯಾದಿ ಮಾತುಗಳನ್ನಾಡುವುದು ಈಗ ಸಾಮಾನ್ಯವಾಗಿ ಬಿಟ್ಟಿದೆ ಎನ್ನುತ್ತಾರೆ. ಜತೆಗೆ ಇದಕ್ಕೆ ಸರಿಯಾದ ಪ್ರತ್ಯುತ್ತರ ಕೊಡಲಾಗುವುದು, ಯಾರೂ ಶಿಕ್ಷೆ ಅನುಭವಿಸದೇ ಇರಲು ಬಿಡುವುದಿಲ್ಲ ಎಂಬ ಬೆದರಿಕೆಗಳೂ ಇರುತ್ತವೆ; **ಆದರೆ ಪದೇ-ಪದೇ ಇಂತಹ ಬಲಿದಾನಗಳು ಏಕೆ ನಡೆಯಬೇಕಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ, ಮತ್ತೆ-ಮತ್ತೆ ನಡೆಯುವ ಈ ದುರಂತಗಳಿಗೆ ಕಾರಣವಾದ ರಾಜಕೀಯ ಮತ್ತು ಆಡಳಿತಾತ್ಮಕ ಕಬಳಿಕೆಯನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ಗಿಲ್ ಹೇಳಿದ್ದಾರೆ.** ಈ ಬಿಕ್ಕಟ್ಟು ಮತ್ತು ಸರಕಾರದ ಅತ್ಯುನ್ನತ ಮಟ್ಟಗಳಲ್ಲಿ ಅದರ ಮೂಲದ ಬಗ್ಗೆ ಏನೂ ಮಾಡದಿದ್ದರೆ ಇಂತಹ 'ಬಲಿದಾನ'ಗಳು ಮತ್ತು 'ನಮ್ಮ ಹುತಾತ್ಮ'ರ ಸಂಖ್ಯೆ ಹೆಚ್ಚುತ್ತಲೇ ಇರುತ್ತದೆ ಎಂದು ಅವರು ನಿಷ್ಠುರವಾಗೇ ಹೇಳಿದ್ದಾರೆ(scroll.in ಎಪ್ರಿಲ್29)

ಈ ಘಟನೆಯ ಬಗ್ಗೆ ಕೆಲವು ಮಾಹಿತಿ ಕಳವಳಕಾರಿ ಮಾಹಿತಿಗಳು ಮಾಧ್ಯಮಗಳಲ್ಲಿ ವರದಿಯಾಗಿದೆ. ಎರಡು ತಿಂಗಳ ಹಿಂದೆ ಸಿಆರ್‌ಪಿಎಫ್‌ನ ಮಹಾನಿರ್ದೇಶಕರ ನಿವೃತ್ತಿಯ ನಂತರ ಈ ಹುದ್ದೆಯನ್ನು ಇನ್ನೂ ಭರ್ತಿ ಮಾಡಲಾಗಿರಲಿಲ್ಲ, ತಾತ್ಕಾಲಿಕ ನೇಮಕ ಮಾತ್ರ ಆಗಿತ್ತು ಎಂಬುದು ಒಂದು ಸಂಗತಿ. ಈ ಪ್ರದೇಶದಲ್ಲಿ ಒಂದು ಕಿ.ಮೀ. ರಸ್ತೆ ನಿರ್ಮಿಸಲು 15-20 ದಿನಗಳು ಬೇಕಾಗುತ್ತವೆ. ಇದಕ್ಕೆ ಹೊಸದೊಂದು ತಂತ್ರಜ್ಞಾನ ಲಭ್ಯವಿದ್ದು ಅದು ಈ ಕೆಲಸವನ್ನು 1-2 ದಿನಗಳಲ್ಲಿ ಮುಗಿಸುತ್ತದೆ. ಈ ಪ್ರಸ್ತಾವವನ್ನು ಛತ್ತೀಸ್‌ಗಡ ಸರಕಾರಕ್ಕೆ ಸಲ್ಲಿಸಿ ಮೂರು ವರ್ಷಗಳಾದರೂ ಏನೂ ಮಾಡಿಲ್ಲ ಎಂಬುದು ಇನ್ನೊಂದು ಸಂಗತಿ. ಹುತಾತ್ಮರಾದ ಈ ಸಿಆರ್‌ಪಿಎಫ್ ಸಿಬ್ಬಂದಿ ಒಂದು ಹೆದ್ದಾರಿ ನಿರ್ಮಾಣಕ್ಕೆ ರಕ್ಷಣೆ ಒದಗಿಸುವ ಕೆಲಸವನ್ನು ನಿರ್ವಹಿಸುತ್ತಿದ್ದವರು. ಈ ದುರಂತದ ನಂತರವಷ್ಟೇ ಸಿಆರ್‌ಪಿಎಫ್‌ಗೆ ಪೂರ್ಣ ಪ್ರಮಾಣದಲ್ಲಿ ಮಹಾನಿರ್ದೇಶಕರನ್ನು ನೇಮಿಸಲಾಗಿದೆ.

2006-07ರಲ್ಲಿ ಛತ್ತೀಸ್‌ಗಡ ಸರಕಾರಕ್ಕೆ ಭದ್ರತಾ ಸಲಹೆಗಾರರೂ ಆಗಿದ್ದ ಕೆಪಿಎಸ್ ಗಿಲ್ ಈ ಪ್ರದೇಶದಾದ್ಯಂತ ಸಂಚರಿಸಿ ಮೂರು ಹೆದ್ದಾರಿಗಳನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕು ಎಂದು ಸಲಹೆ ನೀಡಿದ್ದರಂತೆ. ಆದರೆ ಈಗ ಹತ್ತು ವರ್ಷಗಳ ನಂತರವೂ ಈ ನಿಟ್ಟಿನಲ್ಲಿ ಅರ್ಧದಷ್ಟು ಮಾತ್ರ ಕೆಲಸ ಆಗಿದೆ ಎಂದು ಗಮನಿಸಿರುವ ಗಿಲ್‌ರವರಿಗೆ ತನಿಖೆಯಿಂದ ಹೆಚ್ಚೇನೂ ನಿರೀಕ್ಷೆ ಇಲ್ಲ. ಇದು ತಮ್ಮ ಮೇಲೆ ಆರೋಪವನ್ನು ತಪ್ಪಿಸುವ ಸಕ್ರಿಯ ವಿಕೃತಿಯಾಗಬಹುದಷ್ಟೇ, ಅಲ್ಲದೆ ಶಿಕ್ಷೆ ವಿಧಿಸುವ ನಿಲುವಿನಿಂದ ಏನನ್ನೂ ಸಾಧಿಸಿದಂತಾಗವುದಿಲ್ಲ ಎಂದು ಅವರು ಇನ್ನಷ್ಟು ನಿಷ್ಠುರವಾಗಿ ಹೇಳಿದ್ದಾರೆ.

ಇದಕ್ಕೆ ಮೊದಲು, **ಬಿಎಸ್‌ಎಫ್‌ನ ಮಾಜಿ ಮುಖ್ಯಸ್ಥರಾದ ಇ ಎನ್ ರಾಮಮೋಹನ್ ಹಿಂದಿನ ತಪ್ಪುಗಳಿಂದ ಪಾಠ ಕಲಿಯುವ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದ್ದರು** (thecitizen.in, ಎಪ್ರಿಲ್28). ಇವರು 2010ರ ದಾಂತೆವಾಡ ಘಟನೆಯ ತನಿಖೆ ನಡೆಸಿದವರು. ಬಹುಶಃ ಸಿಆರ್‌ಪಿಎಫ್‌ಗೆ ತಾನು ಸೂಚಿಸಿದ ಕ್ರಮಗಳು ಬಹಳ 'ಕಟು' ಎಂದನಿಸಿರಬೇಕು ಎಂದು ಅವರು ಹೇಳುತ್ತಾರೆ.

ಅವರು ಇನ್ನೂ ಮುಂದೆ ಹೋಗಿ, **ಈ ತಾಂತ್ರಿಕ ಪ್ರಶ್ನೆಗಳು ಒತ್ತಟ್ಟಿಗಿರಲಿ, ಸರಕಾರ ನಮ್ಮ ಸಂವಿಧಾನದಲ್ಲಿನ ಐದನೇ ಶೆಡ್ಯೂಲನ್ನು ಕಾಯಾ, ವಾಚಾ, ಮನಸಾ ಜಾರಿ ಮಾಡುವ ವರೆಗೆ ಪರಿಸ್ಥಿತಿ ಹೀಗೇ ಮುಂದುವರೆಯುತ್ತದೆ ಎನ್ನುತ್ತಾರೆ.** ಈ ಶೆಡ್ಯೂಲ್ ಒಂಭತ್ತು ರಾಜ್ಯಗಳಲ್ಲಿ (ಇವುಗಳಲ್ಲಿ ಏಳು ಬಿಜೆಪಿ ಆಳ್ವಿಕೆಯ ರಾಜ್ಯಗಳು) ಆದಿವಾಸಿ ಜನಗಳು ನೆಲೆಸಿರುವ ಪ್ರದೇಶಗಳಲ್ಲಿ ಅವರ ಹಕ್ಕುಗಳ ಬಗ್ಗೆ ಹೇಳುತ್ತದೆ. ಆದರೆ ಈಗಲೂ ಈ ಕಡುಬಡವ ಆದಿವಾಸಿಗಳು, ಅದರಲ್ಲೂ ಆದಿವಾಸಿ ಮಹಿಳೆಯರು ಭದ್ರತಾ ಪಡೆಗಳು, ಆಡಳಿತದ ಮತ್ತು ರಾಜಕಾರಣಿಗಳ ಶೋಷಣೆಗೆ ಒಳಗಾಗಿರುವಾಗ ಅವರು ನಮ್ಮಲ್ಲಿ ನಂಬಿಕೆ ಮತ್ತು ವಿಶ್ವಾಸ ಇಡುವುದು ಹೇಗೆ ಸಾಧ್ಯ ಎಂದು ರಾಮಮೋಹನ್ ಪ್ರಶ್ನಿಸುತ್ತಾರೆ. ಛತ್ತೀಸ್‌ಗಡದ ಬಿಜೆಪಿ ರಾಜ್ಯ ಸರಕಾರಕ್ಕೆ ಬಹಳ ಪ್ರಿಯನಾಗಿದ್ದ ಒಬ್ಬ ಪೋಲಿಸ್ ಉನ್ನತಾಧಿಕಾರಿ 'ಭಾರತೀಯ ಪೋಲೀಸ್ ಪಡೆಗೇ ಕಳಂಕ'ನಾಗಿದ್ದನೆಂದು ಅವರು ವರ್ಣಿಸಿದ್ದಾರೆ. ಅಂತವರ ಮೂಲಕ ಜಾರಿ ಮಾಡುವ ಧೋರಣೆಗಳು ಆದಿವಾಸಿಗಳಿಗೆ ಕಿರುಕುಳ, ಹಿಂಸೆಯಲ್ಲದೇ ಬೇರೇನು ಕೊಡಲು ಸಾಧ್ಯ? ನಿಜ, ಇದನ್ನು ಜಾರಿ ಮಾಡುವವರು ಸಾಮಾನ್ಯ ಭದ್ರತಾ ಸಿಬ್ಬಂದಿ. ಕಿರುಕುಳ, ಹಿಂಸೆ ಅನುಭವಿಸುವವರಿಗೆ ತಮ್ಮ ಪೀಡಕರಾಗಿ ಮೊದಲಿಗೆ ಕಾಣುವವರು ಇವರೇ.

ಈ ಸಂದರ್ಭದಲ್ಲಿ, ನಿವೃತ್ತ ಸೇನಾಧಿಕಾರಿ ಮೇಜರ್ ಜನರಲ್ ಎಸ್.ಜಿ.ವೊಂಬತ್ಕೆರೆಯವರ ಇತ್ತೀಚಿನ ಒಂದು ಮಾತನ್ನು ನೆನಪಿಸಿಕೊಳ್ಳಬಹುದು. **ಸೇನೆಯನ್ನು ರಾಜಕಾರಣಿಗಳು 'ಮಾನವ ಗುರಾಣಿ'ಗಳಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದರೆ ಅದು ಅತಿಶಯೋಕ್ತಿಯಾದೀತೇ** ಎಂದು ಅವರು ಕೇಳಿದ್ದಾರೆ. ಸೇನಾ ಮುಖ್ಯಾಲಯದಲ್ಲಿ ಶಿಸ್ತು ಮತ್ತು ವಿಚಕ್ಷಣೆಯ ಅಡಿಶನಲ್ ಡಿ.ಜಿ.ಯಾಗಿದ್ದ ಈ ವಿಶಿಷ್ಟ ಸೇವಾ ಮೆಡಲ್ ವಿಜೇತ ಸೇನಾಧಿಕಾರಿ ಇತ್ತೀಚೆಗೆ ಕಾಶ್ಮೀರದಲ್ಲಿ ಭಾರತೀಯ ಸೇನಾ ತುಕಡಿಯೊಂದು ಕಾಶ್ಮೀರದ ಯುವಕನೊಬ್ಬನನ್ನು 'ಮಾನವ ಗುರಾಣಿ'ಯಾಗಿ ಬಳಸಿರುವುದರ ಬಗ್ಗೆ ದೇಶದೆಲ್ಲೆಡೆಯಲ್ಲಿ ಎದ್ದ ಪ್ರತಿಕ್ರಿಯೆಯ ಬಗ್ಗೆ ಬರೆಯುತ್ತ ಈ ಪ್ರಶ್ನೆ ಕೇಳಿದ್ದಾರೆ(thecitizen.in,, ಎಪ್ರಿಲ್ 18).

ಅವರು ಇದನ್ನು ಸೇನಾಪಡೆಯ ಬಗ್ಗೆ ಕೇಳಿದ್ದರೂ, ಬಹುಶಃ ಇದನ್ನು ಕೆ ಪಿ ಎಸ್ ಗಿಲ್ ಅವರ ನಿಷ್ಠುರ ಮಾತುಗಳ ಹಿನ್ನೆಯಲ್ಲಿ ಎಲ್ಲ ಭದ್ರತಾ ಸಿಬ್ಬಂದಿಗಳಿಗೆ ಸಂಬಂಧಪಟ್ಟಂತೆಯೂ ವಿಸ್ತರಿಸಿ ತನ್ನ ಉತ್ತಮ ಆಳ್ವಿಕೆಯ ಕರ್ತವ್ಯವನ್ನು(ಮತ್ತು ಚುನಾವಣಾ ವಚನವನ್ನೂ) ನಿಭಾಯಿಸಲಾರದ ಸರಕಾರ ಭದ್ರತಾ ಸಿಬ್ಬಂದಿಯನ್ನು ವಿಫಲತೆಯ ಟೀಕೆಯಿಂದ ತನ್ನನ್ನು ರಕ್ಷಿಸಿಕೊಳ್ಳಲು 'ಮಾನವ ಗುರಾಣಿ'ಯಾಗಿ ಬಳಸಿಕೊಳ್ಳುತ್ತಿದೆಯೇ ಎಂದು ಕೇಳಬಹುದಾಗಿದೆ.

ದ'ೇಶದ, ಗಡಿಗಳ ರಕ್ಷಣೆಯಲ್ಲಿ, ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯ ರಕ್ಷಣೆಯಲ್ಲಿ ತೊಡಗಿರುವವರ ಬಗ್ಗೆ ಎಷ್ಟು ಗೌರವವಿದೆ?


ಇತ್ತೀಚಿನ ಎರಡು ಉದಾಹರಣೆಗಳನ್ನು ನೋಡಿ.

ಒಂದು, ಬಿಎಸ್‌ಎಫ್ ಸಿಬ್ಬಂದಿಗೆ ಕಳಪೆ ಮಟ್ಟದ ಊಟ ಕೊಡಲಾಗುತ್ತಿದೆ ಎಂದು ಹೇಳಿದ್ದಕ್ಕೆ ಜಮ್ಮು-ಕಾಶ್ಮೀರ ಗಡಿ ನಿಯಂತ್ರಣ ರೇಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬಿಎಸ್‌ಎಫ್‌ನ ತೇಜ್ ಬಹಾದ್ದೂರ್ ಯಾದವ್‌ರನ್ನು ವಜಾ ಮಾಡಿರುವುದು, ತನ್ನ ವಿಚಾರಣೆ ನಿಷ್ಪಕ್ಷಪಾತವಾಗಿ ನಡೆದಿಲ್ಲ ಎಂದು ಆತ ನ್ಯಾಯಾಲಯದ ಮೊರೆ ಹೋಗುವುದಾಗಿ ಹೇಳಿದ್ದಾರಂತೆ.

ಇನ್ನೊಂದು, ಉತ್ತರಪ್ರದೇಶದಲ್ಲಿ ಹೊಸ ಸರಕಾರ ಬಂದ ಮೇಲೆ ಬಿಜೆಪಿ ಎಂಪಿ, ಎಂಎಲ್‌ಎ ಗಳ ನೇತೃತ್ವದಲ್ಲಿ ಕೇಸರಿ ಪಡೆಗಳ ಮಂದಿ ಪೋಲೀಸರ ಮೇಲೆ ನಡೆಸಿರುವ ಹಲ್ಲೆಗಳಲ್ಲಿ ಎಫ್‌ಐಆರ್ ಹಾಕಿದ ಕರ್ತವ್ಯ ನಿಭಾಯಿಸಿದ ಸಹರಾಣ್‌ಪುರ ಮತ್ತು ಆಗ್ರಾದ ಎಸ್‌ಎಸ್‌ಪಿಗಳನ್ನು ಟ್ರಾನ್ಸ್‌ಫರ್ ಮಾಡಿರುವುದು.

ಇದಕ್ಕೆ ಮೊದಲು ಕಾಶ್ಮೀರಿ ಯುವಕನನ್ನು ಮಾನವ ಗುರಾಣಿಯಾಗಿ ಮಾಡಿದ್ದು ಭಾರತೀಯ ಸೇನೆ ಹಿಂದೆಂದೂ ಎಸಗದಿದ್ದ ಕೃತ್ಯ, ಇದು ಇನ್ನು ಮುಂದೆ ಭಾರತೀಯ ಸೇನೆಯ ಸ್ವರೂಪವನ್ನು ನಿರೂಪಿಸುವ ಚಿತ್ರವಾಗಿ ಬಿಡಬಹುದೇನೋ ಎಂದು ಖೇದ ವ್ಯಕ್ತಪಡಿಸಿದ್ದ ನಿವೃತ್ತ ಲೆಫ್ಟಿನೆಂಟ್ ಜನರಲ್ ಹೆಚ್ ಎಸ್ ಪನಾಗ್‌ರವರ ಮೇಲೆ 2000 'ಭಕ್ತ'ರುಗಳ ಡಿಜಿಟಲ್ ದಾಳಿ. ಇದಕ್ಕೆ ನೇತೃತ್ವ ನೀಡಿದವರು ಇತ್ತೀಚೆಗೆ ಚಲನಚಿತ್ರ ಪ್ರಮಾಣಪತ್ರ ಮಂಡಳಿಗೆ ಸದಸ್ಯರಾಗಿ ನೇಮಕರಾಗಿರುವವರು. ಈ ನಿವೃತ್ತ ಸೇನಾಧಿಕಾರಿ ಭಾರತೀಯ ಸೇನೆಯ ಉತ್ತರ ಮತ್ತು ಕೇಂದ್ರೀಯ ಕಮಾಂಡ್‌ಗಳ ಸೇನಾಪತಿಗಳಾಗಿದ್ದವರು, ದೇಶರಕ್ಷಣೆಯಲ್ಲಿ ತೋರಿಸಿರುವ ಶೌರ್ಯಕ್ಕಾಗಿ ಹಲವು ಪ್ರಶಸ್ತಿಗಳನ್ನು ಪಡೆದವರು ಎಂಬ ಪರಿವೆಯೇ ಇಲ್ಲದೆ, ಬಹುಶಃ ಅಂತಹ ಅರಿವೂ ಇಲ್ಲದೆ ತಮ್ಮ ಲಾಂಛನವಾಗಿರುವ ಹೊಲಸು ಮಾತುಗಳ ದಾಳಿ ನಡೆಸಿದ್ದಾರೆ. "ಸಣ್ಣ ಬೂದು ಶರ್ಟಿನವನೇ, ಈ ವಯಸ್ಸಿನಲ್ಲೂ ನಾನು ಭಯೋತ್ಪಾದಕರಿಗೆ ಒಂದು ಪಾಠ ಕಲಿಸಬಲ್ಲೆ, ಮತ್ತು ನಿನ್ನಂತಹ ಭಂಡನಿಗೆ ಕೂಡ"" ಎಂದು ಅವರಲ್ಲಿ ಒಬ್ಬ, ಖ್ಯಾತ ಹಾಡುಗಾರ 'ಭಕ್ತ' ಈ ನಿವೃತ್ತ ಸೇನಾಪತಿಯಿಂದ ಮೈಮುಟ್ಟಿ ನೋಡಿಕೊಳ್ಳುವಂತಹ ತಿರುಗೇಟನ್ನೂ ಪಡೆದಿದ್ದಾನೆ ಎಂಬುದು ಬೇರೆ ಮಾತು.

ಸರ್ಜಿಕಲ್ ಸ್ಟ್ರೈಕ್ ನಂತರ ಭದ್ರತಾ ವ್ಯವಸ್ಥೆ



ವ್ಯಂಗ್ಯಚಿತ್ರ : ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಲೋಕಪಾಲ ಕಾಯ್ದೆ ಪ್ರಕ್ರಿಯೆಗೆ ತಡೆ ಅಸಮರ್ಥನೀಯ-ಸುಪ್ರಿಂ ಕೋರ್ಟ್

ಭ್ರಷ್ಟಾಚಾರ ನಿಗ್ರಹದ ಬಗ್ಗೆ ನಮ್ಮ ಪ್ರಧಾನಿಗಳು ಬಹಳಷ್ಟು ಹೇಳಿಕೊಳ್ಳುತ್ತಿದ್ದರೂ ಅವರ ಸರಕಾರ ಭ್ರಷ್ಟಾಚಾರ ನಿಗ್ರಹಕ್ಕೆಂದೇ 2013ರಲ್ಲಿ ಸಂಸತ್ತು ಅಂಗೀಕರಿಸಿ 2014ರಲ್ಲಿ ಜಾರಿಯಾಗಿದ್ದ ಲೋಕಪಾಲ ಕಾಯ್ದೆಯ ಅಡಿಯಲ್ಲಿ ಯಾವುದೇ ಪ್ರಕ್ರಿಯೆ ನಡೆಯದಂತೆ ತಡೆ ಹಿಡಿದಿದೆ, ಮುಖ್ಯ ಲೋಕಪಾಲರು ಮತ್ತು ಇತರ ಸದಸ್ಯರ ನೇಮಕಗಳನ್ನು ಇನ್ನೂ ಮಾಡಿಲ್ಲ ಎಂಬುದು ಗಮನಾರ್ಹ. ಇದಕ್ಕೆ ಕೊಡಲಾಗುತ್ತಿರುವ ಸಬೂಬು- ಲೋಕಸಭೆಯಲ್ಲಿ ಪ್ರತಿಪಕ್ಷದ ಮುಖಂಡರು ಯಾರಾಗಬಹುದು ಎಂಬ ಬಗ್ಗೆ ಮತ್ತು ಇತರ ಅಂಶಗಳ ಬಗ್ಗೆ ಲೋಕಪಾಲ ಕಾಯ್ದೆಗೆ ತಿದ್ದುಪಡಿ ಸಂಸತ್ತಿನಲ್ಲಿ ಇನ್ನು ಚರ್ಚೆಯಲ್ಲಿದೆ ಎಂದು.

ಆದರೆ ಇದು ಸಮರ್ಥನೀಯವಲ್ಲ, ಈ ಕಾಯ್ದೆ ಖಂಡಿತ ಜಾರಿ ಯೋಗ್ಯವಾಗಿದೆ, ಅದಕ್ಕೆ ಸೂಚಿಸಿರುವ ತಿದ್ದುಪಡಿಗಳು ಮತ್ತು ಸಂಸದೀಯ ಸಮಿತಿಯ ಅಭಿಪ್ರಾಯಗಳು ಅದರ ಕಾರ್ಯನಿರ್ವಹಣೆಯನ್ನು ಇನ್ನಷ್ಟು ಸುಗಮಗೊಳಿಸುವಂತಹುದೇ ವಿನಃ ಅಡ್ಡಿಯಾಗುವಂತದ್ದು ಅಲ್ಲ ಎಂದು ಸುಪ್ರಿಂ ಕೋರ್ಟ್ ಹೇಳಿದೆ.

ಸುಪ್ರಿಂ ಕೋರ್ಟ್‌ನ ಈ ಸ್ಪಷ್ಟ ಅಭಿಪ್ರಾಯದ ನಂತರ ಈ ಸರಕಾರಕ್ಕೆ ಲೋಕಪಾಲರ ನೇಮಕ ಮಾಡದಿರುವುದಕ್ಕೆ ಯಾವುದೇ ನೆವಗಳು ಉಳಿದಿಲ್ಲ, ಈಗದು ಹೊಸ 'ಅಡ್ಡಿ'ಯನ್ನು ಸೃಷ್ಟಿಸಲಿದೆಯೇ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕೇಳಿದ್ದಾರೆ.

ಸಿವಿಸಿ ಪಟ್ಟಿ ಮಾಡಿರುವ 50 ಭ್ರಷ್ಟಾಚಾರದ ಕೇಸುಗಳಲ್ಲಿ ಕ್ರಮ ಕೈಗೊಂಡಿಲ್ಲ

ಇದು ಭ್ರಷ್ಟಾಚಾರ ನಿಗ್ರಹದ ಬಗ್ಗೆ ಈ ಸರಕಾರದ ಬದ್ಧತೆಯನ್ನು ಪ್ರಶ್ನಾರ್ಹಗೊಳಿಸಿರುವ ಮತ್ತೊಂದು ಉದಾಹರಣೆ.

ಕೇಂದ್ರೀಯ ಜಾಗೃತಾ ಆಯೋಗ(ಸಿವಿಸಿ) ತನ್ನ 2016ರ ವರದಿಯಲ್ಲಿ 50ಕ್ಕೂ ಹೆಚ್ಚು ಭ್ರಷ್ಟಾಚಾರ, ಸ್ವಜನಪಕ್ಷಪಾತ, ಭಂಡತನದ ಕೇಸುಗಳ ಪಟ್ಟಿ ಮಾಡಿದೆ ಹಾಗೂ ಕೇಂದ್ರ ಸರಕಾರದ ಸಂಬಂಧಪಟ್ಟ ಇಲಾಖೆಗಳು ಈಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳಿತ್ತು. ಇವುಗಳಲ್ಲಿ ಹಲವು ಕೇಸುಗಳಲ್ಲಿ ಸಿಬಿಐ ಎಫ್‌ಐಆರ್ ಹಾಕಿದೆ, ಅಮಾನತು ಮಾಡಬೇಕೆಂದು ಶಿಫಾರಸು ಮಾಡಿದ್ದೂ ಇದೆ, ಆದರೆ ಸಿವಿಸಿಯ ಸಲಹೆಯನ್ನು ಉಪೇಕ್ಷಿಸಲಾಗಿದೆ ಎಂದು ಅದರ ವರದಿಯಲ್ಲಿ ಹೇಳಲಾಗಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್(ಎಪ್ರಿಲ್24) ವರದಿ ಮಾಡಿದೆ. ಇವುಗಳಲ್ಲಿ 12 ರೈಲ್ವೆ ಇಲಾಖೆಗೆ ಸಂಬಂಧಪಟ್ಟವುಗಳು, 7 ಸಾರ್ವಜನಿಕ ವಲಯದ ಬ್ಯಾಂಕುಗಳು, 5 ನಾಗರಿಕ ವಿಮಾನಯಾನ ಇಲಾಖೆಗೆ ಸಂಬಂಧಪಟ್ಟವುಗಳು ಮತ್ತು 4 ಕೇಂದ್ರೀಯ ಅಬಕಾರಿ ಹಾಗೂ ಕಸ್ಟಮ್ಸ್ ಸುಂಕಗಳ ಇಲಾಖೆಗೆ ಸಂಬಂಧಪಟ್ಟವುಗಳು.

ಇನ್ನು ಮುಂದೆ ವಾಹನಗಳಲ್ಲಿ ಕೆಂಪು ಬತ್ತಿ ಮುಂತಾದ ವಿಐಪಿ ಪ್ರದರ್ಶನಗಳು ಇರುವುದಿಲ್ಲ ಎಂದು ಪ್ರಧಾನ ಮಂತ್ರಿಗಳು ತಮ್ಮ ಈ ತಿಂಗಳ 'ಮನ್ ಕೀಬಾತ್'ನಲ್ಲಿ ಹೇಳಿದ್ದಾರೆ. ಇಲ್ಲಿ ವಿಐಪಿ ಅಂದರೆ ವೆರಿ ಇಂಪಾರ್ಟೆಂಟ್ ಪರ್ಸನ್ ಎಂಬುದಿರುವುದಿಲ್ಲ. ಎಲ್ಲರೂ ಇಐಪಿ ಗಳು ಅಂದರೆ ಎವೆರಿಬಡಿ ಇಂಪಾರ್ಟೆಂಟ್ ಪರ್ಸನ್(ಪ್ರತಿಯೊಬ್ಬರೂ ಮಹತ್ವದ ವ್ಯಕ್ತಿಗಳು)ಎಂದು ಅವರು ಹೇಳಿದ್ದಾರೆ. - ಸುದ್ದಿ



ನೀವೆಲ್ಲ ಇನ್ನು ಬೆಲೆಯೇರಿಕೆ, ತೆ-ರಿಗೆ, ಬರ ಎಂದೆಲ್ಲ ದೂರುವಂತಿಲ್ಲ.... .ನೆನಪಿರಲಿ, ನೀವೆಲ್ಲರೂ ಈಗ ವಿಐಪಿಗಳು!

ವ್ಯಂಗ್ಯಚಿತ್ರ: ಶುಭನೀಲ್,
ಡೆಕ್ಕನ್ ಕ್ರಾನಿಕಲ್

ಕೈಗಾರಿಕಾ ಬೆಳವಣಿಗೆಯ ಮೇಲೆ ನೋಟುರದ್ಧತಿಯ ದುಷ್ಪರಿಣಾಮ



ಕೆ.ಎಂ.ನಾಗರಾಜ್

ಇತ್ತೀಚೆಗೆ ಲಭ್ಯವಾಗಿರುವ ಕೇವಲ ಒಂದು ವಲಯದ ಮಾಹಿತಿಗಳಲ್ಲಿ ನೋಟುರದ್ಧತಿಯ ಪ್ರತಿಕೂಲ ಪ್ರಭಾವದ ಸಾಕ್ಷ್ಯವನ್ನೇನಾದರೂ ಕಾಣಬಹುದೇ ಎಂಬ ಪ್ರಶ್ನೆಗೆ ಉತ್ತರ ಬಹುಮಟ್ಟಿಗೆ ಹೌದು ಎಂಬುದೇ ಆಗಿದೆ. ಈಗ ಲಭ್ಯವಾಗಿರುವ ಫೆಬ್ರವರಿ 2017 ರ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕದ ವಿಶ್ಲೇಷಣೆ ನೋಟುರದ್ಧತಿಯಿಂದ ಆರ್ಥಿಕ ಹಿಂಜರಿತದ ದುಷ್ಪರಿಣಾಮವೇನೂ ಇಲ್ಲ ಎಂದು ಸರ್ಕಾರ ಹಂಚುತ್ತಿರುವ ಎಲ್ಲ ಸುಳ್ಳುಗಳನ್ನು ಬಯಲು ಮಾಡುತ್ತದೆ.

–ಪ್ರೊ.ಪ್ರಬಾತ್ ಪಟ್ನಾಯಕ್

ಕೆಲವು ವಾರಗಳ ಹಿಂದೆ ಪ್ರಸಕ್ತ ಹಣಕಾಸು ಸಾಲಿನ ಮೂರನೆ ತ್ರೈಮಾಸಿಕದ ಜಿಡಿಪಿಗೆ ಸಂಬಂಧಿಸಿದಂತೆ ತ್ವರಿತ ಅಂದಾಜಿನಲ್ಲಿ ಈ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ಶೇ.7ರಷ್ಟು ಇರಲಿದೆ ಎಂದು ಹೇಳಲಾಯಿತು. ಇದು ನೋಟುರದ್ಧತಿಯ ಮೊದಲು ಸಿಎಸ್‌ಓ (ಕೇಂದ್ರ ಅಂಕಿಅಂಶ ಸಂಸ್ಥೆ) ಮಾಡಿದ್ದ ಅಂದಾಜಿನಷ್ಟೇ ಇತ್ತು. ಆಗ, ನೋಟು ರದ್ಧತಿಯನ್ನು ಟೀಕೆ ಮಾಡಿದವರೆಲ್ಲ ಹೇಳಿದ್ದು ತಪ್ಪೆಂದು ಸಾಬೀತಾಗಿದೆ, ಅವರು ಹೇಳಿದಂತೆ ಈ ಕ್ರಮ ಆರ್ಥಿಕ ಹಿಂಜರಿತಕ್ಕೆ ಕಾರಣವಾಗಿಲ್ಲ ಎಂಬ ಸಮೂಹಗಾನವೇ ಎದ್ದು ಬಂತು.

ವಾಸ್ತವ ಏನೆಂದರೆ ಇದು ಹುಸಿ ಅಂದಾಜು, ಸುಳ್ಳುಗಳನ್ನು ಸತ್ಯವೆನಿಸುವಂತೆ ಮಾಡುವುದರಲ್ಲಿ ಪ್ರವೀಣವಾದ ಬಿಜೆಪಿ ಸರ್ಕಾರದ ಆದೇಶದಂತೆ ತಯಾರಿಸಿದ್ದು ಎಂದು ಹಲವರು ಆಗಲೇ ಬೊಟ್ಟು ಮಾಡಿ ಹೇಳಿದ್ದರು. ನಿರ್ದಿಷ್ಟವಾಗಿ ಅದರಲ್ಲಿನ ಒಂದು ವಿಲಕ್ಷಣ ಸಂಗತಿಯೆಂದರೆ ತಯಾರಿಕಾ ವಲಯದ ಬೆಳವಣಿಗೆ ಈ ಅವಧಿಯಲ್ಲಿ ಶೇ.7.7ರಷ್ಟು ಎಂದದ್ದು. ವಿಲಕ್ಷಣ ಏಕೆಂದರೆ ಈ ಅವಧಿಯಲ್ಲಿ ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ)ದಲ್ಲಿ ತಯಾರಿಕಾ ವಲಯದ ಪ್ರಗತಿ ಶೇ.0.2ರಷ್ಟು ಮಾತ್ರ ಇತ್ತು. ಈಗ ಫೆಬ್ರವರಿ 2017 ರ ಸೂಚ್ಯಂಕವೂ ಸಿಕ್ಕಿದೆ. ಅದು ಕೂಡ ನೋಟು ರದ್ಧತಿ ತಪ್ಪು ಎಂದವರ ವಾದ ಸರಿಯಾಗಿದೆ ಎಂಬುದನ್ನು ಸಾಬೀತುಪಡಿಸಿದೆ. ಅಂದರೆ ಈ ನೋಟು ರದ್ಧತಿ ದೇಶದ ಆರ್ಥಿಕತೆಯ ಮೇಲೆ ಗಂಭೀರ ಹಿಂಜರಿತದ ದುಷ್ಪರಿಣಾಮ ಬೀರಿದೆ ಎಂಬುದನ್ನು ದೃಢಪಡಿಸಿದೆ.

ನಿಜ, ಆಂತರಿಕ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿತ ಮತ್ತು ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನಿಂದ ರಫ್ತು ಕುಸಿದಿರುವುದರಿಂದ ಕಳೆದ ಹಲವು ವರ್ಷಗಳಿಂದ ದೇಶದ ಕೈಗಾರಿಕಾ ಕ್ಷೇತ್ರದ ಪ್ರಗತಿ ಸ್ಥಗಿತಗೊಂಡಿದೆ. ಇದು ಸಾಲದೆಂಬಂತೆ ಮೋದಿ ಸರ್ಕಾರ ಯಾವುದೇ ಸಕಾರಣವಿಲ್ಲದೆ ಬೃಹತ್ ಪ್ರಮಾಣದ ನೋಟು ರದ್ಧತಿಯನ್ನು ದೇಶದ ಆರ್ಥಿಕತೆ ಮೇಲೆ ಹೇರಿತು. ಇದು ಕೈಗಾರಿಕಾ ಉತ್ಪಾದನೆಯನ್ನು ಮತ್ತಷ್ಟು ಹಿಂಜ–ರಿತಕ್ಕೆ ನೂಕಿತು. ಫೆಬ್ರವರಿಯಲ್ಲಿ ಕೈಗಾರಿಕಾ ಉತ್ಪಾದನೆ ಸೂಚ್ಯಂಕ 2016ರ ಫೆಬ್ರವರಿಗೆ ಹೋಲಿಸಿದರೆ 1.2ಶೇ.ದಷ್ಟು ಕೆಳಗೆ. ಅದರಲ್ಲೂ ನಿರ್ದಿಷ್ಟವಾಗಿ ತಯಾರಿಕಾ ಕ್ಷೇತ್ರಕ್ಕೆ ಹೋಲಿಸಿದರೆ ಕಳೆದ ವರ್ಷಕ್ಕಿಂತ ಶೇ.2ರಷ್ಟು ಕಡಿಮೆ. ವಾಸ್ತವವಾಗಿ 2016ರ ಫೆಬ್ರವರಿಯಲ್ಲೇ ಶೇ.0.6ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿದ್ದು, ಇದರ ಹಿಂದಿನ ವರ್ಷ ಇದೇ ತಿಂಗಳಿಗೆ ಹೋಲಿಸಿದರೆ ಶೇಕಡ 2.6ರಷ್ಟು ಕುಸಿತ ವಾಗಿತ್ತು.

ಇದರೊಳಗೂ, ಗ್ರಾಹಕ ಸರಕುಗಳ ವಿಭಾಗ ಮುಖ್ಯವಾಗಿ ಜನ ಸಾಮಾನ್ಯರ ಖರೀದಿ ಶಕ್ತಿ ಕುಮದಿದರೆ ಅತಿ ಹೆಚ್ಚಾಗಿ ತಟ್ಟುವಂತದ್ದು. ನೋಟು ರದ್ಧತಿಯಿಂದ ಅದು ಭಾರಿ ಹೊಡೆತಕ್ಕೆ ಸಿಲುಕಿದೆ. ಈ ಅವಧಿಯಲ್ಲಿ ಅದು ದಾಖಲಿಸಿದ್ದು –5.6%, ಅಂದರೆ ಏರಿಕೆಯ ಬದಲು ಇಳಿಕೆ. 2016ರ ಇದೇ ತಿಂಗಳಲ್ಲಿ ಈ ಪ್ರಗತಿ ಶೇ.0.6ರಷ್ಟಿತ್ತು. ಈ ವಿಭಾಗ ಒಟ್ಟಾರೆ ಎಪ್ರಿಲ್–ಫೆಬ್ರವರಿ ಅವಧಿಯಲ್ಲಿ ಶೇ.0.1ರಷ್ಟು ಮಾತ್ರ ಪ್ರಗತಿ ದಾಖಲಿಸಿದೆ. (2015–16ರ ಇದೇ ಅವಧಿಯಲ್ಲಿ ಈ ಪ್ರಗತಿ ಶೇ.3.2ರಷ್ಟಿತ್ತು). 2016–17ರ ಏಪ್ರಿಲ್–ಫೆಬ್ರವರಿ ಅವಧಿಯಲ್ಲಿ ಒಟ್ಟಾರೆ ತಯಾರಿಕಾ ವಲಯ ಶೇ.–0.3ರಷ್ಟು ದಾಖಲಿಸಿದೆ. (2015–16ನೇ ಸಾಲಿನ ಇದೇ ಅವಧಿಯಲ್ಲಿ ಈ ಪ್ರಗತಿ ಶೇ.2.3ರಷ್ಟು ಕಂಡಿತ್ತು).

ಇದನ್ನೆಲ್ಲ ನೋಡಿ ಬೆಚ್ಚಿ ಬಿದ್ದಿರುವ ವಿವಿಧ 'ಚಿಂತಕರ ತೊಟ್ಟಿ'ಗಳ ಬೂರ್ಷ್ವಾ 'ಪರಿಣಿತರು' ಇವು ನೋಟುರದ್ಧತಿಯ ಬೆಂಬಿಡದ ಪರಿಣಾಮಗಳು ಎಂದು ಹೇಳಲು ಆರಂಭಿಸಿದ್ದಾರೆ.

ಬಹುಶಃ ತಯಾರಿಕಾ ವಲಯದಲ್ಲಿನ ಅಥವ ಗ್ರಾಹಕ ಸರಕುಗಳಲ್ಲಿನ ಹಿಂದಿನ ವರ್ಷಕ್ಕೆ ಹೋಲಿಸಿದ ಈ ಕುಸಿತದಿಂದಲೇ ನೋಟು ರದ್ಧತಿ ಆರ್ಥಿಕ ಹಿಂಜ–ರಿತದ ಪರಿಣಾಮ ಬೀರಿದೆ ಎಂದು ಹೇಗೆ ಹೇಳಲು ಸಾಧ್ಯ ಎಂಬ ವಾದ ಹೂಡಬಹುದೇನೋ. ಇನ್ನೂ ಸೂಕ್ಷ್ಮವಾದ, ನೋಟುರದ್ಧತಿ ನಡೆದ ನವಂಬರ್ 2016 ರ ಮೊದಲಿನ ಪ್ರವೃತ್ತಿಯನ್ನು ನವಂಬರ್ 2016ರ ನಂತರದ ಪ್ರವೃತ್ತಿಯೊಂದಿಗೆ ಹೋಲಿಸುವ ವಿಶ್ಲೇಷಣೆ ಬೇಕು,. ಇದರಲ್ಲಿ ನವಂಬರ್ 2016 ರ ಸುತ್ತ ಏನಾದರೂ ತೀವ್ರ ವ್ಯತ್ಯಾಸ ಕಂಡರೆ ಆಗ ನೋಟುರದ್ಧತಿ ಆರ್ಥಿಕ ಹಿಂಜರಿತ ಉಂಟು ಮಾಡಿದೆ ಎಂದು ಸಾಕಷ್ಟು ವಿಶ್ವಾಸಪೂರ್ವಕವಾಗಿ ಹೇಳಬಹುದು.

ನಾವು ಈಗಾಗಲೇ ಹೇಳಿದಂತೆ ನೋಟುರದ್ಧತಿಯ ಪ್ರಭಾವ ಗ್ರಾಹಕ ಸರಕುಗಳ ಉತ್ಪಾದನೆಯಲ್ಲೇ ಅತ್ಯಂತ ಬಲವಾಗಿ ಕಾಣಬರುತ್ತದೆ ಎಂಬುದು ಸ್ವಯಂವೇದ್ಯ. ಇತರೆ ವಲಯಗಳಾದ ಮೂಲ ಕೈಗಾರಿಕೆಗಳು, ಬಂಡವಾಳ ಸರಕು ಕೈಗಾರಿಕೆಗಳು ಮತ್ತು ಮಧ್ಯಂತರ ಸರಕು ಕೈಗಾರಿಕೆಗಳು ಮುಂತಾದವುಗಳಲ್ಲಿ ಖರೀದಿದಾರರು ಸಾಮಾನ್ಯವಾಗಿ ಕುಟುಂಬಗಳವರಲ್ಲ, ಸಣ್ಣಪುಟ್ಟ ಉತ್ಪಾದಕರೂ ಅಲ್ಲ. ಅವರೆಲ್ಲ ಬಹುಪಾಲು ಕಾರ್ಪೊರೇಟ್‌ಗಳು ಇತ್ಯಾದಿ. ಆ ಖರೀದಿದಾರರಿಗೆ ನಗದಿನ ಕೊರತೆ ದೊಡ್ಡ ಅಡ್ಡಿಯೇನೂ ಅಲ್ಲ. ಆದರೆ ನಗದು ಕೊರತೆಯಿಂದಾಗಿ ಜನರ ಖರೀದಿ ಶಕ್ತಿ ಕುಂಠಿತಗೊಂಡಿದ್ದರಿಂದ ಗ್ರಾಹಕರ ಸರಕುಗಳಿಗೆ ಬೇಡಿಕೆ ಕುಸಿದು ಉತ್ಪಾದನೆಯ ಸರಕುಗಳಿಗೂ ಬೇಡಿಕೆ ಕಡಿಮೆಯಾಗಬಹುದು. ಆದರೆ ಇದು ತಕ್ಷಣ ಕಂಡು ಬರುವಂತದ್ದಲ್ಲ. ಕೆಲವು ಸಮಯದ ನಂತರವಷ್ಟೆ ತಿಳಿಯುವಂತದ್ದು. ನೋಟುರದ್ಧತಿಯ ತಕ್ಷಣದ ಪ್ರಭಾವ ಕಾಣುವುದು ಗ್ರಾಹಕ ಸರಕುಗಳಲ್ಲೇ, ಇವುಗಳ ಖರೀದಿಯಲ್ಲಿ ನಗದು ಪ್ರಧಾನ ಪಾತ್ರ ವಹಿಸುತ್ತದೆ.

ಇನ್ನೂ ಮುಂದೆ ಹೋಗಿ ಹೇಳುವುದಾದರೆ, ಗ್ರಾಹಕರ ದಿನನಿತ್ಯದ ಅಗತ್ಯ ಸರಕುಗಳಿಗೆ ಹೋಲಿಸಿದರೆ ಬಹುಬಾಳಿಕೆಯ ಗ್ರಾಹಕ ಸರಕುಗಳ ಮೇಲೆ ಈ ನೋಟು ರದ್ಧತಿಯ ಪರಿಣಾಮ ಕಡಿಮೆ ಎನ್ನಬಹುದು. ಏಕೆಂದರೆ ಈ ವಸ್ತುಗಳ ಖರೀದಿಗೆ ಭಾರೀ ಹಣ ಬೇಕಾಗುವುದರಿಂದ ಆನ್‌ಲೈನ್ ಮೂಲಕ ಇಲ್ಲವೇ ಕಾರ್ಡ್‌ಗಳನ್ನು ಸ್ವೈಪ್ ಮಾಡಿ ಖರೀದಿಸಬಹುದು. ಹೀಗಾಗಿ ಈ ವಲಯದ ಮೇಲೆ ನೇರ ಪರಿಣಾಮ ಬೀರಿದ್ದು ಕಡಿಮೆ ಎಂತಲೇ ಹೇಳಬಹುದು. ಎರಡನೆಯದಾಗಿ, ಇಲ್ಲಿನ ಪರೋಕ್ಷ ಪರಿಣಾಮ ಹೇಗೆಂದರೆ ನಗದು ಕೊರತೆ ಜನರ ಆದಾಯಗಳನ್ನು ನೇರವಾಗಿಯೇ ತಟ್ಟಿದ್ದರಿಂದಲೂ ಇಂತಹ ಖರೀದಿಗಳು ಸಾಧ್ಯವಾಗದೆ ಹೋಗುತ್ತವೆ. ಆದರೆ ಈ ಪರಿಣಾಮ ಕಣಲು ಸ್ವಲ್ಪ ಸಮಯ ಬೇಕಾಗುತ್ತದೆ. ಈ ಎರಡೂ ಕಾರಣಗಳಿಂದಾಗಿ ನೋಟುರದ್ಧತಿಯ ಅಲ್ಪಾವಧಿ ಪರಿಣಾಮವನ್ನು ಗೊತ್ತುಮಾಡಲು ಪರಿಶೀಲಿಸಿಬೇಕಾದ ವಲಯವೆಂದರೆ ದಿನನಿತ್ಯದ ಗ್ರಾಹಕ ಉತ್ಪನ್ನಗಳ ವಲಯವೇ.

ಈ ಪ್ರಕಾರವಾಗಿ, ಈ ವಲಯದ ಉತ್ಪನ್ನಗಳ ಬೆಳವಣಿಗೆ ಪ್ರಮಾಣವನ್ನು ಕೈಗಾರಿಕಾ ಉತ್ಪಾದನೆಯ ಸೂಚ್ಯಂಕಗಳಿಂದ ಲೆಕ್ಕ ಹಾಕಿದ್ದೇನೆ. ಎರಡು ಉಪ ಅವಧಿಗಳ ಅಂದರೆ ಎಪ್ರಿಲ್–ಅಕ್ಟೋಬರ್ 2016 ಮತ್ತು ನವಂಬರ್–ಫೆಬ್ರುವರಿ 2016–17 ರ ಅಂಕಿ–ಅಂಶಗಳನ್ನು ಹಿಂದಿನ ವರ್ಷದಲ್ಲಿ ಅವೇ ತಿಂಗಳುಗಳ ಅಂಕಿ–ಅಂಶಗಳೊಂದಿಗೆ ಹೋಲಿಸಿ ಲೆಕ್ಕಾಚಾರ ಮಾಡಿದಾಗ ಕಂಡು ಬರುವ ಸಂಗತಿಯೆಂದರೆ ಈ ಎರಡೂ ಅವಧಿಗಳಲ್ಲಿ ನೇರವಾದ ಕುಸಿತ ಉಂಟಾಗಿದೆ. ಆದರೆ ಮೊದಲ ಏಳು ತಿಂಗಳ ಉಪ–ಅವಧಿಯ ಕುಸಿತ ಕಶೇ.2.47ರಷ್ಟು ಇದ್ದರೆ, ನೋಟುರದ್ಧತಿಯ ನಂತರದ 4 ತಿಂಗಳ ಅವಧಿಯಲ್ಲಿ ಈ ಕುಸಿತ 3.62ಶೇ.ಕ್ಕೆ ಹೆಚ್ಚಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಇಲ್ಲಿ ಗ್ರಾಹಕ ಸರಕುಗಳಿಗೆ ಬೇಡಿಕೆ ಕುಸಿದಿದೆ ಎಂದರೆ ಸಂಬಂಧಪಟ್ಟ ವಲಯಗಳ ಉತ್ಪಾದನೆಯೂ ತಕ್ಷಣ ಕಡಿತಗೊಂಡಿತು ಎಂದೇನಲ್ಲ. ಯಾವಾಗ ಬೇಡಿಕೆ ಕುಸಿಯುತ್ತದೋ ಆಗ ಮಾರಾಟಗಾರರ ದಾಸ್ತಾನು ಪ್ರಮಾಣ ಹೆಚ್ಚುತ್ತದೆ, ಆಗ ಅವರು ಉತ್ಪಾದಕರಿಗೆ ನೀಡುವ ಆರ್ಡರ್‌ಗಳನ್ನು ಕಡಿತ ಮಾಡುತ್ತಾರೆ, ಇದಕ್ಕೆ ಅನುಗುಣವಾಗಿ ಉತ್ಪಾದಕರು ತಮ್ಮ ತಯಾರಿಕೆಯನ್ನು ಕಡಿತಗೊಳಿಸುತ್ತವೆ. ಹೀಗಾಗಿ ಬೇಡಿಕೆ ಕುಸಿತ ಮತ್ತು ಉತ್ಪನ್ನಗಳಲ್ಲಿ ಇಳಿಕೆಯ ನಡುವೆ ಅಗತ್ಯವಾಗಿ ಒಂದು ಕಾಲದ ಅಂತರ ಇರುತ್ತದೆ.

ಇದನ್ನು ಗಮನದಲ್ಲಿಟ್ಟುಕೊಂಡು, ನೋಟುರದ್ಧತಿ ಮಾಡಿದ ನವೆಂಬರ್ ಬಿಟ್ಟು ಡಿಸೆಂಬರ್ 2016 ಮತ್ತು ಫೆಬ್ರವರಿ2017ರ ಅವಧಿಯಲ್ಲಿ ದಿನನಿತ್ಯದ ಗ್ರಾಹಕ ಸರಕುಗಳ ಉತ್ಪಾದನಾ ಸೂಚ್ಯಂಕಗಳ ಲೆಕ್ಕಾಚಾರ ಮಾಡಿದಾಗ ಅದರಲ್ಲಿ ಶೇ.–5.3 ರಷ್ಟು ಕುಸಿತ ಕಾಣುತ್ತದೆ. 2016–17ನೇ ಸಾಲಿನ ಏಪ್ರಿಲ್–ನವೆಂಬರ್‌ನಲ್ಲಿ ಅದು ಶೇ.–1.85 ಇತ್ತು. ಅಂದರೆ ನೋಟುರದ್ಧತಿಯ ನಂತರದ ಮೂರು ತಿಂಗಳ ಅವಧಿಯಲ್ಲಿ ನಿರ್ಣಾಯಕ ವ್ಯತ್ಯಾಸ ಕಾಣುತ್ತದೆ. ಅಂದರೆ ಇಡೀ ವರ್ಷದಲ್ಲಿ ಇದ್ದ ಕುಸಿತದ ಪ್ರವೃತ್ತಿ ಇದ್ದರೂ, ನೋಟು ರದ್ಧತಿಯ ನಂತರದ ಡಿಸೆಂಬರ್–ಫೆಬ್ರುವರಿಯ ಮೂರು ತಿಂಗಳಲ್ಲಿ ಅದು ಇನ್ನಷ್ಟು ನಕಾರಾತ್ಮಕವಾಗಿದೆ. ಇದರ ಅರ್ಥ ಅದಾಗಲೆ ಕುಸಿತದ ಹಾದಿಯಲ್ಲಿದ್ದ ವಲಯದ ಮೇಲೆ ನೋಟುರದ್ಧತಿಯ ಕ್ರಮ ಮತ್ತಷ್ಟು ಹೊಡೆತ ನೀಡಿತು.

ಇಲ್ಲಿ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ಸಣ್ಣ ಪ್ರಮಾಣದ ಕೈಗಾರಿಕೆಗಳ ಮೇಲೆ ನೋಟುರದ್ಧತಿಯ ಪರಿಣಾಮವನ್ನು ಅಇತ ಹೆಚ್ಚು. ಆದರೆ ಇದನ್ನು ನಿಖರವಾಗಿ ಲೆಕ್ಕ ಹಾಕಲು ಐಐಪಿ ಅಂಕಿಅಂಶಗಳಿಂದ ಸಾಧ್ಯವಾಗದು. ಏಕೆ–ಂದರೆ ಐಐಪಿ ಅಂಕಿಅಂಶಗಳನ್ನು ಸರ್ಕಾರದ ಹದಿನೈದು ಇಲಾಖೆಗಳು ನೀಡುವ ಮಾಹಿತಿಯಿಂದ ರೂಪಿಸಲಾಗುತ್ತದೆ. ಇದರಲ್ಲಿ ಯಾವುದೂ ಸಹ ಸಣ್ಣ ಪ್ರಮಾಣದ ಕೈಗಾರಿಕಾ ಕ್ಷೇತ್ರದಲ್ಲಿನ ಬೆಳವಣಿಗೆಗಳ ಮಾಹಿತಿಯನ್ನು ನೀಡುವುದಿಲ್ಲ.

ಹಾಗಿದ್ದರೂ ಉತ್ಪಾದನೆಯ ಪ್ರಮಾಣವನ್ನು ಲೆಕ್ಕ ಹಾಕಲು ಜಿಡಿಪಿ ಅಂಕಿಅಂಶಗಳಿಗೆ ಹೋಲಿಸಿದರೆ ಐಐಪಿ ಅಂಕಿಅಂಶಗಳನ್ನು ಅವಲಂಬಿಸುವುದೇ ಹೆಚ್ಚು ಉತ್ತಮ. ಏಕೆಂದರೆ ಜಿಡಿಪಿ ಅಂಕಿ–ಅಂಶಗಳು ಇತ್ತೀಚೆಗೆ ಕಂಪನಿ ವಲಯದ ಅಂಕಿ–ಅಂಶಗಳನ್ನಷ್ಟೇ ಒಳಗೊಂಡಿರುತ್ತದೆ. ಆದರೆ ಅದರಾಚೆಗೆ ಇರುವ ವಿಸ್ತಾರವಾದ ಕಂಪನಿಯೇತರ ವಲಯಗಳ ಅಂಕಿ–ಅಂಶಗಳನ್ನು ಅದರಲ್ಲಿ ಗಮನಿಸಲಾಗುವುದಿಲ್ಲ. ಇತ್ತೀಚೆಗೆ ಸರಕಾರ ನೋಟುರದ್ಧತಿಯ ಟೀಕಾಕಾರರದ್ದು ತಪ್ಪು ಅಂದಾಜು ಎಂದು ತೋರಿಸಲಿಕ್ಕಾಗಿ ಪ್ರಕಟಿಸಿದ ತ್ವರಿತ ಅಂದಾಜಿನಲ್ಲಿ ಈ ಅಸಂಬದ್ಧತೆ ಇನ್ನಷ್ಟು ಎದ್ದು ಕಾಣುತ್ತದೆ. ಏಕೆಂದರೆ ಈ ತ್ವರಿತ ಅಂದಾಜಿಗೆ ಬರಲು ಕೆಲವೇ ಕಂಪನಿಗಳ ಮಾಹಿತಿಗಳನ್ನು ಪರಿಶೀಲಿಸಲಾಯಿತು, ಕಂಪನಿ ವಲಯದ ಸಮಗ್ರ ಮಾಹಿತಿಯನ್ನು ಕೂಡ ಪರಿಶೀಲಿಸಲಿಲ್ಲ. ನಿಜ, ಇದಕ್ಕಿಂತ ಉತ್ತಮವಾದ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕಗಳು ಕೂಡ ಸಣ್ಣ ಪ್ರಮಾಣದ ಕೈಗಾರಿಕಾವಲಯದಲ್ಲಿನ ಬೆಳವಣಿಗೆಗಳನ್ನು ಒಳಗೊಂಡಿರುವುದಿಲ್ಲ. ಆದರೂ ಈ ದೋಷಪೂರಿತ ಅಂಕಿ–ಅಂಶಗಳೂ ಉತ್ಪಾದನೆಯಲ್ಲಿ ತೀವ್ರ ಇಳಿಕೆಯನ್ನು ತೋರಿಸುತ್ತವೆಯೆಂದರೆ ನೋಟುರದ್ಧತಿಯ ನಿಜವಾದ ದುಷ್ಪರಿಣಾಮ ಎಷ್ಟೆಂದು ಸುಲಭವಾಗಿಯೇ ಊಹಿಸಬಹುದು.

ನೋಟುರದ್ಧತಿ ದುಷ್ಪರಿಣಾಮ ಕೇವಲ ತಯಾರಿಕಾ ವಲಯಕ್ಕೆ ಸೀಮಿತವಾಗಿಲ್ಲ,ಸೇವಾ ವಲಯ, ತೃತೀಯ ವಲಯ, ವಿಶೇಷವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಮೇಲೆಯೂ ಆಳವಾದ ಪ್ರತಿಕೂಲ ಪರಿಣಾಮಗಳನ್ನು ಬೀರಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ, ಇಲ್ಲಿ ತಯಾರಿಕಾ ವಲಯಕ್ಕೆ ಸಂಬಂಧಿಸಿದ ಕೆಲವು ಅಂಕಿ–ಅಂಶಗಳು ಲಭ್ಯವಾಗಿರುವುದರಿಂದ ಅದರ ಮೇಲಿನ ಪರಿಣಾಮವನ್ನು ಮಾತ್ರ ವಿಶ್ಲೇಷಿಸಿದ್ದೇವೆ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ನಮ್ಮ ಮುಂದಿರುವ ಪ್ರಶ್ನೆ ಎಂದರೆ ಇತ್ತೀಚೆಗೆ ಲಭ್ಯವಾಗಿರುವ ಕೇವಲ ಒಂದು ವಲಯದ ಮಾಹಿತಿಗಳಲ್ಲಿ ನೋಟುರದ್ಧತಿಯ ಪ್ರತಿಕೂಲ ಪ್ರಭಾವದ ಸಾಕ್ಷ್ಯವನ್ನೇನಾದರೂ ಕಾಣಬಹುದೇ ಎಂಬುದು. ಇದಕ್ಕೆ ಉತ್ತರ ಬಹುಮಟ್ಟಿಗೆ ಹೌದು ಎಂಬುದೇ ಆಗಿದೆ. ಇದು ನೋಟುರದ್ಧತಿಯಿಂದ ಆರ್ಥಿಕ ಹಿಂಜರಿತದ ದುಷ್ಪರಿಣಾಮವೇನೂ ಇಲ್ಲ ಎಂದು ಸರ್ಕಾರ ಹಂಚುತ್ತಿರುವ ಎಲ್ಲ ಸುಳ್ಳುಗಳನ್ನು ನಿವಾರಿಸಬೇಕು.

ಸಂಗ್ರಹಾನುವಾದ: ಮುರಳಿ

"ನೋಟುರದ್ಧತಿ 1.52 ಲಕ್ಷ ಕ್ಯಾಶುವಲ್ ಉದ್ಯೋಗಗಳನ್ನು ನುಂಗಿದೆ"

ಇದು ಫಿನಾನ್ಶಿಯಲ್ ಕ್ರಾನಿಕಲ್‌ನ ಮೇ 2 ರ ಸುದ್ದಿಯ ಶಿರೋನಾಮೆ. ಮೋದಿ ಸರಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆ ತಯಾರಿಸಿರುವ ಮಾಹಿತಿ ತಖ್ತೆ ನೋಟುರದ್ಧತಿಯಿಂದ ಉದ್ಯೋಗ ನಷ್ಟವಾಗಿದೆ ಎಂಬ ಅಭಿಪ್ರಾಯವನ್ನು ದೃಢಪಡಿಸಿದೆ ಎಂದೇ ಆ ಸುದ್ದಿ ಆರಂಭವಾಗುತ್ತದೆ. ಇದೇನೂ ಎಡಪಂಥೀಯ ಪತ್ರಿಕೆಯಲ್ಲ ಎಂಬುದನ್ನು ಗಮನಿಸಬೇಕು.

ಕ್ಯುಇಎಸ್ ಎಂಬ ಸರಕಾರೀ ಸರ್ವೆ ಪ್ರತಿ ಮೂರು ತಿಂಗಳಿಗೊಮ್ಮೆ ಆಯ್ದ ಕ್ಷೇತ್ರಗಳಲ್ಲಿ ಕೃಷಿಯೇತರ ಉದ್ಯೋಗಾವಕಾಶಗಳಲ್ಲಿ ಆಗಿರುವ ಬದಲಾವಣೆಗಳ ಮಾಹಿತಿ ಕಲೆ ಹಾಕುತ್ತದೆ. ಇದರ ಜನವರಿ 1, 2017ರ ಸರ್ವೆಯ ಪ್ರಕಾರ ಅಕ್ಟೋಬರ್–ಡಿಸೆಂಬರ್2016ರ ಅವಧಿಯಲ್ಲಿ ಎಂಟು ಶ್ರಮದ ಬಳಕೆ ಹೆಚ್ಚಾಗಿರುವ ಕೃಷಿಯೇತರ ವಲಯಗಳ ಸಾವಿರಾರು ಕಾರ್ಖಾನೆಗಳಲ್ಲಿ 1,52,000 ಕ್ಯಾಶುವಲ್ ಕಾರ್ಮಿಕರನ್ನು ಲೇ ಆಫ್ ಮಾಡಲಾಗಿದೆ.

ಹಿಂದಿನ ಜುಲೈ–ಸಪ್ಟಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಹೊಸ ನಿಯಮಿತ ಮತ್ತು ಕಾಂಟ್ರಾಕ್ಟ್ ಉದ್ಯೋಗಿಗಳ ಸಂಖ್ಯೆಯಲ್ಲಿ ಅನುಕ್ರಮವಾಗಿ 1.39 ಲಕ್ಷ ಮತ್ತು 1.24 ಲಕ್ಷ. ಆದರೆ ಈ ಅವಧಿಯಲ್ಲಿ 1.52ಲಕ್ಷ ಕ್ಯಾಶುವಲ್ ಕಾರ್ಮಿಕರನ್ನು ಲೇ–ಆಫ್ ಮಾಡಿದ್ದರಿಂದ ಉದ್ಯೋಗಗಳಲ್ಲಿ ನಿವ್ವಳ ಹೆಚ್ಚಳ 1.11 ಲಕ್ಷ ಮಾತ್ರ. ಅರೆಕಾಲಿಕ ನೌಕರರ ಸಂಖ್ಯೆಯಲ್ಲೂ 46,000 ಇಳಿಕೆಯಾಗಿದೆ.

ವಾಸ್ತವವಾಗಿ ಈ ಅವಧಿಯಲ್ಲಿ ಅರ್ಧದಷ್ಟು ಮಾತ್ರ ನೋಟುರದ್ಧತಿಯ ನಂತರದ ಅವಧಿ ಎಂಬುದನ್ನು ಗಮನಿಸಿದರೆ ನಿಜವಾಗಿ ಈ ಕ್ರಮ ಹಾಳುಗೆಡವಿದ ಉದ್ಯೋಗಗಳ ಸಂಖೆ ಇನ್ನೂ ಹೆಚ್ಚಿದೆ ಎಂದು ಹೇಳಬಹುದಾಗಿದೆ.

‘ಬಾಂಗ್ಲ ಬಿಪನ್ನೊ–ಚೊಲೊ ನಬನ್ನ’ : ಸಿಪಿಐ(ಎಂ) ಪಶ್ಚಿಮ ಬಂಗಾಲ ರಾಜ್ಯ ಸಮಿತಿ ಕರೆ

ಬಂಗಾಲವನ್ನು ಕ್ಷೋಭೆ ಆವರಿಸಿದೆ, ನಬನ್ನ ಅಂದರೆ ರಾಜ್ಯ ಸಚಿವಾಲಯದ ಕಡೆ ನಡೆಯಿರಿ ಎಂದು ಎಪ್ರಿಲ್ 26–27ರಂದು ಸಭೆ ಸೇರಿದ ಸಿಪಿಐ(ಎಂ) ಪಶ್ಚಿಮ ಬಂಗಾಲ ರಾಜ್ಯ ಸಮಿತಿ ರಾಜ್ಯದ ಜನತೆಗೆ ಕರೆ ನೀಡಿದೆ. ಇದಕ್ಕೆ ಎಡರಂಗದ ಮತ್ತು ರಾಜ್ಯದ ಎಲ್ಲ ಸಾಮೂಹಿಕ ಸಂಘಟನೆಗಳ ಬೆಂಬಲ ಇದೆ ಎಮದು ಇದನ್ನು ಪತ್ರಿಕಾ ಸಮ್ಮೇಳನವೊಂದರಲ್ಲಿ ಪ್ರಕಟಿಸುತ್ತ ರಾಜ್ಯ ಕಾರ್ಯದರ್ಶಿ ಡಾ.ಸೂರ್ಯಕಾಂತ್ ಮಿಶ್ರ ಹೇಳಿದ್ದಾರೆ. ಈಗಾಗಲೇ ರಾಜ್ಯಾದ್ಯಂತ ಸಭೆ, ರ್‍ಯಾಲಿಗಳ ಮೂಲಕ ಈ ಆಂದೋಲನ ಆರಂಭವಾಗಿದೆ.

ಟಿಎಂಸಿ ಬಂಗಾಲವನ್ನು ಮರಣ ಭೂಮಿಯಾಗಿ ಪರಿವರ್ತಿಸಿದೆ. ಎಡಪಕ್ಷಗಳು ಮಾತ್ರವಲ್ಲ, ಸ್ವತಃ ಟಿಎಂಸಿಯೇ ಟಿಎಂಸಿಯಿಂದ ಅಪಾಯವನ್ನು ಎದುರಿಸುತ್ತಿದೆ ಎಂದು ಅವರು ಮಾರ್ಮಿಕವಾಗಿ ಟಿಪ್ಪಣಿ ಮಾಡಿದರು. ಅವರು ಹೋಗಲೇಬೇಕು, ಆದರೆ ತಮ್ಮ ಸ್ಥಾನದಲ್ಲಿ ಬಿಜೆಪಿಯನ್ನು ತರಲು ಅವರು ಪ್ರಯತ್ನಿಸುತ್ತಿದ್ದಾರೆ, ಇದನ್ನು ಏನೇ ಬೆಲೆ ತೆತ್ತಾದರೂ ತಡೆಯಬೇಕು ಎಂದು ಮಿಶ್ರ ಹೇಳಿದರು.

ಬಿಜೆಪಿಗೆ ಸದಸ್ಯರನ್ನು ಸೇರಿಸಿಕೊಳ್ಳುವಲ್ಲಿ ಯಾವುದೇ ಅಸ್ಪೃಶ್ಯತೆ ಬೇಡ ಎಂಬ ಬಿಜೆಪಿ ಅಧ್ಯಕ್ಷರ ಹೇಳಿಕೆಯತ್ತ ಪತ್ರಕರ್ತರು ಗಮನ ಸೆಳೆದಾಗ ಬಿಜೆಪಿ ಮತ್ತು ಟಿಎಂಸಿ ಎರಡಕ್ಕೂ ಯಾವುದೇ ಸಿದ್ಧಾಂತ ಎಂಬುದಿಲ್ಲ, ಎಂಪಿಗಳ, ಎಂಎಲ್ಎ ಗಳ ಮಾರಾಟದಲ್ಲಿ ಅವರು ತೊಡಗಿರುವುದು ಇದನ್ನು ತೋರಿಸುತ್ತದೆ, ಇತ್ತೀಚೆಗೆ ಎರಡು ರಾಜ್ಯಗಳ ಮತದಾರರು ತಿರಸ್ಕರಿಸಿದರೂ ಶಾಸಕರನ್ನು ಮತ್ತು ಪಕ್ಷಗಳನ್ನೇ ಇಡಿಯಾಗಿ ಖರೀದಿಸಿ ಸರಕಾರಗಳನ್ನು ರಚಿಸಿದವರು ತಾನೇ, ಇದು ಅವರ ದಿವಾಳಿಕೋರತನವನ್ನು ತೋರಿಸುತ್ತದೆ ಎಂದು ಸೂರ್ಯಕಾಂತ್ ಮಿಶ್ರ ಉತ್ತರಿಸಿದರು.

ಪಶ್ಚಿಮ ಬಂಗಾಲ ಒಂದು ಅಂತರ್ಯುದ್ಧದತ್ತ ಸಾಗುತ್ತಿದೆ. ಎಲ್ಲ ಜಾತ್ಯತೀತ ಮತ್ತು ಸರ್ವಾಧಿಕಾರಶಾಹಿ–ವಿರೋಧಿ ಶಕ್ತಿಗಳು ಒಟ್ಟುಗೂಡಬೇಕು, ತಮ್ಮಲ್ಲಿ ಇರಬಹುದಾದ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಕೋಮುವಾದಿ ಮತ್ತು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಕಟಿಬದ್ಧರಾಗಬೇಕು ಎಂದು ಅವರು ಹೇಳಿದರು.

ಇತ್ತೀಚೆಗೆ ಕಾಂಟೈ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಉಪಚುನಾವಣೆ ಟಿಎಂಸಿ ಮತ್ತು ಬಿಜೆಪಿ ಹೇಗೆ ಕೈ–ಕೈಹಿಡಿದು ಸಾಗುತ್ತಿವೆ ಎಂಬುದನ್ನು ತೋರಿಸಿದೆ. ಇಲ್ಲಿ ಎಡರಂಗ ಮೂರನೇ ಸ್ಥಾನಕ್ಕಿಳಿದಿದೆ ಎಂದು ಭಾರೀ ಪ್ರಚಾರ ನಡೆಯುತ್ತಿದೆ. ಇದೆಂದೂ ಎಡ ಪಕ್ಷಗಳ ಭದ್ರ ಕೋಟೆಯಾಗಿರಲಿಲ್ಲ, ಸ್ವಾತಂತ್ರ್ಯದ ನಂತರ ಒಂದು ಬಾರಿ ಮಾತ್ರ ಸಿಪಿಐ ಅಭ್ಯರ್ಥಿ ಇಲ್ಲಿಂದ ಆಯ್ಕೆಯಾಗಿದ್ದರು. ಆದರೂ ಹಿಂದುತ್ವ ಶಕ್ತಿಗಳು ಇತ್ತೀಚೆಗೆ ಎದ್ದು ಬಂದಿರುವುದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ, ಇದು ಬಂಗಾಲದ ಹಿತದ ಪ್ರಶ್ನೆ ಎಂದು ಅವರು ಹೇಳಿದರು.



ಸಿಲಿಗುರಿ ಮೇಯರ್ ಮೇಲೆ ಟಿಎಂಸಿ ಹಲ್ಲೆ

ಪಶ್ಚಿಮ ಬಂಗಾಲದ ಉತ್ತರ ಭಾಗದಲ್ಲಿರುವ ಸಿಲಿಗುರಿ ನಗರದ ಮೇಯರ್ ಆಸೋಕ ಭಟ್ಟಾಚಾರ್ಯರವರ ಮೇಲೆ ಟಿಎಂಸಿಸದಸ್ಯರು ಹಲ್ಲೆ ಮಾಡಿ ಅವರನ್ನು ಆಸ್ಪತ್ರೆಯ ಸಿಸಿಯು ಘಟಕಕ್ಕೆ ಸೇರಿಸಬೇಕಾಗಿ ಬಂದಿದೆ.

ಸಿಲಿಗುರಿ ಮಹಾನಗರ ಪಾಲಿಕೆಯ ಸಭೆಯಲ್ಲಿ ಟಿಎಂಸು ಕೌನ್ಸಿಲರ್‌ಗಳು ಕೆಲವರು ಮೈಕ್ರೊಫೋನ್ ಸ್ಟಾಂಡನ್ನು ಮೇಯರ್ ಅವರ ಮೇಲೆ ಎಸೆದದ್ದರಿಂದ ಅವರ ಹಣೆಗೆ ತೀವ್ರ ಗಾಯಗಳಾಗಿವೆ ಎಂದು ವರದಿಯಾಗಿದೆ. ಎಡರಂಗದ ಕೌನ್ಸಿಲರ್‌ಗಳು ಅವರನ್ನು ತಕ್ಷಣವೇ ಅವರನ್ನು ಆಸ್ಪತ್ರೆಗೆ ಒಯ್ದರು.

ಈ ಹಲ್ಲೆಯ ವಿರುದ್ಧ ನಗರದಲ್ಲಿ ಬಾರೀ ಪ್ರತಿಭಟನೆ ನಡೆದಿದೆ.

ಕೇರಳದ ಎಲ್‌ಡಿಎಫ್ ಸರಕಾರ : ಒಂದು ವರ್ಷ ಪೂರೈಸುತ್ತಿರುವ ವೇಳೆಗೆ ಇನ್ನೆರಡು ಜನಪರ ಕ್ರಮಗಳು

ಕೇರಳದ ಎಲ್‌ಡಿಎಫ್ ಸರಕಾರ ಈ ತಿಂಗಳಲ್ಲಿ ಒಂದು ವರ್ಷ ಪೂರೈಸುತ್ತಿದೆ. ಈ ಒಂದು ವರ್ಷದಲ್ಲಿ ನಾವು ಅಭಿವೃದ್ಧಿಗೆ ಒಂದು ಬುನಾದಿ ನಿರ್ಮಿಸುತ್ತಿದ್ದೇವೆ, ಮುಂದಿನ ನಾಲ್ಕು ವರ್ಷಗಳಲ್ಲಿ ಇದನ್ನು ಪೂರ್ಣವಾಗಿ ಕಟ್ಟುತ್ತೇವೆ ಎಂದು ಇತ್ತೀಚೆಗೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದರು.

ಈ ಬುನಾದಿ ನಿರ್ಮಾಣದಲ್ಲಿ ಈಗಾಗಲೇ ಎಲ್‌ಡಿಎಫ್‌ನ ಚುನಾವಣಾ ಪ್ರಣಾಳಿಕೆಯ ಅಂಶಗಳನ್ನು ಒಂದೊಂದಾಗಿ ಜಾರಿ ಮಾಡಲಾಗುತ್ತಿದೆ. ಇಂತಹ **ಇತ್ತೀಚಿನ ಎರಡು ಕ್ರಮಗಳಲ್ಲಿ ಒಂದು, ಲೈಬ್ರೆರಿಯನ್‌ಗಳು, ನರ್ಸರಿ ಶಿಕ್ಷಕರು ಮತ್ತು ಸಹಾಯಕರಿಗೆ ಗೌರವಧನದಲ್ಲಿ ಗಮನಾರ್ಹ ಹೆಚ್ಚಳ**. ಗ್ರಾಮ ಪಂಚಾಯ್ತುಗಳು, ನಗರಸಭೆಗಳು, ಸಾಂಸ್ಕೃತಿಕ ಕೇಂದ್ರಗಳು ಮತ್ತು ಅಂಗನವಾಡಿಗಳ ಅಡಿಯಲ್ಲಿ ಕೆಲಸ ಮಾಡುತ್ತಿರುವ ಲೈಬ್ರೆರಿಯನ್‌ಗಳು ಮತ್ತು ನರ್ಸರಿ ಶಿಕ್ಷಕರಿಗೆ ಗೌರವ ಧನವನ್ನು 2050 ರೂ.ನಿಂದ 12000 ರೂ.ಗೆ ಮತ್ತು ಸಹಾಯಕರ ಗೌರವಧನವನ್ನು 1400 ರೂ.ನಿಂದ 8000ರೂ.ಗೆ ಏರಿಸಲಾಗಿದೆ.

ಎರಡು, ಶೈಕ್ಷಣಿಕ ಸಾಲದ ಮರುಪಾವತಿಗೆ ಒಂದು ಯೋಜನೆ ಆರಂಭಿಸಿರುವುದು. ಇದರಿಂದ ಸಾಲ ಬಲೆಗೆ ಸಿಲುಕಿರುವ ಸಾವಿರಾರು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ. ಕೇರಳ ವಿಧಾನಸಭೆಯ ವಜ್ರಮಹೋತ್ಸವದ ಸಂದರ್ಭದ ಒಂದು ದಿನದ ವಿಶೇಷ ಅಧಿವೇಶನದಲ್ಲಿ ಸರಕಾರ ಇದನ್ನು ಪ್ರಕಟಿಸಿದೆ. ಇದು ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳ 9ಲಕ್ಷ ರೂ. ವರೆಗೆ ಸಾಲ ಪಡೆದಿರುವ ವಿದ್ಯಾರ್ಥಿಗಳಿಗೆ ನೆರವಾಗುತ್ತದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಮರಣ ಹೊಂದಿರುವ ಅಥವ ದೈಹಿಕವಾಗಿ, ಮಾನಸಿಕವಾಗಿ ಅನಾರೋಗ್ಯಕ್ಕೊಳಗಾಗಿರುವ ವಿದ್ಯಾರ್ಥಿಗಳ ಸಾಲಗಳು ಪೂರ್ಣವಾಗಿ ಮನ್ನಾ ಆಗುತ್ತವೆ ಎನ್ನಲಾಗಿದೆ. ಈ ಶೈಕ್ಷಣಿಕ ಸಾಲ ಮರುಪಾವತಿ ಯೋಜನೆಗೆ 900 ಕೋಟಿ ರೂ. ಖರ್ಚಾಗುತ್ತದೆ ಎಂದು ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ ಅಂದಾಜು ಮಾಡಿದೆ.

ಮೇ 25 ರಿಂದ ಎಲ್‌ಡಿಎಫ್ ಸರಕಾರದ ಮೊದಲ ವಾರ್ಷಿಕೋತ್ಸವ ವಾರಾಚರಣೆ

ತಿರುವನಂತಪುರದಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿ ಎಲ್‌ಡಿಎಫ್ ಸರಕಾರ ಮೊದಲ ವರ್ಷವನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ಮೇ 25ರಿಂದ ಒಂದು ವಾರದ ಕಾಲ ವಿವಿಧ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಿದೆ.ಅದಕ್ಕೆ ಮೊದಲು ಮೇ 15ರಿಂದ ಜನಗಳ ಮೇಲೆ ಅಪಾರ ತೊಂದರೆಗಳನ್ನು ಹೇರುತ್ತಿರುವ ಕೇಂದ್ರ ಸರಕಾರದ ವಿವಿಧ ಕ್ರಮಗಳ ವಿರುದ್ಧ ಪ್ರತಿಭಟನಾ ವಾರಾಚರಣೆ ನಡೆಸಲೂ ಅದು ನಿರ್ಧರಿಸಿದೆ. ಅದು ಈ ಕೆಳಗಿನ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಲಿದೆ ಎಂದು ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಹೇಳಿದ್ದಾರೆ.

.* ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಸಕ್ಕರೆ ಮತ್ತು ಸೀಮೆ ಎಣ್ಣೆಯನ್ನು ಹಿಂತೆಗೆದು ಕೊಂಡಿರುವುದು, ಆಹಾರಭದ್ರತಾ ಕಾಯ್ದೆಯನ್ನು ನಿಷ್ಪ್ರಯೋಜಕ ಗೊಳಿಸುವಂತಹ ಕಡಿತಗಳನ್ನು ತಂದಿರುವುದು. * ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ತೀವ್ರ ಕಡಿತ ತಂದಿರುವುದು. ಕೇಂದ್ರ ಸರಕಾರ ಪೂರ್ಣ 100 ದಿನಗಳ ಕೆಲಸ ಒದಗಿಸಲು ಅಗತ್ಯವಾದ ಹಣವನ್ನು ಒದಗಿಸಬೇಕು ಎಂದು ಆಗ್ರಹಿಸಲಾಗುವುದು. * ಖಾಸಗೀಕರಣದ ಭರವನ್ನು ಹೆಚ್ಚಿಸಿ ಉದ್ಯೋಗಾವಕಾಶಗಳ ಮೇಲೆ ತೀವ್ರ ಹೊಡೆತ ನೀಡಿರುವುದು, ಜತೆಗೆ ಇದರಿಂದಾಗಿ ವಿವಿಧ ವಿಭಾಗಗಳ ಮೀಸಲಾತಿ ಸೌಲಭ್ಯಗಳಿಗೆ ಸಂಚಕಾರ ತಂದಿರುವುದು. * ಹೆಚ್ಚುತ್ತಿರುವ ಕೃಷಿ ಸಂಕಟವನ್ನು ಕೇವಲ ತುಸು ಸಾಲಮನ್ನಾದಿಂದ ಎದುರಿಸಲಾಗುವದಿಲ್ಲ, ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ವಚನ ನೀಡಿದಂತೆ ಉತ್ಪಾದನಾ ಖರ್ಚಿನ ಒಂದೂ ವರೆ ಪಟ್ಟಿನ ಮಟ್ಟದಲ್ಲಿ ಕನಿಷ್ಟ ಬೆಂಬಲ ಬೆಲೆ ಒದಗಿಸಬೇಕು ಎಂದು ಆಗ್ರಹಿಸುವುದು.

ಮಣಿಪುರ: ಮತ್ತೊಮ್ಮೆ ಮುಖಭಂಗ ಮಾಡಿಸಿಕೊಂಡ ಕೇಂದ್ರ ಸರಕಾರ

ಕಳೆದ ಜುಲೈನಲ್ಲಿ ಸುಪ್ರಿಂ ಕೋರ್ಟಿನ ಐವರು ನ್ಯಾಯಾಧೀಶರ ಪೀಠ ‘ಸಶಸ್ತ್ರಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ(ಎಎಫ್‌ಎಸ್‌ಪಿಎ) ಮತ್ತು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(ಯುಎಪಿಎ)ಯ ಅಡಿಯಲ್ಲಿ ಸಶಸ್ತ್ರ ಪಡೆಗಳು ಉಗ್ರಗಾಮಿಗಳ ಎನ್‌ಕೌಂಟರ್‌ಗಳ ಹೆಸರಲ್ಲಿ 1500 ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿವೆ ಎಂಬ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ಮೇಲೆ ತೀರ್ಪು ನೀಡುತ್ತ ಈ ಬಗ್ಗೆ ಸಶಸ್ತ್ರ ಪಡೆಯನ್ನು ತರಾಟೆಗೆ ತಗೊಂಡಿತ್ತು ಮತ್ತು ಈ ಕಾಯ್ದೆಗಳ ಅಡಿಯಲ್ಲಿ ವಿಪರೀತ ಬಲಪ್ರಯೋಗ ಮಾಡುವಂತಿಲ್ಲ ಎಂದು ಆದೇಶಿಸಿತ್ತು.

ಈ ಆದೇಶ ಈ ಪ್ರದೇಶದಲ್ಲಿ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆ ನಡೆಸುವಲ್ಲಿ ತೊಡಕುಂಟು ಮಾಡುತ್ತಿದೆ ಎಂದು ಕೇಂದ್ರ ಸರಕಾರ ಇದರ ಮರುಪರಿಶೀಲನೆಗೆ ಅರ್ಜಿ ಹಾಕಿತ್ತು. ಇದು ದೇಶದ ಭದ್ರತೆಯ ಕೆಲಸದ ಮೇಲೆ ಬಹಳಷ್ಟು ದುಷ್ಪರಿಣಾಮ ಬೀರುತ್ತಿದೆ, ಈ ಎರಡು ಕಾಯ್ದೆಗಳ ಅಡಿಯಲ್ಲಿ ಭಾರತೀಯ ಸೇನೆಗೆ ಇರುವ ರಕ್ಷಣೆ ಈಗ ಇಲ್ಲವಾಗಿದೆ, ನ್ಯಾಯಾಲಯ ಈ ಪ್ರದೇಶದಲ್ಲಿನ ವಾಸ್ತವತೆಗಳನ್ನು ಗಮನಕ್ಕೆ ತಗೊಂಡಿಲ್ಲ ಎಂಬಿತ್ಯಾದಿ ಹಲವು ತರ್ಕಗಳನ್ನು ತನ್ನ ಅರ್ಜಿಯಲ್ಲಿ ಸರಕಾರ ಮುಂದಿಟ್ಟಿತ್ತು. ಅಲ್ಲದೆ ಸೇನಾಪಡೆಗಳು ತಮ್ಮ ಕಾರ್ಯಾಚರಣೆಗಳ ವೇಳೆಯಲ್ಲಿ ಕೈಗೊಳ್ಳುವ ಕ್ರಮಗಳನ್ನು ನ್ಯಾಯಾಲಯದ ಪರೀಕ್ಷಣೆಗೆ ಗುರಿಪಡಿಸಲು ಸಾಧ್ಯವಿಲ್ಲ ಎಂದು ಕೂಡ ಸರಕಾರ ವಾದಿಸಿತ್ತು.

ಆದರೆ ಸುಪ್ರಿಂ ಕೋರ್ಟ್ ಈ ಯಾವ ತರ್ಕವನ್ನೂ ಒಪ್ಪದೆ ಐವರು ನ್ಯಾಯಾಧೀಶರ ಪಿಠದ ತೀರ್ಪನ್ನೇ ಎತ್ತಿ ಹಿಡಿಯುವ ತೀರ್ಪನ್ನು ಈಗ ನೀಡಿದೆ.

ತ್ರಿಪುರಾದಲ್ಲಿ ಎಡರಂಗ ಸರಕಾರ ಈ ಕಾಯ್ದೆಯ ಜಾರಿಯನ್ನು ಈಗಾಗಲೇ ಹಿಂತೆಗೆದುಕೊಮಡಿದೆ ಎಂಬುದನ್ನು ಇಲ್ಲಿ ಗಮನಿಸಬಹುದು. ಕಾಶ್ಮೀರ ಕಣಿವೆಯಲ್ಲೂ ಈ ಕಾಯ್ದೆಯ ದುರುಪಯೋಗ ವಾಗುತ್ತಿದೆ ಎಂಬ ದೂರುಗಳು ಈಗ ಹೆಚ್ಚಾಗಿವೆ.

ತ್ರಿಪುರಾಕ್ಕೆ ಕಾವಿ ಪಡೆಗಳ ಹಿಂಸಾಚಾರದ ಪ್ರವೇಶ : ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಮೇಲೆ ಹಲ್ಲೆಗೆ ಖಂಡನೆ

ಈಶಾನ್ಯ ಭಾರತವನ್ನು ‘ಕೈವಶ’ ಮಾಡಿಕೊಳ್ಳುವ ಬಿಜೆಪಿ ಅಧ್ಯಕ್ಷರ ‘ದಂಡಯಾತ್ರೆ’ ತ್ರಿಪುರಾ ಪ್ರವೇಶಿಸುವುದಕ್ಕೆ ಪೂರ್ವಭಾವಿಯಾಗಿ ಎಡಪಕ್ಷಗಳ ಮೇಲೆ ಆರೆಸ್ಸೆಸ್/ಬಿಜೆಪಿ ಹಿಂಸಾಚಾರ ಪ್ರವೇಶ ಮಾಡಿದೆ. ಮೇ2ರ ರಾತ್ರಿ ಬಿಜೆಪಿ–ಆರೆಸ್ಸೆಸ್ ಗೂಂಡಾಗಳು ಎಸ್‌ಎಫ್‌ಐನ ರಾಜ್ಯ ಕಾರ್ಯದರ್ಶಿ ನಬರುನ್ ದೇಬ್ ಅವರ ಮನೆಗೆ ನುಗ್ಗಿ ದೇಬ್ ಮತ್ತು ಅವರ ವಯಸ್ಸಾದ ತಂದೆ–ತಾಯಿಯ ಮೇಲೂ ಹಲ್ಲೆ ಮಾಡಿದ್ದಾರೆ, ಇದು ಅವರ ನಾಚಿಕೆಗೆಟ್ಟ ಸ್ವರೂಪವನ್ನು ತೋರಿಸುತ್ತದೆ ಎಂದು ಎಸ್‌ಎಫ್‌ಐ ಕೇಂದ್ರ ಕಾರ್ಯಕಾರಿ ಮಂಡಳಿ ಬಲವಾಗಿ ಖಂಡಿಸಿದೆ.





ಅಂದು ದೇಬ್ ಮೇಲೆ ಹಲ್ಲೆ ಮಾಡಲು ಮೊದಲು ಬಂದಾಗ ಆತ ಮನೆಯಲ್ಲಿ ಇರಲಿಲ್ಲ. ಆ ಗೂಂಡಾಗಳು ಅಮಾನುಷ ರೀತಿಯಲ್ಲಿ ದೇಬ್‌ನ ವಯಸ್ಸಾದ ತಂದೆ–ತಾಯಿಗೆ ಬಾಯಿಗೆ ಬಂದ ಹಾಗೆ ಬೈಯುವುದಲ್ಲದೆ ದೈಹಿಕ ಹಲ್ಲೆಯನ್ನೂ ಮಾಡಿ ಬೆದರಿಕೆ ಹಾಕಿ ಹೋದರು. ನಂತರ ದೇಬ್‌ನ ಮಾವನ ಮನೆಯ ಮೇಲೆ ಬಾಂಬೆಸೆದರು. ಇದನ್ನು ಕೇಳಿದ ದೇಬ್ ಪೋಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ ಮಧ್ಯರಾತ್ರಿಯ ವೇಳೆಗೆ ಮನೆಗೆ ಹಿಂದಿರುಗುತ್ತಿದ್ದಾಗ ಆ ಗೂಂಡಾಗಳು ಅಸ್ತ್ರಗಳಿಂದ ದೇಬ್ ಮೇಲೆ ದಾಳಿ ಮಾಡಿದರು. ಸ್ಥಳೀಯ ಜನ ಅವರ ರಕ್ಷಣೆಗೆ ಧಾವಿಸಿದಾಗ ಓಡಿಹೋದರು.

ನಬರುನ್ ದೇಬ್ ರಾಜ್ಯ ಒಬ್ಬ ಜನಪ್ರಿಯ ಯುವ ಮುಖಂಡರು, ಕೋಮುವಾದಿ ರಾಜಕೀಯದ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿ ಇರುವವರು.

ಈಶಾನ್ಯ ಭಾರತದಲ್ಲಿ ಕೋಮುವಿಷವನ್ನು ಹರಡುವಲ್ಲಿ ದೊಡ್ಡ ಅಡ್ಡಿಯಾಗಿರುವ ತ್ರಿಪುರಾದ ಎಡಶಕ್ತಿಗಳು ಈಗ ಅವರ ಗುರಿ. ಇತರೆಡೆಗಳಂತೆ ಹಣಬಲ, ಭುಜಬಲ ಮತ್ತಿತರ ಹಲವು ವಿಧಾನಗಳನ್ನು ಬಳಸುತ್ತಿದ್ದಾರೆ. ಬಿಜೆಪಿಯ ರಾಜ್ಯ ಅಧ್ಯಕ್ಷರೇ ಮತಯಂತ್ರದ ದುರುಪಯೋಗ ಮಾಡುವ ಹುನ್ನಾರವನ್ನು ಬಯಲು ಮಾಡಿ ಬಹಳ ದಿನಗಳೇನೂ ಆಗಿಲ್ಲ.

ಆದರೆ ಜನರ ನಡುವೆ ಹೋರಾಟಗಳಿಂದ ಬೆಳೆದು ಬಂದಿರುವ ಎಡಶಕ್ತಿಗಳನ್ನು ಎದುರಿಸುವುದು ಅವರಿಗೆ ಸಾಧ್ಯವಿಲ್ಲ ಎಂದು ಈಗಾಗಲೇ ತ್ರಿಪುರಾದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಈ ಕೋಮುವಾದಿ ಶಕ್ತಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಅಂತರ್ಜಾತಿ ವಿವಾಹಿತರ ಸಮಾವೇಶ



ಕುಟುಂಬ ಪ್ರೇಮ, ಸಮಾಜ ಪ್ರೇಮ, ದೇಶ ಪ್ರೇಮ ಮತ್ತು ವಿಶ್ವ ಪ್ರೇಮ – ಬಸವ ಧರ್ಮದ ಪ್ರೇಮ ತತ್ವವಾಗಿವೆ. ಸತಿ ಪತಿಗಳೊಂದಾದ ಭಕ್ತಿ ಹಿತಪ್ಪದು ಶಿವಂಗೆ ಎಂದ ಜೇಡರ ದಾಸಿಮಯ್ಯನವರು ಕುಟುಂಬ ಪ್ರೇಮದ ಮಹತ್ವವನ್ನು ತಿಳಿಸಿದ್ದಾರೆ. "ಜೀವಿಸುವ ಜೀವಕ್ಕೆ ಶೃಂಗಾರ ಗಣಮೇಳಾಪ" ಎಂದ ಅಕ್ಕ ಮಹಾದೇವಿ ಸಮಾಜ ಪ್ರೇಮ ಸಾರಿದ್ದಾರೆ" ಕಳ್ಳ ನಾಣ್ಯ ಸಲುಗೆಗೆ ಸಲ್ಲದು – ಎಂದು ಬಸವಣ್ಣ ದೇಶಪ್ರೇಮ ಸೂಚಿಸಿದ್ದಾರೆ. "ಆರಂಭವ ಮಾಡಿ ಸಂಸಾರ ಸ್ಥಿತಿ ಕಳೆಯದಿದ್ದರೆ ಆ ಆರಂಭವೆ ಕೇಡು" ಎಂದು ಚನ್ನ ಬಸವಣ್ಣನವರು ವಿಶ್ವಪ್ರೇಮ ಮೆರೆದಿದ್ದಾರೆ.

ಜಾತಿಯ ಕಾಲಂನಲ್ಲಿ Human Being !

ಬಸವ ಪ್ರಜ್ಞೆಯು ಆರ್ಥಿಕ ಸಮಾನತೆಯಿಂದ ಕೂಡಿದ ಮಾನವ ಹಕ್ಕುಗಳ ಪ್ರಜ್ಞೆಯಾಗಿದೆ. ಪ್ರಜಾಪ್ರಭುತ್ವವಾದಿ ಪ್ರಜ್ಞೆಯಾಗಿದೆ. ಜಾತಿ ಮತ್ತು ಕೋಮು ಭಾವನೆಗಳು ಭಾರತೀಯ ಮನಸ್ಸುಗಳನ್ನು ಆಳವಾಗಿ ಕಲುಷಿತಗೊಳಿಸಿವೆ. ಶೂದ್ರರು ಮತ್ತು ಸವರ್ಣಿಯರು ಸಹಜ ಪ್ರವೃತ್ತಿ ಎಂಬಂತೆ ಜಾತಿಯತೆಯನ್ನು ಹಿಂದು ಧರ್ಮದ ಹೆಸರಿನಲ್ಲಿ ಆಳವಾಗಿ ರಕ್ತಗತಗೊಳಿಸಿದ್ದಾರೆ ಮನುವಾದಿಗಳು.

ಜಾತಿ ಎಂಬುದು ಅಸಹ್ಯವಾದ ನಾಶವಾಗಿದೆ. ಜಾತಿಯತೆಯು ಸವರ್ಣೀಯರಾದ ಬಾಹ್ಮಣರು, ಸೃಷ್ಟಿಮಾಡಿದ್ದು, ಇದು ಇದೀಗ ಶೂದ್ರರಲ್ಲಿಯೂ ಹಾಸು ಹೊಕ್ಕಾಗಿದೆ. ಕಡಿಮೆ ಸಂಖ್ಯೆಯಲ್ಲಿರುವ ಬ್ರಾಹ್ಮಣರಿಗೆ ಜಾತಿಯತೆಯಿಂದ ಲಾಭವಾಗಿರುವ ಕಾರಣ ಅವರು ಜಾತಿ ವ್ಯವಸ್ಥೆಯನ್ನು ಬಿಟ್ಟು ಬದುಕಲಾರರು.

ಖ್ಯಾತ ರಂಗಕರ್ಮಿ, ನಾಟಕ ನಿರ್ದೇಶಕ ಸಿ ಬಸವಲಿಂಗಯ್ಯನವರು ಅಂತರ ಜಾತಿಯ ವಿವಾಹಿತರ ರಾಜ್ಯ ಮಟ್ಟದ ಸಮಾವೇಶ ಉದ್ಘಾಟನೆ ಮಾಡುತ್ತಾ ಬಸವಣ್ಣನವರ ತತ್ವ ಇಂದಿಗೂ ಪ್ರಸ್ತುತ ಎಂದು ಮನನ ಮಾಡಿದರು. 'ಬಸವ ಜಯಂತಿ' ಪ್ರಯುಕ್ತ ಏಪ್ರಿಲ್ 29ರಂದು ದಲಿತ ಹಕ್ಕುಗಳ ಸಮಿತಿ ವತಿಯಿಂದ ಬೆಂಗಳೂರಿನಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿತ್ತು.

ಬಾಬಾ ಸಾಹೇಬ ಅಂಬೇಡ್ಕರ್ ಜಯಂತಿ ಏಪ್ರಿಲ್ 14 ರಂದು ಬಸವಣ್ಣ ನವರ ಜಯಂತಿ ಅದೇ ಏಪ್ರಿಲ್ 29 ರಂದು – ಇಬ್ಬರಲ್ಲೂ 'ಸಮಾನತೆ' ಸಮಾಜ ಸೃಷ್ಠಿಯ ವಿಚಾರದಲ್ಲಿ ಸಾಮ್ಯತೆ ಇದೆ ಎಂದು ನಾನು ಅಂತರ್ ಜಾತಿಯ ವಿವಾಹವಾಗಿದ್ದೇನೆ. ನನಗೆ ಒಬ್ಬಳು ಮಗಳಿದ್ದಾಳೆ. ನಾನು ಹೊಲೆಯ, ನನ್ನ ಮಡದಿ ಬ್ರಾಹ್ಮಣೆ, – ಆದರೆ ನಮಗೆ ಜನಿಸಿದ ಮಗಳಿಗೆ ಶಾಲೆಗೆ ಸೇರಿಸುವಾಗ – ಜಾತಿಯ ಕಾಲಂನಲ್ಲಿ Human Being ಎಂದು ಬರೆದಿದ್ದು ಮುಂದೆ ರಾದ್ಧಾಂತವಾದ ಪ್ರಸಂಗವನ್ನು ವಿವರಿಸಿದರು. ಜಾತಿವಾದಿಗಳು ಅಪಾಯಕಾರರು, ಇದೀಗ ಕೇಂದ್ರದಲ್ಲಿ ಧರ್ಮಾಂದರು ಆಡಳಿತ ನಡೆಸುತ್ತಿದ್ದಾರೆ. ಇವರ ಚಲನ ಕ್ರಿಯೆ – ಆಡಳಿತಾತ್ಮಕತೆಯ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು.

ಜಾತಿ ನಿರ್ಮೂಲನೆಗಾಗಿ ಪರ್ಯಾಯ ಮಾರ್ಗ

ಮುಖ್ಯ ಅತಿಥಿಗಳಾಗಿ ಮಾತನಾಡಿದ ಶ್ರೀ ಶ್ರೀ ನಿಡುಮಾಮಿಡಿ ಚನ್ನಮಲ್ಲ ಸ್ವಾಮೀಜಿಯವರು ಇಂತಹ ಸಮಾವೇಶವನ್ನು ಆಯೋಜಿಸಿದ ದಲಿತ ಹಕ್ಕುಗಳ ಸಮಿತಿಗೆ ಅಭಿನಂದನೆ ಸೂಚಿಸುತ್ತಾ, ಕಾಯಕವೇ ಸಂಸ್ಕೃತಿಗಳ ಮೂಲ. ಕಾಯಕ ವಿಲ್ಲದೆ ಯಾವುದೇ ಸಂಸ್ಕೃತಿ ರೂಪುಗೊಳ್ಳದು, ಯಾವ ನಾಗರೀಕತೆಯೂ ಬೆಳೆಯದು, ಕಾಯಕತ್ವವನ್ನು ಪಾಲಿಸಿದಾಗಲೇ ಉಳಿದೆಲ್ಲವನ್ನೂ ಪಾಲಿಸಲು ಸಾಧ್ಯವಾಗುವುದು ಎಂಬ ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಶರಣದರ್ಶನದಲ್ಲಿ ಕಾಯಕಕ್ಕೆ ಹೆಚ್ಚಿನ ಮಹತ್ವವಿದೆ ಎಂದರು. ಬಸವಣ್ಣನವರು ಜಾತಿಯ ಸಂಕೋಲೆಗಳನ್ನು ಕಳಚಿ ಹಾಕಲು ಸಾಕಷ್ಟು ಪ್ರಯತ್ನ ಪಟ್ಟರು, ಅವರನ್ನೂ ಸಂಪ್ರದಾಯ ವಾದಿಗಳು, ಅವರ ಪೂಜೆ, ಮೆರವಣಿಗೆ, ಉತ್ಸವ ಮೂರ್ತಿಗಳಾಗಿ ಪೂಜಿಸುವುದಕ್ಕೆ ಸೀಮಿತಗೊಳಿಸಿಬಿಟ್ಟಿದ್ದರೆ, ಬಸವಣ್ಣನವರು ಸಮಾನತೆಯ ಜೀವಂತ ಸಂಕೇತವಾಗಿ ಉಳಿದಿದ್ದಾರೆ. 12ನೇ ಶರಣರ ಚಳುವಳಿ ಎಲ್ಲಾ ರೀತಿಯ ಶೋಷಣೆ, ಕೌರ್ಯ, ದೌರ್ಜನ್ಯ ದಬ್ಬಾಳಿಕೆಗಳ ವಿರುದ್ಧ ನಡೆದ ನೈಜ ಸಮಾನತೆಯ ಹೋರಾಟವಾಗಿತ್ತು. ಅವರು ಬಿತ್ತಿದ ಈ 'ಸಮಾನತೆಯ' ಹೋರಾಟ, ಲಿಂಗ–ಭೇದ ರಹಿತ ಹೋರಾಟ ಇಂದಿಗೂ ಜೀವಂತವಾಗಿ, ಬೇರೆ ಬೇರೆ ರೂಪಗಳಲ್ಲಿ ಆಚರಣೆಯಲ್ಲಿವೆ ಎಂದರು. ವರ್ಣ ವ್ಯವಸ್ಥೆ, ವರ್ಗ ವಿಭಜನೆ ಪೂರ್ವಗ್ರಹ ಪೀಡಿತ ವ್ಯವಸ್ಥೆಯಾಗಿತ್ತು. 'ಹುಟ್ಟಿನ ಮೇಲೆ ವಿಶಿಷ್ಟವಾದ ವೃತ್ತಿ ನಿಗದಿಯಾಗುತ್ತಿತ್ತು. ಶೂದ್ರರು ಸೇವೆ ಮಾಡುವ ವೃತ್ತಿಗೆ ಸೀಮಿತಗೊಂಡಿದ್ದರು. ಇಂತಹ ನಿಯಮಗಳು ತಾರತಮ್ಯಕ್ಕೆ ಮೂಲ ಕಾರಣವಾಯಿತು.

ಪ್ರಸ್ತುತ್ತ ಈ ಸ್ವರೂಪ ಬಿನ್ನವಾಗಿದೆ. ಜಾತಿ ನಿಷ್ಠೆ, ವರ್ಣ ನಿಷ್ಠೆ ತೊಡೆದು ಹಾಕಲು ಅಸಾಧ್ಯವಾಗಿದೆ. ಬುದ್ಧ, ಬಸವಣ್ಣ, ಅಂಬೇಡ್ಕರ್ ರವರು ನೂರು ಜನ್ಮವೆತ್ತಿ ಬಂದೂ ಸಹ, ಜಾತಿ ನಿರ್ಮೂಲನೆ ಅಸಾಧ್ಯವೆಂಬಂತ ಪರಿಸ್ಥಿತಿ ವ್ಯವಸ್ಥೆಯೊಳಗೆ ಆಳವಾಗಿ ಬೇರೂರಿದೆ. ಇದೀಗ ಆರ್ಥಿಕ ಮಾನದಂಡಗಳಾಗಿ ಜಾತಿ, ಜಾತಿಯಾಗಿ ಹೊಸ ಸ್ವರೂಪ ತಾಳಿ ನಿಂತಿವೆ.

ಜಾತಿ ನಂಬಿದರೆ ಮಾತ್ರ, ನಮಗೆ ಶ್ರೇಷ್ಠರು ಎಂಬ ಬಿರುದು ಬರುತ್ತದೆ. ಆದ್ದರಿಂದ ಜಾತಿಯ ವಿನಾಶ ಸಾಧ್ಯವಿಲ್ಲ. ನಿರ್ಮೂಲನೆಗಾಗಿ ನಡೆಯುವ ಹೋರಾಟಗಳು ಪ್ರಯತ್ನಗಳಿಗೆ ಫಲ ದೊರಕಲಾಗದು. ಅದಕ್ಕಾಗಿ ಪರ್ಯಾಯ ಮಾರ್ಗ ಅನುಸರಿಸಬೇಕು, ಜಾತಿ ವಿನಾಶವಾದರೆ ಮಾತ್ರ. ಅಸ್ಪೃಶ್ಯತೆ ಹೋಗುತ್ತದೆ ಎಂಬ ಭ್ರಮೆ ಬೇಡ, ಏಕೆಂದ–ರೆ, ಮಠಗಳೆ ಇಂತಹವುಗಳನ್ನೂ ಪ್ರೋತ್ಸಾಹಿಸುತ್ತಿರುವುದು ವಾಸ್ತವವೆಂದರು.

ವಿದ್ಯೆ ಕಲಿತಾಗ, ಅಧಿಕಾರ ಪಡೆದಾಗ, ರಾಜಕೀಯ ಶಕ್ತಿ ದೊರೆತಾಗ ಒಟ್ಟಾರೆಯಾಗಿ ಆರ್ಥಿಕವಾಗಿ ಪ್ರಬಲರಾಗಲು ದಾರಿ ಹುಡುಕ ಬೇಕಾಗಿದೆ. ಹಲವು ಜನ ಸಮುದಾಯಗಳು ದೇವರನ್ನೂ–ಧರ್ಮವನ್ನು ಬೇಕಾದರೆ ಬಿಟ್ಟುಕೊಡುತ್ತಾರೆ – ಜಾತಿಯನ್ನೂ ಮಾತ್ರ ಬಿಡಲಾರರು.

ಒಮ್ಮೆ ನಮ್ಮ ಮಠದಲ್ಲಿ ಬ್ರಾಹ್ಮಣ – ದಲಿತ ಅಂತರಜಾತಿ ವಿವಾಹಿತರಿಗೆ ಆಶ್ರಯ ಕೊಟ್ಟಿದ್ದಕ್ಕಾಗಿ – ಮಠವನ್ನೇ ಸುಟ್ಟು ಹಾಕುತ್ತೇವೆ ಎಂಬ ದಬ್ಬಾಳಿಕೆಯ ದಾಳಿ ಎದುರಾದ ಪ್ರಸಂಗವನ್ನು ವಿವರಿಸಿದರು.

ಅಂತರಜಾತಿಯ ವಿವಾಹಿತರಿಗೆ ಆರಂಭದಲ್ಲಿ ರಕ್ಷಣೆ ಅಗತ್ಯವಿದೆ ಎಂಬ ಅರಿವು ಈ ಘಟನೆಯಿಂದ ಗೊತ್ತಾಗಿದೆ. ಆದ್ದರಿಂದ ಇವರ ರಕ್ಷಣೆಗಾಗಿ ನಮ್ಮ ಮಠದಿಂದ 1 ಲಕ್ಷ ದೇಣಿಗೆ ಕೊಡುತ್ತೇನೆ. ಇವರ ನೆರವಿಗಾಗಿ ವಸತಿಗಳನ್ನು ನಿರ್ಮಿಸಿರಿ ಎಂದು ಕಾಳಜಿ ವ್ಯಕ್ತಪಡಿಸಿದರು.

ಮಾಂಸವನ್ನು ಬಾತ್ ರೂಮಿನಲ್ಲಿ ಬೇಯಿಸಿ!

ಡಾ। ವಸುಂದರಾ ಭೂಪತಿ ಮುಖ್ಯ ಭಾಷಣಕಾರರಾಗಿ ಮಾತನಾಡಿ, ತಮ್ಮ ಅಂತರಜಾತಿ ವಿವಾಹದ ಆರಂಭದ ಆತಂಕ ದಿನಗಳನ್ನು ತಿಳಿಸಿಕೊಟ್ಟರು. ವಿವಾಹಿತರು ಭಯಪಡಬೇಕಾದ ಅಗತ್ಯವಿಲ್ಲ ಧೈರ್ಯದಿಂದ ಎದುರಿಸಬೇಕೆಂದರು. ನಮ್ಮ ತವರಿನಲ್ಲೆ ಸುಮಾರು 40–50 ಅಂತರ್ಜಾತಿ ಮದುವೆ ಮಾಡಿಸಿದ್ದೇವೆ. ಇವರ ಅನ್ಯೋನ್ಯ ಬದು–ಕಿಗೆ 'ಆರಂಭದಲ್ಲಿ ರಕ್ಷಣೆ' ಅಗತ್ಯವೆಂದರು. 'ಒಮ್ಮೆ ಬಾಡಿಗೆ ಮನೆ ಹುಡುಕುವಾಗ ಸಸ್ಯಹಾರಿಯೇ? ಮಾಂಸಹಾರಿಯೋ? ಎಂದು ಕೇಳಿದಾಗ – ಭೂಪತಿ ನನ್ನ ಪತಿಯವರು ಎರಡು 'ಸಮಾನಾಂತರ' ವಾಗಿ ಎಂದಾಗ, ಮಾಂಸವನ್ನು ಬಾತ್ ರೂಮಿನಲ್ಲಿ ಬೇಯಿಸಿ ತಿನ್ನಬೇಕೆಂದು ಮಾಲೀಕ ಹೇಳಿದಾಗ, ನನ್ನ ಪತಿ ಕೋಪದಿಂದ 'ನೀವು ಊಟ ಮಾಡುವುದು ಎಲ್ಲಿ? 'ಬಾತ್ ರೂಂ' ನಲ್ಲಿ ಏನು ಎಂದು ಪ್ರತಿಯಾಗಿ ಪ್ರಶ್ನೆ ಹೇಳಿದ್ದರು. ಎಂಬ ಅನೇಕ ಅನುಭವಗಳನ್ನು ಹಂಚಿಕೊಂಡರು.

ನಮ್ಮ 'ಮಾನವ ಮಂಟಪ' ದಿಂದ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು.

ನಂತರ ದೇವದಾಸಿ ಸಂಘದ ಅಧ್ಯಕ್ಷರಾದ ಮಾಳಮ್ಮ ನವರು ಮಾತನಾಡಿ, ಅಂಜುವುದು, ಅಳುಕುವುದು ಬೇಡ. ಧೈರ್ಯದಿಂದ ಎದುರಿಸಿ ಮುನ್ನುಗ್ಗಿದರೆ, ಸಮಾಜವನ್ನು ಬದಲಾಯಿಸಲು ಸಾಧ್ಯವೆಂದು ಅಂತರ್ ಜಾತಿಯ ವಿವಾಹಿತರಿಗೆ ಆಶ್ರಯ – ರಕ್ಷಣೆಯನ್ನು ನೀಡಲು ಸರ್ಕಾರದ ಮೇಲೆ ಒತ್ತಡ ತರಬೇಕೆಂದರು.

ಬರಹಗಾತಿ ಶಾಂತಕುಮಾರಿ ಮಾರ್ಕ್ಸ್‌ವಾದದ ಅರಿವಿನಿಂದಾಗಿ ಈ ಜಾತಿ ವ್ಯವಸ್ಥೆಯ ಸಮಾಜವನ್ನು ಎದುರಿಸಲು ಧೈರ್ಯ ಬಂದಿತು ಎಂದು ತಮ್ಮ ವಿದ್ಯಾರ್ಥಿ ದಿಸೆಯ ದಿನಗಳನ್ನು ಮೆಲುಕು ಹಾಕಿಕೊಂಡರು. ಸಮಸ್ಯೆಗಳ ಬಗ್ಗೆ ಸರ್ಕಾರಗಳ ಗಮನ ಸೆಳೆಯಲು ಹೋರಾಟದ ಅಗತ್ಯವಿದೆ ಎಂದರು. ಬಸವಣ್ಣನವರನ್ನೇ ಓಡಿಸಿಕೊಂಡು ಹೋಗಿ ನೀರಿನಲ್ಲಿ ಮುಳುಗಿಸಿದ್ದು ಈ ಜಾತಿ ವ್ಯವಸ್ಥೆಯ ಆಳವನ್ನು ಪ್ರತಿಬಿಂಬಿಸುತ್ತದೆ ಎಂದರು.

ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿಯವರು, ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿಯೇ, ಈ ಜಾತಿ ಪದ್ಧತಿಯ ವಿರುದ್ಧ ಸಿಡಿದು ನಿಂತವರು ಅದರ ನಿರ್ಮೂಲನೆಗಾಗಿ, ಅನುಭವ ಮಂಟಪ ಸ್ಥಾಪಿಸುವುದರ ಮೂಲಕ ಜನರಲ್ಲಿ ಸಮಾನತೆ, ಪ್ರಜಾಪ್ರಭುತ್ವದ ಅರಿವು ಮೂಡಿಸಿದ್ದರು.

ಅಂಬೇಡ್ಕರ್ ರವರು ಅದನ್ನು ಸಂವಿಧಾನದ ಮೂಲಕ ಪ್ರತಿಪಾದಿಸಿ, ದಲಿತ ಸಮುದಾಯಕ್ಕೆ ಹಕ್ಕುಗಳನ್ನು ತಂದುಕೊಟ್ಟರು, ಈಗ ನಮ್ಮ ದಲಿತ ಹಕ್ಕುಗಳ ಸಮಿತಿಯ ವತಿಯಿಂದ, ಇವರು ತೋರಿಸಿಕೊಟ್ಟ ಮಾರ್ಗವನ್ನು ಮುಂದುವರಿಸುವ ಕೆಲಸವನ್ನು ಕೈಗೆತ್ತುಕೊಂಡಿದೆ. ಇದರ ಭಾಗವಾಗಿ 'ಈ ಬಸವ ಜಯಂತಿ' ಯಿಂದ, ಅಂತರ–ಜಾತಿ ವಿವಾಹಿತರ ಸಮಾವೇಶ ನಡೆಸುವ ಮಹತ್ವ ಕಾರ್ಯ ಹಮ್ಮಿಕೊಳ್ಳಲಾಗಿದೆ. ಆಗಮಿಸಿರುವ 50 ಕ್ಕಿಂತ ಹೆಚ್ಚು ಜೋಡಿಗಳನ್ನು ಅಭಿನಂದಿಸುತ್ತಾ ಪ್ರಸ್ತಾವನೆ ಮೂಲಕ ಚಾಲನೆ ನೀಡಿದರು.

ಘೋಷಣಾ ಪತ್ರ ಅಂಗೀಕಾರ

ಸಮಾವೇಶದ ಅಧ್ಯಕ್ಷತೆಯನ್ನು ಯು. ಬಸವರಾಜು ವಹಿಸಿದ್ದರು. ಸಮಾಜದಲ್ಲಿ ಆರ್ಥಿಕ ಅಸಮಾನತೆಯಿಂದ ಶೋಷಣೆಗೆ ಹಾಗೂ ಸಾಮಾಜಿಕ ಧಮನಕ್ಕೆ ತುತ್ತಾಗಿರುವ ತಳಸ್ತರದ ಸಮುದಾಯಗಳಾದ ದಲಿತರು, ಮಂಗಳವಾದ್ಯ ಕಲಾವಿದರು, ಸ್ಮಶಾನ ಕಾರ್ಮಿಕರು, ಸಫಾಯಿ ಕರ್ಮಿಚಾರಿಗಳು, ದೇವದಾಸಿ ಮಹಿಳೆಯರು ಅವರ ಮಕ್ಕಳು ಇಂತಹವರನ್ನು ಪ್ರಜಾಸತ್ತಾತ್ಮಕ ಚಳುವಳಿಯ ಮುಖ್ಯವಾಹಿನಿಗೆ ತರುವ ಕಾರ್ಯದಲ್ಲಿ 'ದಲಿತ ಹಕ್ಕುಗಳ ಸಮಿತಿ' ತೊಡಗಿದೆ. ಇದೀಗ 'ಅಂತರಜಾತಿಯ ವಿವಾಹಿತರ ವೇದಿಕೆ'ಯು ಇದರೊಂದಿಗೆ ಸೇರಿಕೊಳ್ಳುತ್ತದೆ ಎಂದರು.

ಪ್ರಾರಂಭದಲ್ಲಿ ಗಿಡಕ್ಕೆ ನೀರು ಹಾಕುವ ಮೂಲಕ ನಿಡುಮಾಮಿಡಿ ಚನ್ನಮಲ್ಲ ಸ್ವಾಮೀಜಿಯವರು, ಉದ್ಘಾಟನೆ ಮಾಡಿದರು. ಮಂಡ್ಯ ಕೃಷ್ಣ ಸ್ವಾಗತ ಕೋರಿ ಕಾರ್ಯಕ್ರಮ ನಿರೂಪಣೆ ಮಾಡಿದರು. ಎನ್. ರಾಜಣ್ಣ ವಂದಾನಾರ್ಪಣೆ ಮಾಡಿದರು.

ಮಧ್ಯಾಹ್ನ ನಡೆದ ಸಮಾವೇಶದಲ್ಲಿ ಎನ್. ನಾಗರಾಜ ರವರು ಅಂತರ–ಜಾತಿಯ ವಿವಾಹಿತರ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಘೋಷಣಾ ಪತ್ರ ಮಂಡಿಸಿದರು, ಇದರ ಮೇಲೆ 8 ಜೋಡಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ನಂತರ ಘೋಷಣೆ ಅಂಗೀಕಾರಗೊಂಡಿತು.

ಸಮಾಜವು ಆಧುನಿಕ ತಂತ್ರಜ್ಞಾನದ ಬೆಳವಣಿಗೆಯ ನಾಗಲೋಟದಲ್ಲಿ ಓಡುತ್ತಿದೆ. ವಿಜ್ಞಾನದ ಅಭಿವೃದ್ಧಿಯಾಗಿದೆ. ಆದಾಗ್ಯೂ ಸಹ, ಶೇಕಡ 93 ರಷ್ಟು ಮದುವೆಗಳು ಒಂದೇ ಜಾತಿ, ಒಂದೇ ಕುಲ, ಒಂದೇ ಗೋತ್ರದಲ್ಲಿಯೇ ನಡೆಯುತ್ತಿವೆ. ಕೇವಲ ಶೇ. 7 ರಷ್ಟು ಮಾತ್ರ ಅಂತರ ಜಾತಿಯ ವಿವಾಹಗಳು ನಡೆಯುತ್ತಿವೆ ಅಷ್ಟೆ ಎಂದು ಘೋಷಣಾ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಕಾಫ್ ಪಂಚಾಯತುಗಳು ಹೇರುವ ತೀರ್ಪುಗಳು ಏಕಪಕ್ಷೀಯವಾಗಿರುತ್ತವೆ.

ಗ್ರಾಮೀಣ ಪ್ರದೇಶದಲ್ಲಿ ದಲಿತರು ಬೇರೆ ಜಾತಿಯಲ್ಲಿ ವಿವಾಹವಾದರೆ ಅಪಾರ ತೊಂದರೆ – ಕಿರುಕುಳ ಅನುಭವಿಸುತ್ತಾರೆ. ಈ ಹಿನ್ನೆಲೆಯಲ್ಲಿ ಈ ಕುಟುಂಬಗಳಿಗೆ, ದಂಪತಿಗಳಿಗೆ ರಕ್ಷಣೆ ನೀಡಬೇಕು. ಸರ್ಕಾರ ಹೆಚ್ಚು ಮುತುವರ್ಜಿ ವಹಿಸಬೇಕು ಎಂದು ಘೋಷಣೆಗಳ ಮೂಲಕ ಸಮಾವೇಶವು ಆಗ್ರಹ ಪಡಿಸಿತು.

ಶ್ರೀಮತಿ ಕವಿತ ಜೈಕುಮಾರ್, ಮಲ್ಲಿಕಾರ್ಜುನ ಮಾನ್ಪಡೆ ಹಾಗೂ ರಾಜೇಂದ್ರರವರು – ಕ್ರಮವಾಗಿ ಸಂಚಾಲಕರಾಗಿ ಹಾಗೂ ಸಹ–ಸಂಚಾಲಕರಾಗಿ, ಒಂದು ವೇದಿಕೆಯನ್ನೂ ಸಮಾವೇಶವು ಆಯ್ಕೆಮಾಡಿತು. 12 ಸದಸ್ಯರ ಈ ಸಮಿತಿಗೆ ದಲಿತ ಹಕ್ಕುಗಳ ಸಮಿತಿ ವತಿಯಿಂದ ಎನ್. ನಾಗರಾಜ ಉಸ್ತುವಾರಿಯಾಗಿ ಕಾರ್ಯ ನಿರ್ವಹಿಸಲು, ಈ ಸಮಾವೇಶವು ಆಯ್ಕೆ ಮಾಡಿತು. ಒಟ್ಟಾ–ರೆಯಾಗಿ 'ಬಸವ ಜಯಂತಿ'ಯಂದು ಒಂದು ಅರ್ಥಪೂರ್ಣವಾದ ಯಶಸ್ವಿ ಸಮಾವೇಶ ನಡೆದ ತೃಪ್ತಿ ಎಲ್ಲರಲ್ಲಿ ಮೂಡಿತ್ತು.

ವರದಿ – ಎನ್. ನಾಗರಾಜ

ನಾಳಿನ ಕಾರ್ಯಕ್ರಮಗಳು

- **ICDS ಬಲಪಡಿಸುವ ಕುರಿತು ವಿಚಾರಸಂಕಿರಣ ಮತ್ತು ಸಂಘಟನಾ ತರಬೇತಿ ಶಿಬಿರ** ಮೇ 8–10, ಚಿಂತಾಮಣಿ, ಅಂಗನವಾಡಿ ನೌಕರರ ಸಂಘ
- **ಮುಸ್ಲಿಂ ಯುವ ಸಮಾವೇಶ** ಮೇ 14–15, ಡಿ.ವೈ.ಎಫ್.ಐ. ಮಂಗಳೂರು
- **ಬರಗಾಲವನ್ನು ವಿರೋಧಿಸಿ ಮತ್ತು ಭೂಮಿ ಮತ್ತಿತರೇ ಪ್ರಶ್ನೆಗಳಿಗಾಗಿ 48 ತಾಸುಗಳ ರಾಜ್ಯಾದ್ಯಂತ ಪ್ರತಿಭಟನೆ** ಮೇ 17–18, ಕರ್ನಾಟಕ ಪ್ರಾಂತ ರೈತ ಸಂಘ
- **"ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ"** ಕಾರ್ಯಾಗಾರ, ಜೂನ್ 3–4, ಬೆಂಗಳೂರು
- **"ಸಂವಿಧಾನ ಉಳಿಸಿ ದೇಶಪ್ರೇಮಿ" ರಾಜ್ಯ ಸಮಾವೇಶ** ಜೂನ್ 4 ಮೈಸೂರು
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1–2, ಕುಂದಾಪುರ

JANASHAKTHI KANNADA VARA PATRIKE MAY 8-14, 2017 Price : Rs. 10/- Date of Publication : 5 May 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಕರ್ನಾಟಕದ ಕಾರ್ಮಿಕ ಕೇಂದ್ರಗಳು ಸೇರಿದಂತೆ ಹಲವು ಜಿಲ್ಲಾ/ತಾಲೂಕು ಕೇಂದ್ರಗಳಿಂದ ಈ ವರ್ಷದ ಮೇ ದಿನವನ್ನು ಸಂಭ್ರಮದಿಂದ ಆಚರಿಸಿದ ವರದಿಗಳು ಬಂದಿವೆ. ತುಮಕೂರು, ದಾವಣಗೆರೆ, ಗುಲ್ಬರ್ಗ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಬಿಜಾಪುರ, ಕೊಪ್ಪಳ ಮುಂತಾದ ಕೇಂದ್ರಗಳಿಂದ ಬಂದ ವರದಿ/ಚಿತ್ರಗಳು ಈ ಪುಟದಲ್ಲಿ ಇವೆ. ಇವಲ್ಲದೆ ಕ್ಯೂಬಾ ಮತ್ತು ಕಣ್ಣೂರಿನಲ್ಲಿ ನಡೆದ ಬೃಹತ್ ಮೇ ದಿನದ ರ್‍ಯಾಲಿಗಳ ಫೊಟೊಗಳೂ ಇವೆ.

ಕ್ಯೂಬಾದ ರಾಜಧಾನಿ ಹವಾನಾ ಮತ್ತು ಎಲ್ಲೆಡೆ ಆರುವರೆ ಲಕ್ಷ ಜನ ಮೇ ದಿನದ ಮೆರವಣಿಗೆಯಲ್ಲಿ ಭಾಗವಹಿಸಿದರು. ಕೇರಳದ ಕಣ್ಣೂರಿನ ಮೇದಿದ ರ್‍ಯಾಲಿಯ ಪೋಟೊಗಳೂ ಹವಾನಾದ ಮೇ ದಿನದ ಪೋ-ಟೊದಂತೆ ಕಾಣುತ್ತಿವೆ.



ಸಂಭ್ರಮದ ಮೇ ದಿನ









ದುಡಿಯುವ ವರ್ಗದ ಐಕ್ಯತೆಯನ್ನು ಸಾರಿ ಸಾರಿ ಹೇಳುವ ದಿನ

ದುಡಿದು ಸಮಾಜವನ್ನು ಮುನ್ನಡೆಸುತ್ತಿರುವ ಮತ್ತು ಸಮಾಜ ನೆಮ್ಮದಿಯಿಂದ ಇರುವಂತೆ ಮಾಡುತ್ತಿರುವ ಜನರ ಬಗ್ಗೆ ಪ್ರಭುತ್ವಗಳು ಕಡೆಗಣಿಸುತ್ತಿದೆ ಎಂದು ಚಲನಚಿತ್ರ ನಟ ಟಿ.ಎಚ್. ಹನುಮಂತೇಗೌಡ ವಿಷಾಧಿಸಿದರು. ಅವರು ವಿಶ್ವಕಾರ್ಮಿಕರ ದಿನಾಚರಣೆಯ ಅಂಗವಾಗಿ ಟೌನ್‌ಹಾಲ್‌ನಲ್ಲಿ ದಿನಾಂಕ 1-05-2017ರಂದು ಸೋಮವಾರ ಸಿಐಟಿಯು ತಾಲ್ಲೂಕು ಸಮಿತಿ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ, ಸಾರ್ವಜನಿಕ ಉದ್ದಿಮೆಗಳ ಉಳಿವಿಗಾಗಿ ಆಗ್ರಹಿಸಿ ಹಮ್ಮಿಕೊಂಡಿದ್ದ ವಿಶ್ವಕಾರ್ಮಿಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಪ್ರಗತಿಪರ ಚಿಂತಕ ಪ್ರೊ. ಕೆ. ದೊರೈರಾಜ್ ಮಾತನಾಡಿ ಜನರ ಸಮಸ್ಯೆಗಳನ್ನು ಅರಿತು ಕೆಲಸ ಮಾಡುವುದಾಗಿ ಸಂವಿಧಾನ ಆಶಯಗಳಿಗೆ ಬದ್ದವಾಗಿ ನಡೆದುಕೊಳ್ಳುವುದಾಗಿ ತಿಳಿಸಿದ ಕೇಂದ್ರ ಸರ್ಕಾರ ಇಂದು ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಮೂಲಕ ಕಾನೂನಿನ ಚಾಟಿಯನ್ನು ಬೀಸಿ ಕಾರ್ಮಿಕರ ಕುತ್ತಿಗೆಯ ಮೇಲೆ ಕೂತು ಸವಾರಿ ಮಾಡುತ್ತಿದೆ. ಎಂದರು.

ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯ ಅದ-್ಯಕ್ಷ ಎ. ನರಸಿಂಹಮೂರ್ತಿ, ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್‌ಮುಜೀಬ್ ಮಾತನಾಡಿದರು. ಇದಕ್ಕೂ ಮುನ್ನ ವಿವಿಧ ಕೈಗಾರಿಕೆಗಳ ಕಾರ್ಮಿಕರು ಕೈಗಾರಿಕೆಗಳ ಮುಂದೆ ಧ್ವಜಾರೋಹಣವನ್ನು ನಡೆಸಿ ಶಿರಾಗೇಟ್ ನಿಂದ ಬೈಕ್‌ರ್‍ಯಾಲಿ ಮೂಲಕ ಟೌನ್‌ಹಾಲ್ ತಲುಪಿದರು.







JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**